ಸೆಪ್ಟೆಂಬರ್ 28, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2004
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಕರ್ನಾಟಕ ರಾಜ್ಯ ಡಿಜಿಪಿಯವರಿಗೆ ನೇರ ದೂರು!



# ಸೌಜನ್ಯ ಕುಟುಂಬಕ್ಕೇ ಅಂಟಿತು ಬುರುಡೆ ಕತೆ!





ಎಕ್ಸ್‌ಕ್ಲುಸೀವ್ ಡಿಟೈಲ್ಸ್!!





## ನಿವೃತ್ತ ಎಸಿಪಿ ಹೆಚ್. ಸುಬ್ಬಣ್ಣನವರ ಮೇಲೆ ಅಟ್ಯಾಕ್!

## ಏರ್‌ಗನ್ ಗುಂಡೇಟಿಗೆ ಅಮಾಯಕ ಬಾಲಕ ಬಲಿ!





## ಕೋಲಾರದ ಬಾಡಿ ಬಿಲ್ಡರ್ ಸೂರಿ ಅಮೇರಿಕಾದಲ್ಲಿ ಸಾವು!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

**ಜನನ : 29-03-1954**    **ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

1) ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
2) ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
3) ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
4) ವಿಶ್ವಸೇವಾ ಕೇಂದ್ರ - ಉಪಾಧ್ಯಕ್ಷರು
5) ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
6) ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
7) ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
8) ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ಅದ್ದೂರಿಯಾಗಿ ನಡೆದಿತ್ತು 'ಪೊಲೀಸ್ ನ್ಯೂಸ್' ಪತ್ರಿಕೆಯ ಮೊದಲ ವಾರ್ಷಿಕೋತ್ಸವ ಸಮಾರಂಭ



ಸಮಾರಂಭವನ್ನುದ್ದೇಶಿಸಿ ಮಾತನಾಡುತ್ತಿರುವ ಸಂಸ್ಥಾಪಕ ಸಂಪಾದಕರಾದ ಲಯನ್ ಎಂ. ಮಲ್ಲಿಕಾರ್ಜುನಯ್ಯ

ಅದು 1984-85ರ ಸಾಲು. ಕರ್ನಾಟಕ ರಾಜ್ಯದಲ್ಲಿ ಅಪರಾಧ ವರದಿಗಳಿಗಾಗಿ ಒಂದು ವಾರಪತ್ರಿಕೆ ಅಂತ ಯಾವುದೂ ಇರಲಿಲ್ಲ. ಅಂದು ಇದ್ದ ಬೆರಳೆಣಿಕೆಯಷ್ಟು ದಿನಪತ್ರಿಕೆಗಳಲ್ಲಿ ಮಾತ್ರವೇ ಚುಟುಕು ಚುಟುಕಾಗಿ ಮೂಡಿ ಬರುತ್ತಿದ್ದ ಅಪರಾಧ ವರದಿಗಳನ್ನು ಓದಿಕೊಳ್ಳಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಅಪರಾಧ ವರದಿಗಳಿಗೋಸ್ಕರವೇ ಜನ್ಮತಳೆದ ಮೊಟ್ಟ ಮೊದಲ ಕ್ರೈಂ ವಾರಪತ್ರಿಕೆ 'ಪೊಲೀಸ್ ನ್ಯೂಸ್'!

ಶ್ರೀಯುತ ಎಂ. ಮಲ್ಲಿಕಾರ್ಜುನಯ್ಯನವರು ಪ್ರಾರಂಭಿಸಿದ ಈ ಪತ್ರಿಕೆ ವರ್ಷ ತುಂಬುವುದರೊಳಗೆ ಲಕ್ಷ ಪ್ರಚಾರ ಸಂಖ್ಯೆ ದಾಟಿದ್ದು ಇತಿಹಾಸ! ಅಂದಿನ ಪೊಲೀಸ್ ಅಧಿಕಾರಿಗಳು, ರಾಜಕೀಯ ಮುಖಂಡರು ಹಾಗೂ ಸಾರ್ವಜನಿಕ ವಲಯ ಬಹಳ ಸಂಭ್ರಮದಿಂದ ನಿಬ್ಬೆರಗಾಗಿ ಪತ್ರಿಕೆಯನ್ನು ಕೊಂಡು ಓದುತ್ತಿದ್ದರು. ಇಂಡಿಯನ್ ಎಕ್ಸ್‌ಪ್ರೆಸ್ ಸಮೀಪ ಕ್ವೀನ್ಸ್ ರಸ್ತೆಯಲ್ಲಿ ಮುದ್ರಣ-ಪ್ರಸರಣಾ ಕಾರ್ಯ ನಡೆಸುತ್ತಿದ್ದ 'ಪೊಲೀಸ್ ನ್ಯೂಸ್' ವಾರಪತ್ರಿಕೆ ರಾಜ್ಯದ ಮೂಲೆ ಮೂಲೆಗಳನ್ನು ತಲುಪಿತ್ತಲ್ಲದೆ, ಬಾಂಬೆ, ಚೆನ್ನೈ, ಕೇರಳ, ದುಬೈ, ಅಬುದಾಬಿ, ಮುಂತಾದ ರಾಜ್ಯ-ರಾಷ್ಟ್ರಗಳ ಕನ್ನಡಿಗರ ಕೈ ಸೇರಿತ್ತು. ತಾಲ್ಲೂಕು ಜಿಲ್ಲಾ ಮಟ್ಟದಿಂದ ಹಲವಾರು ಮಂದಿ ವರದಿಗಾರರು, ಪೊಲೀಸ್ ಅಧಿಕಾರಿಗಳು ಸುದ್ದಿಯನ್ನು ಕೊಟ್ಟು ಪತ್ರಿಕೆಯನ್ನು ಪೋಷಿಸಿದ್ದರು. ಮುಖ್ಯವಾಗಿ ಓದುಗ ದೊರೆಗಳು ಅಪಾರ ಸಂಖ್ಯೆಯಲ್ಲಿ ಸೃಷ್ಟಿಯಾಗಿ ಮೊದಲ ವರ್ಷ ತುಂಬಿ ಎರಡನೇ ವರ್ಷಕ್ಕೆ ಕಾಲಿಡುವಷ್ಟರಲ್ಲಿ ಒಂದೂವರೆ ಲಕ್ಷ ಪ್ರಸಾರ ಕಂಡಿದ್ದು ಪತ್ರಿಕೋದ್ಯಮ ಇತಿಹಾಸದಲ್ಲೇ ದಾಖಲೆ. 1986ರಲ್ಲಿ ಪತ್ರಿಕೆಯ ಮೊಟ್ಟ ಮೊದಲ ವಾರ್ಷಿಕೋತ್ಸವ ಸಮಾರಂಭ ಬಲು

☞ 4





ಸಂಪಾದಕ
**ಎಂ. ರಾಹುಲ್**

ನನ್ನ ಟೀಂ

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
ಈ. ರಾಜೇಶ್
ಪ್ರಸರಣಾಧಿಕಾರಿ :
ಜಿ. ವೀರನಗೌಡ

# ಮತ್ತೆ ಬೇಕಿತ್ತಾ ಜಾತಿ ಗಣತಿ...

ಲಿಂಗಾಯತರನ್ನು ಹಾಗೂ ಇತರೆ ಕೆಲ ಜಾತಿಗಳನ್ನು ಚೂರು ಚೂರು ಮಾಡಲು ಹೊರಟಿರುವ ಸಿದ್ದರಾಮಯ್ಯಗೆ ಅತಿ ಶೀಘ್ರದಲ್ಲೇ 'ಪ್ರತಿಫಲ' ಪ್ರಾಪ್ತವಾಗಲಿಯಾ? ಗೊತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಹೊತ್ತಲ್ಲಿ ಇಂತಹ ಸಮೀಕ್ಷೆ ನಡೆಸುವುದು ಬೇಕಿರಲಿಲ್ಲ. ಅವರು ತಮ್ಮ ಕೈಯಲ್ಲಿದ್ದ ಕಾಂತರಾಜ ಆಯೋಗದ ವರದಿಯನ್ನೇ ಜಾರಿಗೊಳಿಸಲಿಲ್ಲ. ಹೀಗಿದ್ದಾಗ ಮತ್ತೊಂದು ಆಯೋಗದ ವರದಿಯ ಅವಶ್ಯಕತೆಯೇ ಇರಲಿಲ್ಲ. ಈಗ ಮತ್ತೆ ಜಾತಿ ಸಮೀಕರಣ ಮಾಡಲು ಹೊರಟಿದ್ದಾರೆ. ಜನರ ತೆರಿಗೆ ಹಣದಲ್ಲಿ ಕೋಟಿ ಕೋಟಿ ಖರ್ಚು ಮಾಡಿ ಜಾತಿಗಣತಿ ನಡೆಸಲು ಹೊರಟಿರುವ ಸಿದ್ದರಾಮಯ್ಯ, ಇದನ್ನಾದರೂ ನ್ಯಾಯವಾಗಿ ಜಾರಿಗೊಳಿಸಬಲ್ಲರೇ.... ಎಂಬುದನ್ನು ಕಾದು ನೋಡಬೇಕು!



ಸಿದ್ದರಾಮಯ್ಯ ಸರಕಾರ ಇತ್ತೀಚೆಗಷ್ಟೇ ಒಳ ಮೀಸಲಾತಿ ವಿಚಾರದಲ್ಲಿ ಕೈಗೊಂಡ ನಿರ್ಧಾರವು ಅಸಮಾಧಾನಗಳನ್ನು ಸ್ಫೋಟಿಸಿ ಪ್ರತಿಭಟನೆಯ ಅಲೆಗಳನ್ನು ಎಬ್ಬಿಸಿವೆ. ಹೀಗಿರುವಾಗಲೇ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದಿಂದ ಎರಡನೇ ಸಮೀಕ್ಷೆ ನಡೆಸಲು ಹೊರಟಿರುವುದು ಕರ್ನಾಟಕದಲ್ಲಿ ಜಾತಿ ಜಂಜಾಟದ ಗೊಂದಲವನ್ನು ಮತ್ತೆ ಮುನ್ನೆಲೆಗೆ ತಂದಿದೆ.

ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ರಾಜ್ಯದ ಜನರ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಅರಿಯಲು ಸೆಪ್ಟೆಂಬರ್ 22 ರಿಂದ 15 ದಿನಗಳ ಸಮೀಕ್ಷೆ ಆರಂಭ ಆಗಲಿದೆ. ಇದಕ್ಕೆ ತಗಲುವ ವೆಚ್ಚ ಸುಮಾರು 450 ಕೋಟಿ ರೂಪಾಯಿ. ಸಮೀಕ್ಷೆ ದಿನ ಸಮೀಪಿಸುತ್ತಿರುವಂತೆ ಜಾತಿ, ಧರ್ಮದ ಹೆಸರನ್ನು ನಮೂದಿಸುವ ವಿಚಾರದಲ್ಲಿ ಆಯಾ ಜಾತಿಗಳಲ್ಲೇ ಭಿನ್ನಾಭಿಪ್ರಾಯಗಳು ಸ್ಫೋಟಿಸಿವೆ.





ಯಾವ ಜಾತಿ, ಧರ್ಮದ ಹೆಸರನ್ನು ಹೇಗೆ ಬರೆಸಬೇಕು ಎಂಬ ಬಿಸಿಬಿಸಿ ಚರ್ಚೆ, ವಾಗ್ವಾದ. ಆರೋಪ-ಪ್ರತ್ಯಾರೋಪಗಳ ಕಿಡಿ. ಈ ಸಮೀಕ್ಷೆಯಿಂದ ವೀರಶೈವ, ಲಿಂಗಾಯತ ಪ್ರತ್ಯೇಕ ಧರ್ಮದ ಚರ್ಚೆ ಮತ್ತೆ ಮುನ್ನೆಲೆಗೆ. ಅಲೆಅಲೆಯಾಗಿ ಎದ್ದಿರುವ ವಿವಾದದ ತರಂಗಗಳು.....

ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಹಿಂದುಳಿದ ವರ್ಗಗಳ ಆಯೋಗದಿಂದ ಸಮೀಕ್ಷೆ ನಡೆಸಿದ್ದರು. ಇದಕ್ಕೆ ಸುಮಾರು 165 ಕೋಟಿ ರೂಪಾಯಿ ವೆಚ್ಚವಾಯಿತು. ಎಚ್.ಕಾಂತರಾಜ ನೇತೃತ್ವದ ಆಯೋಗ ಸಮೀಕ್ಷೆ ನಡೆಸಿ ವರದಿ ಸಿದ್ದಪಡಿಸಿತು. ಆದರೆ, ಈ ವರದಿ ಸಲ್ಲಿಕೆಯಾಗಿದ್ದು ನಂತರ ಆಯೋಗದ ಅಧ್ಯಕ್ಷರಾಗಿ ನೇಮಕವಾದ ಮಾಜಿ ಸಚಿವ ಜಯಪ್ರಕಾಶ ಹೆಗ್ಡೆ ಅವರಿಂದ. ವರದಿ ಸ್ವೀಕರಿಸಿದವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಸಿದ್ದರಾಮಯ್ಯ.

ವರದಿಯ ಕೆಲವು ಅಂಶಗಳು ಬಹಿರಂಗವಾದವು. ಹಿಂದುಳಿದ ವರ್ಗಗಳ ನಾಯಕರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ನೀವು ಸಾಮಾಜಿಕ ನ್ಯಾಯದ ಪರವಾಗಿದ್ದೀರಿ. ನಿಮ್ಮಂಥ ನಾಯಕರೇ ವರದಿಯನ್ನು ಜಾರಿಗೊಳಿಸದಿದ್ದರೆ ಇನ್ಯಾರು ಜಾರಿಗೊಳಿಸುತ್ತಾರೆ. ಪಕ್ಷ ಅಧಿಕಾರಕ್ಕೆ ಬಂದರೆ ಇಡೀ ದೇಶದಲ್ಲಿ ಜಾತಿ ಗಣತಿ ಮಾಡುವುದಾಗಿ ರಾಹುಲ್ ಗಾಂಧಿ ಹೇಳಿದ್ದಾರೆ. ಹೀಗಾಗಿ, ವರದಿಯನ್ನು ಒಪ್ಪಬೇಕು ಎಂದು ಆಗ್ರಹಿಸಿದ್ದರು. ಸರಕಾರಕ್ಕೆ ಸಂಕಷ್ಟ ಬಂದರೂ ಪರವಾಗಿಲ್ಲ, ವರದಿ ಅಂಗೀಕರಿಸಿ ಜಾರಿಗೊಳಿಸಿ ಎಂದು ಹೇಳಿದ್ದೇವೆ ಎಂದಿದ್ದರು ಕಾಂಗ್ರೆಸ್ಸಿನ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್.

ಸಿದ್ದರಾಮಯ್ಯ ಈ ವರದಿ ಜಾರಿಗೆ ಮುಂದಾದರು. ಸಾಮಾಜಿಕ ನ್ಯಾಯದ ಬದ್ಧತೆಯ ಮಾತುಗಳನ್ನು ಆಡಿದರು. ಇದು ಕೇವಲ ಹಿಂದುಳಿದ ವರ್ಗಗಳ ಜಾತಿ ಸಮೀಕ್ಷೆ ಅಲ್ಲ, ರಾಜ್ಯದ ಏಳು ಕೋಟಿ ಕನ್ನಡಿಗರ ಸಮೀಕ್ಷೆ. ದೇಶದಲ್ಲಿ ಇಂತಹ ಸಮೀಕ್ಷೆ ನಡೆಸಿದ ಪ್ರಥಮ ರಾಜ್ಯ ಕರ್ನಾಟಕ ಅಂದರು. ವರದಿ ಜಾರಿಯ ಕಾಲ ಸನಿಹದಲ್ಲಿದೆ ಎಂಬ ವಾತಾವರಣವೂ ನಿರ್ಮಾಣವಾಯಿತು. ಆದರೆ, ವರದಿ ಜಾರಿಗೆ ಕಾಂಗ್ರೆಸ್‌ನಲ್ಲೇ ಪ್ರಭಾವಿ ನಾಯಕರು ವಿರೋಧಿಸಿದರು. ಸಾರ್ವಜನಿಕ ವಲಯದಲ್ಲಿ ಪ್ರತಿಭಟನೆಯ ಕೂಗು ಎದ್ದಿತು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಾಂಗ್ರೆಸ್ ನಾಯಕರಿಗೆ ತಾಕತ್ತು ಇದ್ದರೆ ವಿಧಾನಸಭೆ ವಿಸರ್ಜಿಸಿ ಜಾತಿ ಜನಗಣತಿಯನ್ನು ಮುಂದಿಟ್ಟುಕೊಂಡು ಮಧ್ಯಂತರ ಚುನಾವಣೆ ಎದುರಿಸಲಿ ಎಂದು ಸವಾಲು ಎಸೆದರು. ಸಿದ್ದರಾಮಯ್ಯ ಸಂಪುಟದಲ್ಲೇ ಭಿನ್ನಾಭಿಪ್ರಾಯಗಳು ತೀವ್ರಗೊಂಡವು.

ಕೊನೆಗೆ ಕಾಂಗ್ರೆಸ್ ಹೈಕಮಾಂಡ್ ಮಧ್ಯೆ ಪ್ರವೇಶಿಸಿತು. ವರದಿ ಜಾರಿಗೆ ಹಿಂದೆ ಸರಿಯಿತು. ಸಿದ್ದರಾಮಯ್ಯ ಕೈ ಕಟ್ಟಿ ನಿಂತರು.

☞ 4

# ನಿವೃತ್ತ ಎಸಿಪಿ ಸುಬ್ಬಣ್ಣ ಮೇಲೆ ದಾಳಿ, ಚಿನ್ನಾಭರಣ ದರೋಡೆ!

**ಬೆಂಗಳೂರಿನ ಹೆಬ್ಬಾಳದಲ್ಲಿ ನಿವೃತ್ತ ಎಸಿಪಿ ಎಚ್.ಸುಬ್ಬಣ್ಣ ಅವರು ವಾಕಿಂಗ್ ಮಾಡುತ್ತಿದ್ದ ವೇಳೆ ಮೂವರು ದುಷ್ಕರ್ಮಿಗಳು ಅವರ ಮೇಲೆ ಚಾಕುವಿನಿಂದ ದಾಳಿ ಮಾಡಿ ಸುಬ್ಬಣ ಮೈ ಮೇಲಿದ್ದ 8 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿದ್ದರು! ಗಾಯಗೊಂಡ ಸುಬ್ಬಣ್ಣ ಸ್ಥಳೀಯ ಆಸ್ಪತ್ರೆಗೆ ದಾಖಲಾಗಿದ್ದು, ಸಂಜಯನಗರ ಪೊಲೀಸರು ಇದೀಗ ಆ ದರೋಡೆಕೋರರನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ.**




ಆರೋಪಿಗಳಾದ ಸೈಯದ್ ಇರ್ಫಾನ್, ಸೈಯದ್ ಮೊಶಿನ್, ಮೊಹಮ್ಮದ್ ಸಲ್ಮಾನ್

ಬೆಂಗಳೂರಿನಲ್ಲಿ ಹಗಲಲ್ಲೇ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರ ಮೇಲೆ ದಾಳಿ ನಡೆಸಿ ದರೋಡೆ ಮಾಡಿದ್ದ ಘಟನೆ ನಡೆದಿದೆ! ಯಸ್, ಡೇರಿಂಗ್ ಪೊಲೀಸ್ ಆಫೀಸರ್ ಎಂದೇ ಹೆಸರುವಾಸಿಯಾಗಿದ್ದ ಎಚ್. ಸುಬ್ಬಣ್ಣ ಅವರ ಮೇಲೆಯೇ ಚಾಕುವಿನಿಂದ ಹಲ್ಲೆ ನಡೆಸಿ ದರೋಡೆ ಮಾಡಲಾಗಿದೆ!

ಕಳೆದ ಸೆಪ್ಟೆಂಬರ್ ಒಂದರಂದು ನಿವೃತ್ತ ಎಸಿಪಿ ಸುಬ್ಬಣ್ಣ, ಬೆಂಗಳೂರಿನ ಹೆಬ್ಬಾಳದ ವೆಟರಿನರಿ ಆಸ್ಪತ್ರೆ ಬಳಿ ಬೆಳಿಗ್ಗೆ ವಾಕಿಂಗ್ ಮಾಡುತ್ತಿದ್ದಾಗ ಈ ದರೋಡೆ ನಡೆದಿತ್ತು! ಮೂವರು ಕಳ್ಳರು ಅವರ ಮೇಲೆರಗಿ, ಚಾಕುವಿನಿಂದ ದಾಳಿ ನಡೆಸಿ ಸುಬ್ಬಣ್ಣ ಅವರ ಮೈ ಮೇಲಿದ್ದ ಚಿನ್ನದ ಸರ,

☞ 14



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸುಬ್ಬಣ್ಣ

# ಮತ್ತೆ ಬೇಕಿತ್ತಾ ಜಾತಿ ಗಣತಿ...

3 ☞

ಕಾಂತರಾಜ ಆಯೋಗದ ವರದಿಯ ದತ್ತಾಂಶಗಳು ಹತ್ತು ವರ್ಷ ಹಳೆಯವು. ಹೀಗಾಗಿ, ಮತ್ತೊಂದು ಸಮೀಕ್ಷೆ ಎಂದರು ಸಿದ್ದರಾಮಯ್ಯ. ತಳಸಮುದಾಯದವರು, ಹಿಂದುಳಿದ ವರ್ಗದವರು ಬೇಸತ್ತರು. ಇದು ಸಿದ್ದರಾಮಯ್ಯ ಅವರಿಗೆ ರಾಜಕೀಯವಾಗಿ ಹಿನ್ನಡೆ ತಂದಿತು. ಕಾಂತರಾಜ ಆಯೋಗದ ವರದಿ ಕಪಾಟು ಸೇರಿತು. ಕೈಯಲ್ಲಿದ್ದ ಕಾಂತರಾಜ ಆಯೋಗದ ವರದಿ ಜಾರಿಗೊಳಿಸದ ಸಿದ್ದರಾಮಯ್ಯ ಸರಕಾರ ಈಗ ಎರಡನೇ ಸಮೀಕ್ಷೆ ನಡೆಸಲು ಹೊರಟಿದೆ.




ಈಗ ಆಯೋಗದ ನೇತೃತ್ವ ವಹಿಸಿರುವವರು ಮಧುಸೂದನ್ ಆರ್. ನಾಯಕ್. ಕರ್ನಾಟಕದ ಎರಡು ಕೋಟಿ ಕುಟುಂಬಗಳ ಸಮೀಕ್ಷೆ ನಡೆಯಲಿದೆ. ರಾಜ್ಯದ ಎಲ್ಲ ವರ್ಗಗಳ, ಜಾತಿಗಳ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಸ್ಥಿತಿಗತಿಗಳ ಕುರಿತು ಸಮಗ್ರ ಸಮೀಕ್ಷೆ ಮೂಲಕ ಅಂಕಿಅಂಶಗಳನ್ನು ಸಂಗ್ರಹಿಸಲಿದೆ. ಈ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಪೂರಕ ಕಾರ್ಯಕ್ರಮಗಳನ್ನು ರೂಪಿಸಬೇಕು.

ಸಮೀಕ್ಷೆಯ ದಿನ ಹತ್ತಿರವಾದಂತೆ ವೀರಶೈವ, ಲಿಂಗಾಯತರಲ್ಲಿ ಪ್ರತ್ಯೇಕ ಧರ್ಮದ ಪ್ರಶ್ನೆ ಮತ್ತೆ ಎದ್ದಿದೆ. ವೀರಶೈವ ಲಿಂಗಾಯತ ಸಮಾಜದಲ್ಲಿ ಗೊಂದಲಗಳು ಮೂಡಿವೆ. ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದೇ ನಮೂದಿಸಬೇಕು. ವೀರಶೈವ ಲಿಂಗಾಯತ ಹಾಗೂ ಹಿಂದೂಗಳು ನಮೂದಿಸಬಾರದು ಎಂದು ಲಿಂಗಾಯತ ಮಠಾಧೀಶರ ಒಕ್ಕೂಟ, ಜಾಗತಿಕ ಲಿಂಗಾಯತ ಮಹಾಸಭಾ, ರಾಷ್ಟ್ರೀಯ ಬಸವದಳ, ಲಿಂಗಾಯತ ಧರ್ಮ ಮಹಾಸಭಾ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹೇಳಿದೆ. ಲಿಂಗಾಯತ ಪ್ರತ್ಯೇಕ ಸ್ವತಂತ್ರ ಧರ್ಮ ಎಂಬುದು ಅವರ ವಾದ.

ಆದರೆ, ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘವು ಸಮೀಕ್ಷೆಯಲ್ಲಿ ಲಿಂಗಾಯತ ಪಂಚಮಸಾಲಿಗಳು ಧರ್ಮವನ್ನು ಹಿಂದೂ ಮತ್ತು ಜಾತಿಯನ್ನು ಲಿಂಗಾಯತ ಪಂಚಮಸಾಲಿ ಎಂದು ನಮೂದಿಸುವಂತೆ ಕರೆ ನೀಡಿದೆ. ಯಾವುದೇ ಉಪಜಾತಿ ದಾಖಲಿಸುವ ಅವಶ್ಯಕತೆ ಇಲ್ಲ ಎಂದಿದೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಂಕರ ಬಿದರಿ ಅವರು, ಕಾನೂನು ಪ್ರಕಾರ ನಾವು ಹಿಂದೂಗಳು. ಜಾತಿ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದು ನಮೂದಿಸಬೇಕೆಂಬುದು ನಮ್ಮ ನಿಲುವು. ಹುಬ್ಬಳ್ಳಿಯಲ್ಲಿ ಸೆಪ್ಟೆಂಬರ್ 19 ರಂದು ನಡೆಯುವ ವೀರಶೈವ ಲಿಂಗಾಯತ ಏಕತಾ ಸಮಾವೇಶದ ನಿರ್ಣಯವನ್ನು ಕಾದು ನೋಡೋಣ ಎನ್ನುತ್ತಾರೆ.

ವೀರಶೈವ-ಲಿಂಗಾಯತ ಸಮಾಜದಲ್ಲಿ ತಲೆದೋರಿರುವ ಈ ಭಿನ್ನಾಭಿಪ್ರಾಯಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರತ್ತಲೇ ತಿರುಗುತ್ತಿವೆ. ವೀರಶೈವ- ಲಿಂಗಾಯತ ಸಮಾಜವನ್ನು ಒಡೆಯಲು ಸಿದ್ದರಾಮಯ್ಯ ಮತ್ತೆ ಹೊರಟಿದ್ದಾರೆ ಎಂದು ಆ ಸಮಾಜದ ಬಿಜೆಪಿ ಮುಖಂಡರು ದೂರಿದ್ದಾರೆ. ಈ ಹಿಂದೆ ಇಂತಹ ಪ್ರಯತ್ನ ಮಾಡಿ ರಾಜ್ಯದಲ್ಲಿ ಕಾಂಗ್ರೆಸ್ ನೆಲಕಚ್ಚಿತು ಎಂದು ನೆನಪು ಮಾಡಿದ್ದಾರೆ.


ಈ ಮಧ್ಯೆ ಈ ಬಾರಿ ಸಮೀಕ್ಷೆಯಲ್ಲಿ ಜಾತಿಗಳಿಗೆ ಕ್ರಿಶ್ಚಿಯನ್ ಹೆಸರು ಸೇರಿಸಿರುವುದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಈ ಹಿಂದೆ ನಡೆದ ಆಯೋಗಗಳ ಸಮೀಕ್ಷೆಗಳಲ್ಲಿ ಇಂತಹ ಯಾವುದೇ ಜಾತಿಯ ಹೆಸರುಗಳು ಇರಲಿಲ್ಲ, ಎರಡು ತಿಂಗಳ ಹಿಂದೆ ನ್ಯಾ.ನಾಗಮೋಹನದಾಸ್ ಆಯೋಗದ ಸಮೀಕ್ಷೆಯಲ್ಲಿಯೂ ದಲಿತ ಕ್ರೈಸ್ತ ಜಾತಿಗಳು ಇರಲಿಲ್ಲ. ಆದರೆ, ಸೆ.22 ರಿಂದ ಆರಂಭವಾಗಲಿರುವ ಹಿಂದುಳಿದ ವರ್ಗಗಳ ಆಯೋಗ'ದ ಸಮೀಕ್ಷೆಯಲ್ಲಿ ಈ ಜಾತಿಗಳು ಸೇರ್ಪಡೆಯಾಗಿದ್ದು ಹೇಗೆ? ಇದು ಗೊಂದಲ ಉಂಟು ಮಾಡುವುದಿಲ್ಲವೇ? ಆದರೆ, ಸಿಎಂ ಸಿದ್ದರಾಮಯ್ಯ ಇದನ್ನು ಸಮರ್ಥಿಸಿಕೊಂಡಿದ್ದಾರೆ ನೋಡ್ರಿ! ಸಿದ್ದರಾಮಯ್ಯ ಅವರ ಈ ನಡೆ ಕಾಂಗ್ರೆಸ್ಸಿನ ಒಂದು ವರ್ಗದಲ್ಲೇ ಅಚ್ಚರಿ ಮೂಡಿಸಿದೆ.




ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಆಯೋಗಕ್ಕೆ ಇತಿಹಾಸವೇ ಇದೆ. ಡಿ.ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ 8 ಆಗಸ್ಟ್ 1972ರಂದು ಮೊದಲ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿದರು. ವಕೀಲರಾಗಿದ್ದ ಲಕ್ಷ್ಮಣ ಜಿ. ಹಾವನೂರು ಆಯೋಗದ ಅಧ್ಯಕ್ಷರಾದರು. ಹಾವನೂರು ಅವರು ಶೋಷಿತ ವರ್ಗಗಳ ಏಳಿಗೆಗಾಗಿ ಸದಾ ಹಂಬಲಿಸುತ್ತಿದ್ದವರು. ಆ ನಿಟ್ಟಿನಲ್ಲಿ ದುಡಿದವರು. ಹಾವನೂರು ಆಯೋಗ ಮೂರು ವರ್ಷಗಳಿಗೂ ಹೆಚ್ಚು ಕಾಲ ಸಮೀಕ್ಷೆ ನಡೆಸಿ ರಾಜ್ಯ ಸರಕಾರಕ್ಕೆ 19 ನವೆಂಬರ್ 1975 ರಂದು ವರದಿ ಸಲ್ಲಿಸಿತು. ಕೆಲವು ಸಮುದಾಯಗಳು ಈ ವರದಿಗೆ ಪ್ರತಿಭಟನೆ ನಡೆಸಿದವು. 1977ರಲ್ಲಿ ಮೀಸಲಾತಿ ಆದೇಶ ಹೊರಬಿತ್ತು. ದೇವರಾಜ ಅರಸರು ಹಿಂದುಳಿದ ವರ್ಗಗಳ ಹೃದಯ ಸಾಮ್ರಾಟರಾದರು. ಹಾವನೂರು ರಾಜ್ಯದಲ್ಲಿ ಮನೆಮಾತಾದರು. ಇದೆಲ್ಲ ಗೊತ್ತಿಲ್ಲವೇ ಸಿದ್ದರಾಮಯ್ಯಗೆ? ಎಲ್ಲಾ ಗೊತ್ತಿದೆ... ಆದರೂ ತಮ್ಮ ದರ್ಬಾರ್‌ನಲ್ಲಿ ಮತ್ತೇನೋ ಮಾಡಲು ಹೊರಟಿದ್ದಾರೆ! ಅಂದಹಾಗೆ, ಲಿಂಗಾಯತ, ಗೌಡ, ರೆಡ್ಡಿ ಮುಂತಾದ ಜಾತಿಗಳ ಜೊತೆ ಅಂಟಿಕೊಂಡಿದ್ದ ಸುಮಾರು 47 'ಕ್ರಿಶ್ಚಿಯನ್' ಉಪಜಾತಿಗಳನ್ನು ಕಡೆಗಳಿಗೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತೆಗೆಸಿದ್ದಾರೆಂದು ತಿಳಿದು ಬಂದಿದೆ. ಮೊನ್ನೆಯಷ್ಟೇ ಈ ಕೆಲಸ ಮಾಡಲು ಒಪ್ಪದಿದ್ದ ಆಯೋಗ, ಈಗ ಅದ್ಹೇಗೆ ಒಪ್ಪಿಕೊಂಡಿತೋ ಗೊತ್ತಿಲ್ಲ. ಈ ನಡುವೆ ಈ ಹೊಸ ಜಾತಿಗಣತಿ ಕಾರ್ಯ ನಿಲ್ಲಿಸಬೇಕೆಂದು ಹೈಕೋರ್ಟ್‌ಗೆ ಎರಡು-ಮೂರು ಪಿಐಎಲ್ ಹೋಗಿವೆ. ಈ ಸಂಬಂಧ ವಿಚಾರಣೆ ಶುರುವಾಗಿದೆ. ತೀರ್ಪು ಇನ್ನೂ ಹೊರ ಬಿದ್ದಿಲ್ಲ.... ಇನ್ನೊಂದೆಡೆ ಸಿದ್ದರಾಮಯ್ಯ ಸರ್ಕಾರ ರಚಿಸಿರುವ ಆಯೋಗ ಈ ಸೋಮವಾರದಿಂದಲೇ ಜಾತಿಗಣತಿ ಕಾರ್ಯ ಶುರುವಚ್ಚಿಕೊಂಡಿದೆ....

-ಸಂ.

## 'ಪೊಲೀಸ್ ನ್ಯೂಸ್' ಪತ್ರಿಕೆಯ ಮೊದಲ ವಾರ್ಷಿಕೋತ್ಸವ ಸಮಾರಂಭ


ವಾರ್ಷಿಕೋತ್ಸವಕ್ಕೆ ಆಗಮಿಸಿದ್ದ ಹಿರಿಯ ಪೊಲೀಸ್ ಅಧಿಕಾರಿ ಟಿ.ವಿ.ಆರ್. ಟ್ಯಾಗೋರ್


ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅಂದಿನ ಮುಖ್ಯಮಂತ್ರಿ ಆರ್. ಗುಂಡೂರಾವ್

2 ☞

ಅದ್ದೂರಿಯಾಗಿ ನೆರವೇರಿತ್ತು. ಸಂಜೆವಾಣಿ ಪತ್ರಿಕೆಯ ಮುಂಭಾಗದ ಮೈದಾನದಲ್ಲಿ ಸಹಸ್ರಾರು ಜನ ಸೇರಿದ್ದರು. ಅಂದಿನ ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಅವರ ಸಚಿವ ಸಂಪುಟದ ಮಂತ್ರಿ, ಗುರುಪಾದಸ್ವಾಮಿ ಹಾಗೂ ಅನೇಕ ಸಚಿವರು, ಶಾಸಕರು ಸಮಾರಂಭಕ್ಕೆ ಆಗಮಿಸಿದ್ದರು. ಹಿರಿಯ ಪೊಲೀಸ್ ಅಧಿಕಾರಿ ಕೆ.ವಿ.ಆರ್. ಟ್ಯಾಗೋರ್ ಮತ್ತಿತರೆ ಪೊಲೀಸ್ ಅಧಿಕಾರಿಗಳು ಸಮಾರಂಭಕ್ಕೆ ಆಗಮಿಸಿ ಸಂಭ್ರಮದಿಂದ ಮಾತನಾಡಿದ್ದರು. ವಾರ್ಷಿಕೋತ್ಸವದ ಪ್ರಯುಕ್ತ ಅಂದು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಅಂದು ರಾಜ್ಯವನ್ನು ಕಾಡುತ್ತಿದ್ದ ಹಲವಾರು ಸಮಸ್ಯೆಗಳ ಬಗ್ಗೆ ಸಮಾರಂಭದಲ್ಲಿ ನೆರೆದಿದ್ದ ಗಣ್ಯರು ಮಾತನಾಡಿ ಪರಿಹಾರ ಸೂಚಿಸಿದ್ದರು. ಮುಖ್ಯಮಂತ್ರಿ ಆರ್. ಗುಂಡೂರಾವ್‌ರವರು ಬಹಳ ವಿಸ್ಮಯದಿಂದ ಎಲ್ಲರ ಭಾಷಣವನ್ನು ಆಲಿಸಿ ಕಡೆಯಲ್ಲಿ ತಾವೂ ಮಾತನಾಡಿದ್ದರು. 'ಪೊಲೀಸ್ ನ್ಯೂಸ್' ಸಂಸ್ಥಾಪಕ ಸಂಪಾದಕರ ಕಾರ್ಯವೈಖರಿಯನ್ನು ಮನಸಾರೆ ಶ್ಲಾಘಿಸಿ, ತಮ್ಮ ಕೈಯಾರೇ ವರದಿಗಾರರಿಗೆ, ತಂತ್ರಜ್ಞರಿಗೆ ಹಾಗೂ ವಿತರಕರಿಗೆ ನೆನಪಿನ ಕಾಣಿಕೆ ವಿತರಿಸಿದ್ದರು. ಸಂಪಾದಕ ಮಲ್ಲಿಕಾರ್ಜುನಯ್ಯನವರು ತಮ್ಮ ಸಿಬ್ಬಂದಿಯ ಸಹಕಾರವನ್ನು ಮನಸಾರೆ ಹೊಗಳಿ ಎಲ್ಲರಿಗೂ ಗಿಫ್ಟ್ ನೀಡಿ ಸನ್ಮಾನಿಸಿದ್ದರು. ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಓದುಗರಿಗೆ ಪ್ರೀತಿಯಿಂದ ಔತಣಕೂಟ ಏರ್ಪಡಿಸಿದ್ದು, ಎಲ್ಲರೂ ನಮ್ಮೊಡನೆ ಬೆರೆತು ಸಂಭ್ರಮ ಪಟ್ಟಿದ್ದು ಕಣ್ಮುಂದೆಯೇ ಇದೆ. 40 ವರ್ಷಗಳು ಗತಿಸಿದರೂ ಅಂದಿನ ಆ ಸಂಭ್ರಮವನ್ನು ಇಂದಿಗೂ ಮರೆಯಲು ಸಾಧ್ಯವಿಲ್ಲ.

ಅಂದಿನ ಸಂಪಾದಕರ ಒಡನಾಡಿಗಳು, ದಕ್ಷ ಪೊಲೀಸ್ ಅಧಿಕಾರಿಗಳು ಆದ ಶ್ರೀ ಕೆ.ಸಿ. ರಾಮಮೂರ್ತಿ, ಎಲ್. ರೇವಣಸಿದ್ದಯ್ಯ, ಕೆಂಪಯ್ಯ, ಸಾಂಗ್ಲಿಯಾನ, ಶಂಕರ ಮಹಾದೇವ ಬಿದರಿ, ಜ್ಯೋತಿಪ್ರಕಾಶ್ ಮಿರ್ಜಿ..... ಮುಂತಾದವರು ಪೊಲೀಸ್ ನ್ಯೂಸ್ ಪತ್ರಿಕೆಗೆ ನೀಡಿದ ಸಹಕಾರ ಅಪಾರ. ನಮ್ಮ ಸಂಪಾದಕರು ಇವರೆಲ್ಲರ ಸಹಕಾರದಿಂದ ಹಮ್ಮಿಕೊಂಡ ಕಾರ್ಯಕ್ರಮಗಳು ಒಂದೆರಡಲ್ಲ, ಪ್ರತಿ ತಿಂಗಳು ಅಪರಾಧ ತಡೆ ಮಾಸಾಚರಣೆ ಆಚರಿಸಿದ್ದರು ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು. ನಂತರ ಇದನ್ನು ಸರ್ಕಾರ ಮುಂದುವರೆಸಿದ್ದು ಇತಿಹಾಸ


ನಮ್ಮ ಕಚೇರಿಯಲ್ಲಿ ಅಂದಿನ ಮಂತ್ರಿ ಗುರುಪಾದಸ್ವಾಮಿ


'ಸಂಜೆವಾಣಿ ಪತ್ರಿಕೆ ಸಂಸ್ಥಾಪಕರು ದಿ|| ಬಿ.ಎಸ್. ಮಣಿ

**(ಸಂಪಾದಕರು ನಡೆದು ಬಂದ ದಾರಿ... ಮುಂದುವರೆಯಲಿವೆ)**

# ಕೊಡಗಿನ ವಿರಾಜಪೇಟೆಯ ಬ್ಯೂಟಿ ಪಾರ್ಲರ್‌ನಲ್ಲಿ ಮಾಂಸ ದಂಧೆ!



**ಅಂದಿನಿಂದ ಇಂದಿನವರೆಗೂ ವೇಶ್ಯಾವಾಟಿಕೆ ನಡೆಯುತ್ತಲೇ ಬಂದಿದೆ. ಅದನ್ನು ಹತ್ತಿಕ್ಕುವುದು ಸಾಧ್ಯವಾಗದ ಮಾತಾಗಿದೆ. ಕಾಲ ಕಾಲಕ್ಕೆ ಅದು ಮಗ್ಗಲು ಬದಲಿಸುತ್ತಾ ಸಾಗುತ್ತಿದ್ದು, ಇವತ್ತಿನ ಹೈಟೆಕ್ ಜೀವನದಲ್ಲಿ ಅದು ಕೂಡ ಬಹಳಷ್ಟು ಜನರಿಗೆ ಆದಾಯದ ಕೇಂದ್ರವಾಗುತ್ತಿದೆ. ಇದು ಬೇರೆ, ಬೇರೆ ರೀತಿಯಲ್ಲಿ ನಡೆಯುತ್ತಿದ್ದು, ಎಲ್ಲೆಡೆ ಪಸರಿಸಲಾರಂಭಿಸಿದೆ. ಇದರಲ್ಲಿ ಮುಳುಗಿ ದುಂಡಗಾಗಿರುವ ದಂಧೆಕೋರರು ಈ ವಿಷವರ್ತುಲಕ್ಕೆ ಅಮಾಯಕ ಹೆಣ್ಣುಮಕ್ಕಳನ್ನು ಬೀಳಿಸಿ ಅವರ ಮೂಲಕವೇ ದಂಧೆ ನಡೆಸಿ ದುಂಡಗಾಗುತ್ತಿದ್ದಾರೆ. ಈ ದಂಧೆ ಇದೀಗ ಕೊಡಗಿಗೂ ವ್ಯಾಪಿಸಿರುವುದು ಜನರನ್ನು ಬೆಚ್ಚಿಬೀಳಿಸುವಂತೆ ಮಾಡಿದೆ.**

**ಕೊಡಗು**

✍ಬಿ.ಎಂ. ಲವಕುಮಾರ್

ಪೊಲೀಸರ ಮತ್ತು ಜನರ ಕಣ್ಣಿಗೆ ಮಣ್ಣೆರೆಚುವ ಸಲುವಾಗಿಯೇ ಹಲವು ಕ್ಷೇತ್ರವನ್ನು ಇದಕ್ಕೆ ಬಳಸಿಕೊಳ್ಳುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಹೋಟೆಲ್ ಗಳಲ್ಲಿ ಆಯುರ್ವೇದಿಕ್ ಮಸಾಜ್ ಮತ್ತು ಸ್ಪಾ, ಬ್ಯೂಟಿಪಾರ್ಲರ್‌ಗಳನ್ನು ತೆರೆದು ಅಲ್ಲಿ ವೇಶ್ಯವಾಟಿಕೆ ನಡೆಸುವುದು ಹೊಸದೇನಲ್ಲ. ಆದರೆ ಇದರ ವ್ಯಾಪ್ತಿ ಎಲ್ಲೆಡೆಗೆ ವಿಸ್ತರಣೆಯಾಗುತ್ತಿರುವುದು ಆತಂಕಕಾರಿಯಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಹಣ ಮಾಡುವುದಕ್ಕೆ ವೇಶ್ಯಾವಾಟಿಕೆ ಸುಲಭ ದಾರಿಯಾಗಿರುವುದರಿಂದಾಗಿ ಬೇರೆ, ಬೇರೆ ಮಾರ್ಗಗಳನ್ನು ಹುಡುಕಿಕೊಂಡು ದಂಧೆ ನಡೆಸುವವರ ಸಂಖ್ಯೆ ಹೆಚ್ಚಾಗುತ್ತಿದೆ. ಹೀಗಾಗಿ ಯಾವುದನ್ನು ನಂಬಬೇಕು ಎಂಬುದೇ ತಿಳಿಯದಂತಾಗಿದೆ.

ಈಗಾಗಲೇ ಬಾಂಗ್ಲಾ ಸೇರಿದಂತೆ ಉತ್ತರ ಭಾರತದ ಹೆಣ್ಣುಮಕ್ಕಳು ವೇಶ್ಯಾವಾಟಿಕೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದು, ಅವರನ್ನು ನಿಗದಿತ ಖರೀದಿಸಿಟ್ಟುಕೊಳ್ಳುವ ತಲೆಹಿಡುಕರು ಬಳಿಕ ಬೇರೆಡೆಗೆ ಅವರನ್ನು ಸಾಗಿಸುತ್ತಾರೆ. ಹೆಣ್ಮಕ್ಕಳ ಬಡತನವನ್ನೇ ಬಂಡವಾಳ ಮಾಡಿಕೊಂಡಿರುವ ತಲೆಹಿಡುಕರು ಕೆಲಸ ನೀಡುವ ನೆಪವೊಡ್ಡಿ ಕರೆತಂದು ಮೈಮಾರುವುದಕ್ಕೆ ಬಿಡುತ್ತಿದ್ದಾರೆ. ಸಾಮಾನ್ಯವಾಗಿ ಪೊಲೀಸರು ದಾಳಿ ಮಾಡಿದಾಗ ಸಿಕ್ಕಿ ಬೀಳುವ ಹೆಣ್ಮಕ್ಕಳೆಲ್ಲ ಉತ್ತರ ಭಾರತದವರೇ ಆಗಿರುತ್ತಾರೆ. ಆದರೆ ಇವರನ್ನು ಇಲ್ಲಿಗೆ ಸಾಗಿಸುತ್ತಿರುವವರು ಯಾರು ಎಂಬುದು ಮಾತ್ರ ನಿಗೂಢವಾಗಿಯೇ ಉಳಿದು ಹೋಗುತ್ತಿದೆ.



ಎಸ್ಪಿ ರಾಮರಾಜನ್

ಇದೆಲ್ಲದಕ್ಕಿಂತ ಹೆಚ್ಚಾಗಿ ಒಮ್ಮೆ ವೇಶ್ಯಾವಾಟಿಕೆ ಕೂಪದಲ್ಲಿ ಸಿಕ್ಕಿ ಬೀಳುವ ಮಹಿಳೆಯರನ್ನು ರಕ್ಷಿಸಿದರೂ ಅವರು ಮತ್ತೆ ಅದನ್ನೇ ಮಾಡುತ್ತಾರೆ. ಇನ್ನು ಮಸಾಜ್ ಸೆಂಟರ್‌ಗಳಂತು ನಗರದಿಂದ ಹಳ್ಳಿಕಡೆ ಮುಖ ಮಾಡಿದ್ದು, ನಗರ, ಜಿಲ್ಲೆ ಹೀಗೆ ಗಡಿದಾಟಿ ಎಲ್ಲೆಡೆ ಸದ್ದಿಲ್ಲದೆ ತಲೆ ಎತ್ತುತ್ತಿವೆ. ಮೇಲ್ನೋಟಕ್ಕೆ ಇವುಗಳನ್ನು ಮಸಾಜ್ ಸೆಂಟರ್ ಅಂದುಕೊಂಡರೆ ತಪ್ಪಾಗಿ ಬಿಡುತ್ತದೆ. ಅಲ್ಲಿ ನಡೆಯುವ ವ್ಯವಹಾರ ಬೇರೆಯದ್ದೇ ಆಗಿರುತ್ತದೆ. ಇಲ್ಲಿ ದುಡ್ಡು ಆಗುವುದು ಗಂಡಸರಿಗೆ ಮಸಾಜ್ ಮಾಡುವುದರಿಂದ ಎನ್ನುವುದರಲ್ಲಿ ಎರಡು ಮಾತಿಲ್ಲ.

ಹೆಣ್ಮಕ್ಕಳ ಕೈನಲ್ಲಿ ಮಸಾಜ್ ಮಾಡಿಸಿಕೊಳ್ಳಲೆಂದೇ ಬರುವ ಗಂಡಸರು ಕೇಳಿದಷ್ಟು ಹಣ ಕೊಟ್ಟು ಮಸಾಜ್ ಮಾಡಿಸಿಕೊಳ್ಳುತ್ತಾರೆ. ಇಲ್ಲಿ ನಡೆಯುವ ಮಸಾಜ್‌ಗಳೇ ಬೇರೆಯದ್ದೇ ಆಗಿರುತ್ತದೆ. ಮುಂದುವರೆದು ಹಣಕ್ಕಾಗಿ ಮಸಾಜ್ ಜತೆಗೆ ಸೆಕ್ಸ್‌ಗೂ ಅವಕಾಶ ಮಾಡಿಕೊಟ್ಟು ಹಣ ಪೀಕುತ್ತಾರೆ. ಇದಕ್ಕೆಂದೇ ಕೆಲವೊಂದು ಆಪ್‌ಗಳನ್ನು ಬಳಸಿಕೊಂಡು ಅದರ ಮೂಲಕವೇ ಗಿರಾಕಿಗಳನ್ನು ಕರೆಯಿಸಿಕೊಳ್ಳುವುದು ಇವರ ಜಾಣತನವಾಗಿದೆ. ಕೆಲವೊಮ್ಮೆ ಈ ಮಸಾಜ್ ಸೆಂಟರ್‌ಗಳ ಮಾಲೀಕರು ಒಂದು ಕಡೆಯಲ್ಲಿ ಪೊಲೀಸರ ದಾಳಿಯಾದರೆ ಅಲ್ಲಿ ಮುಚ್ಚಿ ಮತ್ತೊಂದು ಕಡೆ ತೆರೆಯುತ್ತಾರೆ.

ಇದೆಲ್ಲವನ್ನು ಗಮನಿಸಿದರೆ ಹುಡ್ಗ ಹುಡ್ಗೀರು ಹಣ ಮಾಡುವ ಸುಲಭ ಹಾದಿಗಳನ್ನು ಹುಡುಕುತ್ತಿದ್ದು, ಎಲ್ಲರೂ ಸೆಕ್ಸ್ ಧೋಖಾಕ್ಕೆ ಇಳಿದಿರುವುದು ಇತ್ತೀಚೆಗೆ ಎದ್ದು ಕಾಣಿಸುತ್ತಿದೆ. ಮೊದಲೆಲ್ಲ ವೇಶ್ಯಾವಾಟಿಕೆ ಮಾಡಿ ಹಣ ಪೀಕುತ್ತಿದ್ದರೆ, ಈಗ ಆನ್‌ಲೈನ್‌ನಲ್ಲಿ ಎಂಜಾಯ್ ಮಾಡಲು ಹುಡ್ಗೀರು ಸಿಗುತ್ತಾರೆ ಎಂಬಂತಹ ಜಾಹೀರಾತುಗಳನ್ನು ಹರಿದಾಡಿಸಿ, ಅದನ್ನು ನೋಡಿ ಫೋನ್ ಮಾಡುವ ಕಾಮುಕರಿಂದ ಹಣ ಕೀಳುವ ದಂಧೆ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಇದೆಲ್ಲದರ ನಡುವೆ ಸೆಕ್ಸ್ ಮಸಾಜ್ ಮಾಡಲು ಹುಡ್ಗೀರು ಸಿಗುತ್ತಾರೆ ಎಂಬಂತಹ ಸಂದೇಶಗಳನ್ನು ಆನ್‌ಲೈನ್‌ನಲ್ಲಿ ಹರಿದಾಡಿಸಿ ಕಾಮುಕರಿಗೆ ಬಲೆ ಬೀಸಿ ಹಣ ಕೀಳುವ ಕಾಮುಕರು ಇಲ್ಲದಿಲ್ಲ.

ವಿವಿಧ ರೀತಿಯ ಸೆಕ್ಸ್ ದಂಧೆಗಳಲ್ಲಿ ಮತ್ತು ಅದರ ಹೆಸರಲ್ಲಿ ಹಣ ಕೀಳುವುದು ಖತರ್‌ನಾಕ್ ಗ್ಯಾಂಗ್‌ಗಳಿಗೆ ಸುಲಭದ ಹಾದಿಯಾಗಿದೆ. ಇದರಲ್ಲಿ ಹುಡುಗಿಯರು ಕೈಜೋಡಿಸುತ್ತಿರುವುದು ಮಾತ್ರ ದುರಂತದ ಸಂಗತಿಯಾಗಿದೆ. ಈಗಾಗಲೇ ಹನಿಟ್ರ್ಯಾಪ್‌ನಂತಹ ದಂಧೆ ಸಕ್ರಿಯವಾಗಿದ್ದು, ಸೆಕ್ಸ್ ವಿಚಾರದಲ್ಲಿ ಗಂಡಸರು ಅದರಲ್ಲೂ ಹಣವಂತರು, ಅಧಿಕಾರಿಗಳು, ಪ್ರಭಾವಿಗಳನ್ನೇ ಈ ಗ್ಯಾಂಗ್ ಟಾರ್ಗೆಟ್ ಮಾಡುತ್ತಿದ್ದು, ಸ್ವಲ್ಪ ಯಾಮಾರಿದರೂ ಲಕ್ಷ, ಲಕ್ಷ ಪೀಕಲು ರೆಡಿಯಾಗಿ ಬಿಡುತ್ತಾರೆ.

ಈಗಾಗಲೇ ಕೆಲವೊಂದು ಮಸಾಜ್ ಸೆಂಟರ್‌ಗಳು ಸೆಕ್ಸ್ ಮಸಾಜ್ ಮಾಡಿ ಸಿಕ್ಕಿ ಬಿದ್ದ ಉದಾಹರಣೆಗಳು ಬೇಕಾದಷ್ಟಿವೆ. ಜತೆಗೆ ಮತ್ತೊಂದಷ್ಟು ಲಾಡ್ಜ್‌ಗಳು ಗ್ರಾಹಕರು ಸಿಗದ ಕಾರಣದಿಂದಾಗಿ ವೇಶ್ಯಾವಾಟಿಕೆಗೆ ಅವಕಾಶ ಮಾಡಿ ಪೊಲೀಸರ ದಾಳಿಗೊಳಗಾದ ಘಟನೆಗಳು ಇವೆ. ಇನ್ನು ಸದಾ ಮೊಬೈಲ್ ನಲ್ಲಿರುವ ಕೆಲವರು ಸೆಕ್ಸ್ ಸಂಬಂಧಿಸಿದ ವಿಚಾರಗಳನ್ನು ಗೂಗಲ್‌ನಲ್ಲಿ ಸರ್ಚ್ ಮಾಡುತ್ತಿರುವ ಕಾರಣ ವೆಬ್‌ಸೈಟ್ ಮತ್ತು ವಿವಿಧ ಆಪ್‌ಗಳ ಮೂಲಕ ಯಾಮಾರಿಸುವುದು ಖತರ್‌ನಾಕ್ ಗ್ಯಾಂಗ್‌ಗಳಿಗೆ ಸುಲಭವಾಗುತ್ತಿದೆ. ಜತೆಗೆ ವೇಶ್ಯಾವಾಟಿಕೆಗೂ ಇದು ಹಾದಿ ಮಾಡಿಕೊಡುತ್ತಿದೆ.





ಆರೋಪಿಗಳಾದ ಕಲೇಶ್‌ಕುಮಾರ್, ಶಾಜಿ, ಪ್ರದೀಪನ್ ಪಿ.ಪಿ., ಎ. ಪೊನ್ನಣ್ಣ

ಸೆಕ್ಸ್ ವಿಚಾರಕ್ಕೆ ಸಂಬಂಧಿಸಿದಂತೆ ಎಷ್ಟೇ ಪ್ರಕರಣಗಳು ಹೊರ ಬರುತ್ತಿದ್ದರೂ ಕೆಲವು ಗಂಡಸರು ಅದರ ಬಗ್ಗೆ ಎಚ್ಚೆತ್ತು ಕೊಳ್ಳದೆ ಸೆಕ್ಸ್ ಆಸೆಯಿಂದ ಹೋಗಿ ಸಿಕ್ಕಿ ಬೀಳುತ್ತಲೇ ಇರುತ್ತಾರೆ. ಎಲ್ಲಿ ತನಕ ಮೋಸ ಹೋಗುವವರು ಇರುತ್ತಾರೋ? ಅಲ್ಲಿ ತನಕ ಮೋಸ ಮಾಡುವವರು ಇರುತ್ತಾರೆ ಎಂಬುದಕ್ಕೆ ಸೆಕ್ಸ್ ದೋಖಾ ಪ್ರಕರಣಗಳು ಸಾಕ್ಷಿಯಾಗಿವೆ. ಪ್ರತಿದಿನವೋ ಒಂದಲ್ಲ ಒಂದು ರೀತಿ ಸೆಕ್ಸ್‌ಗೆ ಸಂಬಂಧಿಸಿದ ವಂಚನೆ ಪ್ರಕರಣಗಳು ನಡೆಯುತ್ತಲೇ ಇವೆ. ಕೆಲವರು ಹಣ ಪಡೆದುಕೊಂಡು ಗಿರಾಕಿಗಳ ಬಯಕೆ ನೆರವೇರಿಸಿದರೆ ಇನ್ನು ಕೆಲವರು ಸೆಕ್ಸ್ ಹೆಸರಲ್ಲಿ ವಂಚನೆಗಿಳಿಯುತ್ತಾರೆ. ಇನ್ನು ಹನಿಟ್ರ್ಯಾಪ್ ಜಾಲವೂ ಇಲ್ಲದಿಲ್ಲ

ಇದೆಲ್ಲದರ ನಡುವೆ ಕೊಡಗಿನ ಹುಡುಗಿಯರನ್ನು ತೋರಿಸಿ ದಂಧೆ ನಡೆಸುವುದು ಹೊಸದೇನಲ್ಲ. ಸೆಕ್ಸ್ ದಂಧೆ ನಡೆಸುವವರು ಕೊಡಗಿನ ಹುಡುಗಿಯರು ಎಂದು ಹೇಳಿ ಗಿರಾಕಿಗಳಿಂದ ಹೆಚ್ಚಿನ ಹಣ ಸುಲಿಗೆ ಮಾಡುತ್ತಿರುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದೆಲ್ಲದರ ನಡುವೆ ಹೊರಗಿನಿಂದ ಬಂದು ಇಲ್ಲಿ ಮಸಾಜ್ ಸ್ಪಾ ಸೆಂಟರ್ ತೆರೆದು ಅದರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿರುವುದು ಗುಟ್ಟಾಗಿ ನಡೆಯುತ್ತಿದ್ದು, ಇದೀಗ ಅಂತಹದೊಂದು ಪ್ರಕರಣ ಬಯಲಾಗಿದೆ.



ಕೊಡಗಿನ ವೀರಾಜಪೇಟೆ ಗಾಂಧಿನಗರದಲ್ಲಿ ಖಾಸಗಿ ಕಟ್ಟಡವನ್ನು ಬ್ಯೂಟಿಪಾರ್ಲರ್ ನಡೆಸುವುದಾಗಿ ಹೇಳಿ ಕಳೆದ ಆರು ತಿಂಗಳ ಹಿಂದೆ ಬಾಡಿಗೆ ಪಡೆದ ಕೇರಳ ರಾಜ್ಯದ ಕಣ್ಣೂರು ಜಿಲ್ಲೆಯ ಪ್ರದೀಪನ್ ಮತ್ತು ಶಿಜು ಎಂಬಿಬ್ಬರು ನಂತರ ಅದನ್ನು ಹೈಟೆಕ್ ಆಗಿ ಅಲಂಕರಿಸಿ ಆರೇಂಜ್ ಫ್ಯಾಮಿಲಿ ಬ್ಯೂಟಿ ಪಾರ್ಲರ್ ಮತ್ತು ಸ್ಪಾ ಸೆಂಟರ್ ಬೋರ್ಡ್ ತಗಲಿಸಿದ್ದರು. ಮೇಲ್ನೋಟಕ್ಕೆ ಅದ್ದೂರಿಯಾಗಿದ್ದರಿಂದ ಹತ್ತಿರದವರು ಇಲ್ಲಿಗೆ ಹೋಗುತ್ತಿರಲಿಲ್ಲ. ಆದರೆ ಖತರ್‌ನಾಕ್‌ಗಳಾಗಿದ್ದ ಪ್ರದೀಪನ್ ಮತ್ತು ಶಿಜು ಅದರಲ್ಲಿ ಸೆಕ್ಸ್ ಮಸಾಜ್ ಸೇರಿದಂತೆ ವೇಶ್ಯಾವಾಟಿಕೆ ದಂಧೆಯನ್ನು ಆರಂಭಿಸಿದ್ದರು.

ಇಲ್ಲಿಗೆ ಶ್ರೀಮಂತ ಗ್ರಾಹಕರೇ ಬರುತ್ತಿದ್ದರಲ್ಲದೆ, ಹೆಚ್ಚಿನವರನ್ನು ಆನ್‌ಲೈನ್ ಮೂಲಕವೇ ಸಂಪರ್ಕಿಸಲಾಗುತ್ತಿತ್ತು. ಮಸಾಜ್ ಜತೆಗೆ ಬೇರೆ ಬೇರೆ ರೀತಿಯ ಸಮಾರಾಧನೆಗಳು ನಡೆಯುತ್ತಿದ್ದವು. ಇದಕ್ಕೆಂದೇ ಕೊಡಗು ಜಿಲ್ಲೆಯ ಮತ್ತು ಮಂಗಳೂರು ಹಾಗೂ ತಮಿಳುನಾಡು ಮೂಲದ ಆರು ಜನ ಹೆಣ್ಮಕ್ಕಳನ್ನು ಇಟ್ಟುಕೊಂಡಿದ್ದರು. ಅವರು ಬರುವ ಗಿರಾಕಿಗಳನ್ನು ಸಂತೃಪ್ತಿಗೊಳಿಸಬೇಕಾಗುತ್ತಿತ್ತು. ಇವರ ಮಾಂಸದಂಧೆ ಬಿಸಿನೆಸ್ ನಿರೀಕ್ಷೆಗೂ ಮೀರಿ ಚೆನ್ನಾಗಿ ನಡೆಯುತ್ತಿದ್ದರಿಂದಾಗಿ ಪಾರ್ಲರ್‌ಗೆ

☞14

## ಸಾರ್ವಜನಿಕರೇ ಎಚ್ಚರವಾಗಿರಿ!

ಆನ್‌ಲೈನ್‌ನಲ್ಲಿ ಮಹಿಳೆಯರಿಂದ ಸೆಕ್ಸ್ ಮಸಾಜ್, ವೇಶ್ಯಾವಾಟಿಕೆ ಸೇವೆಗಳು ಲಭ್ಯ ಎಂಬುದಾಗಿ ಮೊಬೈಲ್ ಸಂಖ್ಯೆಯನ್ನು ನೀಡಿ ಕರೆ ಮಾಡುವಂತೆ ಸೃಷ್ಟಿಸಿರುವ ವೆಬ್ ಸೈಟ್‌ಗಳನ್ನು ಬಳಸಿ ವಂಚನೆಗೆ ಮಾಡುತ್ತಿದ್ದು, ಇದರತ್ತ ಯಾವುದೇ ಕಾರಣಕ್ಕೂ ಹೋಗಬೇಡಿ.

ಇನ್ನು ಹೋಂಸ್ಟೇ, ರೆಸಾರ್ಟ್, ಲಾಡ್ಜ್‌ಗಳಲ್ಲಿ ಅಥವಾ ಇನ್ನಿತರ ಯಾವುದೇ ಸಮಾಜದ ಸ್ವಾಸ್ಥ್ಯ ಹದಗೆಡುವ ರೀತಿಯ ಅನೈತಿಕ ಅಕ್ರಮ ಚಟುವಟಿಕೆಗಳು ನಡೆಸುತ್ತಿರುವುದು ಕಂಡುಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ, ತುರ್ತು ಸಹಾಯವಾಣಿ 112 ಗೆ ಕರೆ ಮಾಡಿ ಮಾಹಿತಿ ನೀಡಿ ಅಥವಾ ಕೆ.ಎಸ್.ಪಿ ತಂತ್ರಾಶದ ಮೂಲಕ ಮಾಹಿತಿ ನೀಡಬಹುದಾಗಿದೆ.

# ಅಂತಾರಾಷ್ಟ್ರೀಯ ಮಾಡೆಲ್ ಮತ್ತು ಬಾಡಿ ಬಿಲ್ಡರ್ ಸೂರಿ ಅಮೇರಿಕಾ ಅಪಘಾತದಲ್ಲಿ ಹೋಗ್ಬಿಟ್ರು !



ಬಾಡಿ ಬಿಲ್ಡರ್ ಹಾಗೂ ಮಾಡೆಲಿಂಗ್ ಸೂರಿ



**ಕೋಲಾರಮ್ಮನ ಕೆರೆಯಲ್ಲಿ ಎಮ್ಮೆ ಮೇಯಿಸಿಕೊಂಡು ಗಾಂಧಿನಗರದಲ್ಲಿ ಬೆಳೆದ ದೇಹದಾರ್ಢ್ಯ ಪಟು, ರೂಪದರ್ಶಿ, ಜಿಮ್ ಟ್ರೈನರ್, ಫಿಜಿಯೋಥೆರಪಿಸ್ಟ್ ಹಾಗೂ ಚಿತ್ರನಟ ಸುರೇಶ್‌ಬಾಬು ಬೃಹತ್ ಕನಸುಗಳನ್ನೊತ್ತು ಕುಟುಂಬದೊಂದಿಗೆ ಅಮೇರಿಕಾದಲ್ಲಿ ನೆಲೆಸಿದ್ದು, ಕೆಲಸದ ನಿಮಿತ್ತ ಸ್ನೇಹಿತನ ಕಾರು ತೆಗೆದುಕೊಂಡು ಪ್ಲೋರಿಡಾದಿಂದ ಟೆಕ್ಸಾಸ್ ಮಾರ್ಗವಾಗಿ ಪ್ರಯಾಣಿಸುತ್ತಿದ್ದಾಗ ಭೀಕರ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆ ಸೇರಿ ಮೂರು ದಿನಗಳ ನಂತರ ಮೃತಪಟ್ಟಿರುವ ಘಟನೆ ನಡೆದಿದೆ.**



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೂರಿ

**ಕೋಲಾರ**

✍ ಕೋಲಾರ ಮಂಜು

ಕೋಲಾರದ ಅಮಾನಿಕೆರೆ ಕಟ್ಟೆ ಕೆಳಗಿನ ಗಾಂಧಿನಗರದ ವಾಸಿ ಚಲಪತಿ ಮತ್ತು ಮುನಿಯಮ್ಮ ದಂಪತಿಗಳಿಗೆ ಸುರೇಶ್‌ಬಾಬು ಉರುಫ್ ಸೂರಿ, ಸಂತೋಷ್ ಮತ್ತು ರೂಪ ಎಂಬ ಮೂರು ಜನ ಮಕ್ಕಳಿರುತ್ತಾರೆ. ದೊಡ್ಡ ಮಗ ಸೂರಿ ಗಾಂಧಿನಗರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗ ಬೆಳಿಗ್ಗೆ ಶಾಲೆಗೆ ಹೋಗುವ ಮುನ್ನ ಮತ್ತು ಶಾಲೆಯಿಂದ ಬಂದ ನಂತರ ಸಂಜೆ ಹಾಗೂ ಶನಿವಾರ ಮತ್ತು ಭಾನುವಾರ ಎಮ್ಮೆಗಳನ್ನು ಕರೆದುಕೊಂಡು ಕೋಲಾರಮ್ಮನಕೆರೆ ಹಾಗೂ ಕೆರೆಕಟ್ಟೆ ಕೆಳಗಿನ ಬೀಡುಬಿದ್ದ ಗದ್ದೆಗಳಲ್ಲಿ ಮೇಯಿಸಿಕೊಂಡು ಬರುತ್ತಿದ್ದರು. ತಂದೆತಾಯಿ ಇಬ್ಬರು ಕೂಲಿ ಕೆಲಸಕ್ಕೆ ಹೋಗುತ್ತಿದ್ದು, ಬರುವ ಹಣದಲ್ಲಿಯೇ ಜೀವನ ಸಾಗಿಸಿಕೊಂಡು ಹೋಗುತ್ತಿದ್ದರು. ಕೂಲಿ ಸಿಗದೆ ಮನೆಯಲ್ಲಿ ತಿನ್ನಲು ತುತ್ತು ಅನ್ನ ಇಲ್ಲದಿರುವಾಗ, ಮಕ್ಕಳ ಹೊಟ್ಟೆ ತುಂಬಿಸಲು ಚರ್ಚ್‌ನಲ್ಲಿ ಬಡವರಿಗೆ ನೀಡುತ್ತಿದ್ದ ಅನ್ನಕ್ಕಾಗಿ ಕೈಚಾಚಿ ಅದನ್ನು ತಂದು ಮನೆಯವರೆಲ್ಲರೂ ಹಂಚಿಕೊಂಡು ತಿನ್ನುತ್ತಿದ್ದರು. ಅದು ಸಿಗದಿದ್ದಾಗ ಎಷ್ಟೋ ರಾತ್ರಿಗಳು ಬರೀ ನೀರು ಕುಡಿದು ಮಲಗಿದ್ದರು.

ಇಂಥ ಬಡ ಸ್ಥಿತಿಯಲ್ಲಿ ಬೆಳೆದ ಸೂರಿ ತಾನು ಚೆನ್ನಾಗಿ ಓದಿ ಕೆಲಸಕ್ಕೆ ಸೇರಿ ತಂದೆತಾಯಿಗೆ ಹೊಟ್ಟೆ ತುಂಬ ಊಟ ಹಾಕಿ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬ ಕನಸನ್ನು ಕಂಡಿದ್ದನು. ಎಮ್ಮೆ ಮೇಯಿಸುತ್ತಾ ಶಾಲೆಗೆ ಹೋಗಿ ಅಕ್ಷರ ಕಲಿತ ಸೂರಿ, ಪ್ರೌಢಶಾಲೆ ಮುಗಿಸಿ ಹೈಸ್ಕೂಲಿಗೆ ಹೋದ ಮೇಲೆ ವಿದ್ಯೆ ಜೊತೆಗೆ ಏನಾದರೊಂದು ಸಾಧಿಸಬೇಕೆಂದು ಮಿನಿ ಕ್ರೀಡಾಂಗಣದಲ್ಲಿದ್ದ ಯುವಜನ ಸೇವಾ ಕೇಂದ್ರದಲ್ಲಿನ ಜಿಮ್‌ಗೆ ಹೋಗಿ ದೇಹವನ್ನು ತಂಡಿಸುತ್ತಾ ತನ್ನ ಮನೆಯ ಹಿಟ್ಟು, ಸೊಪ್ಪುತಿಂದು ಮೈಯನ್ನು ದೃಢಕಾಯವಾಗಿಟ್ಟುಕೊಂಡಿದ್ದನು. ಶಾಲೆಗೆ ರಜಾ ಇದ್ದ ದಿನಗಳಲ್ಲಿ ಕೆರೆ ಬಯಸಲಿನಲ್ಲಿ ಎಮ್ಮೆ ಮೇಯಿಸಲು ಹೋಗಿದ್ದಾಗ, ಮಧ್ಯಾಹ್ನ ಬಿಸಿಲಿನಲ್ಲಿ ಹಳ್ಳಕೊಳ್ಳಗಳಲ್ಲಿ ಎಮ್ಮೆಗಳನ್ನು ತೊಳೆಯುತ್ತಾ ಅದರ ಜೊತೆಗೆ ನೀರಿನಲ್ಲಿ ಈಜಿ ಸ್ನಾನ ಮಾಡಿ ದಡದ ಮೇಲೆ ಬಂದು ಮೈಯನ್ನು ಟವಲಿನಿಂದ ಒರೆಸುತ್ತಾ ವಿವಿಧ ಭಂಗಿಗಳಲ್ಲಿ ತನ್ನ ಮೈಯನ್ನು ದಂಡಿಸುತ್ತಾ ಇರುವಾಗ ಜೊತೆಯಲ್ಲಿನ ಎಮ್ಮೆಗಾಯಿ ಸ್ನೇಹಿತರು ನೀನು ನಮ್ಮ ಮುಂದೆ ತೋರಿಸುತ್ತಿರುವ ಪ್ರದರ್ಶನವನ್ನು ಯಾವುದಾದರೊಂದು ದೇಹದಾರ್ಢ್ಯ ಸ್ಪರ್ಧೆಯಲ್ಲಿ ತೋರಿಸಿದ್ದರೆ, ನೀನು ಮಾಡಿರುವ ಸಾಧನೆ ಎಲ್ಲರಿಗೂ ತಿಳಿಯುವುದಲ್ಲದೆ ಅದಕ್ಕೆ ತಕ್ಕ ಬಹುಮಾನವು ಸಿಗುತ್ತದೆ. ಆದುದರಿಂದ ತಾಲ್ಲೂಕು ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ನಿನ್ನ ಟ್ಯಾಲೆಂಟನ್ನು ತೋರಿಸುವಂತೆ ಒತ್ತಾಯಿಸುತ್ತಾರೆ.



ಪತ್ನಿ ರಂಜಿತಾ ಹಾಗೂ ಮಗುವಿನೊಂದಿಗೆ ಸೂರಿ

ಸ್ನೇಹಿತರ ಒತ್ತಾಯದ ಮೇರೆಗೆ ನಗರದಲ್ಲಿ ನಡೆದ ತಾಲ್ಲೂಕು ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ಮೂರನೇ ಸ್ಥಾನವನ್ನು ಪಡೆಯುವ ಮೂಲಕ ಗಾಂಧಿನಗರದಲ್ಲಿ ಎಮ್ಮೆ ಮೇಯಿಸುವ ಬಾಡಿ ಬಿಲ್ಡರ್ ಒಬ್ಬನಿದ್ದಾನೆಂದು ತೋರಿಸಿಕೊಟ್ಟನು. ಊರಿನ ಜನ ಸೂರಿಯ ಸಾಧನೆಯನ್ನು ಮೆಚ್ಚಿಕೊಂಡು ಮನಸಾರೆ ಹೊಗಳಿದರು. ತಂದೆ ತಾಯಿಗೆ ಮಗನ ಸಾಧನೆ ಸಮಾಧಾನ ತಂದಿಲ್ಲ. ಕಾರಣ ಮೈ ತೋರಿಸುವುದರಿಂದ ಕಾಸು ಬರುವುದಿಲ್ಲ, ಹೊಟ್ಟೆ ತುಂಬುವುದಿಲ್ಲ. ಇದರ ಜೊತೆಗೆ ಕೆಲಸ ಮಾಡಿಕೊಂಡು ಸಾಧನೆ ಮಾಡುವಂತೆ ಹೇಳಿದರು. ಮುಂದೆ ಓದುವುದಕ್ಕೆ ಸಾಧ್ಯವಾಗದೆ ಎಸ್‌ಎಸ್‌ಎಲ್‌ಸಿ ನಂತರ ಸಣ್ಣಪುಟ್ಟ ಕೂಲಿ ಕೆಲಸ ಮಾಡಿಕೊಂಡು ತಂದೆಯ ಹೆಗಲಿಗೆ ಹೆಗಲು ಕೊಟ್ಟು ನಿಂತ. ಕೂಲಿ ಕೆಲಸಕ್ಕೆ ಹೋಗುತ್ತಿದ್ದ. ಬೆಳಿಗ್ಗೆ, ಸಂಜೆ ಜಿಮ್‌ಗೆ ಹೋಗಿ ವರ್ಕ್‌ಔಟ್ ಮಾಡುವುದನ್ನು ಬಿಡದೆ ಮುಂದುವರೆಸಿದ್ದನು. ಬೆಂಗಳೂರಿನ ಬಾಡಿ ಬಿಲ್ಡರ್ ಒಬ್ಬರು ಕೋಲಾರದ ಯುವಜನ ಸೇವಾ ಕೇಂದ್ರದ ಜಿಮ್‌ಗೆ ಬಂದಿದ್ದಾಗ ಸೂರಿ ಮಾಡುತ್ತಿದ್ದ ವರ್ಕ್‌ಔಟ್‌ನ್ನು ನೋಡಿ ಬೆಂಗಳೂರಿನ ಜಿಮ್‌ವೊಂದರಲ್ಲಿ ಟ್ರೈನರ್ ಕೆಲಸ ಇದೆ ಮಾಡುತ್ತೀಯಾ ಎಂದು ಹೇಳಿ ಅವನನ್ನು ಗೋಲ್ಡನ್ ಜಿಮ್‌ನಲ್ಲಿ ಜಿಮ್ ಟ್ರೈನರ್ ಆಗಿ ಕೆಲಸಕ್ಕೆ ಸೇರಿಸಿದರು. ಅಲ್ಲಿ ಸುಮಾರು ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದ ಸೂರಿ, ಫಿಟ್‌ನೆಸ್‌ಗಾಗಿ ಬರುತ್ತಿದ್ದ ಬಾಡಿ ಬಿಲ್ಡರ್‌ಗಳಿಂದ ಉತ್ತಮ ಟ್ರೈನರ್ ಆಗಿ ಮೆಚ್ಚುಗೆ ಪಡೆದಿದ್ದ. ಚಲನಚಿತ್ರ ನಟಿಯರಾದ ಪ್ರೇಮ, ಪ್ರಿಯಾಮಣಿ, ಪ್ರಿಯಾಂಕ ಉಪೇಂದ್ರ ಸೇರಿದಂತೆ ಹಲವರಿಗೆ ದೈಹಿಕ ತರಬೇತುದಾರರಾಗಿದ್ದು, ಚಿತ್ರರಂಗದ ಜೊತೆಗಿನ ಒಡನಾಟವು ಅವನನ್ನು ಮಾಡೆಲಿಂಗ್ ಲೋಕಕ್ಕೆ ಕರೆದೊಯ್ದಿತು. ಪ್ರಿಯಾಂಕ ಉಪೇಂದ್ರರವರಿಗೆ ಫಿಟ್‌ನೆಸ್ ಟ್ರೈನರ್ ಆಗಿದ್ದ ಇವನು ರಿಯಲ್ ಸ್ಟಾರ್ ಉಪೇಂದ್ರ ನಟಿಸಿರುವ ಉಪ್ಪಿ, ಉಪ್ಪಿ-2 ಸೇರಿದಂತೆ ಹಲವು ಚಲನಚಿತ್ರಗಳಲ್ಲಿ ನಟಿಸಿದ್ದನು. ಜಿಮ್ ಟ್ರೈನರ್ ಸೂರಿ ದೇಹದಾರ್ಢ್ಯ ಪಟುವಾಗಿ ಹಾಗೂ ರೂಪದರ್ಶಿಯಾಗಿ ದಕ್ಷಿಣ ರಾಜ್ಯಗಳಲ್ಲದೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಪ್ರದರ್ಶನಗಳನ್ನು ನೀಡುವ ಮೂಲಕ ಸುಂದರನು ಹಾಗೂ ದೃಢಕಾಯನಾದ ಸೂರಿಯು ಈ ಭಾಗದ ಯುವತಿಯರ ನಿದ್ದೆಗೆಡಿಸಿದ್ದ. ಇವನನ್ನು ಸಾಕಷ್ಟು ಅಭಿಮಾನಿಗಳು ಪ್ರೀತಿಸುತ್ತಿದ್ದು, ಕೊನೆಗೆ ದೆಹಲಿಯ ರಂಜಿತ ಎಂಬ ಯುವತಿಯು ಸೂರಿಯನ್ನು ಪ್ರೀತಿಸಿ ಮದುವೆಯಾಗಿದ್ದು, ಈಗ ಇವರಿಗೆ ಇಬ್ಬರು ಮಕ್ಕಳಿರುತ್ತಾರೆ.



ಗಂಡನ ಶವವನ್ನು ವೀಕ್ಷಿಸುತ್ತಿರುವ ಪತ್ನಿ ರಂಜಿತಾ ಹಾಗೂ ಮಕ್ಕಳು

### ಸೂರಿಯ ಸಾಮಾಜಿಕ ಸೇವೆ

ಸಾಧನೆಯ ಛಲದೊಂದಿಗೆ ಹುಟ್ಟಿದ ಊರನ್ನು ಬಿಟ್ಟು ಬೆಂಗಳೂರು ಸೇರಿದ ಸೂರಿ ಏನಾದರೊಂದು ಸಾಧಿಸಿಯೇ ತೀರಬೇಕೆಂದು ಕಷ್ಟಪಟ್ಟು ತನ್ನ ದೇಹವನ್ನು ಹುರಿಗಟ್ಟಿಸಿ ದೇಹದಾರ್ಢ್ಯದ ಜೊತೆಗೆ ಮಾಡೆಲಿಂಗ್ ಕ್ಷೇತ್ರಕ್ಕೆ ಕಾಲಿಟ್ಟು ಚಿತ್ರನಟ, ನಟಿಯರ ದೈಹಿಕ ತರಬೇತುದಾರನಾಗಿ ಚಿತ್ರರಂಗದ ಜೊತೆಗಿನ ಒಡನಾಟದಿಂದ ಚಿತ್ರನಟನಾಗಿ ತನ್ನ ನಟನಾ ಕೌಶಲ್ಯವನ್ನು ತೋರಿಸಿದ ಸೂರಿ ಪತ್ನಿ ರಂಜಿತಾಳ ಪ್ರೋತ್ಸಾಹ ಮತ್ತು ಸಹಕಾರದೊಂದಿಗೆ ದೇಶವಲ್ಲದೆ ವಿದೇಶಗಳಲ್ಲಿ ತನ್ನ ಬಾಡಿ ಬಿಲ್ಡರ್ ಮತ್ತು ಮಾಡೆಲಿಂಗ್ ಪ್ರದರ್ಶನಗಳನ್ನು ನೀಡುತ್ತಾ ಹೆಸರು, ಕೀರ್ತಿ ಮತ್ತು ಹಣವನ್ನು ಗಳಿಸಿದ. ಈ ಮಧ್ಯೆ ದುಬೈನಲ್ಲಿ ನಡೆದ ಸಿನಿ ನಟಿಯರ ಕ್ರಿಕೆಟ್ ಟೂರ್ನಿಮೆಂಟ್‌ನಲ್ಲಿ ನಟಿಯರಿಗೆ ದೈಹಿಕ ತರಬೇತಿದಾರನಾಗಿ ಕೆಲಸ ಮಾಡಿದ. ಕಳೆದ ಎರಡು ವರ್ಷಗಳಿಂದ ಅಮೇರಿಕಾದಲ್ಲಿನ ಗಣ್ಯರಿಗೆ ಫಿಜಿಕಲ್ ಫಿಟ್‌ನೆಸ್ ಮತ್ತು ಫಿಜಿಯೊಥೆರಪಿಸ್ಟ್ ಆಗಿ ತಮ್ಮದೇ ಸ್ವಂತ ಉದ್ಯಮವನ್ನು ಆರಂಭಿಸಿ ತರಬೇತಿ ನೀಡುತ್ತಾ ಲಕ್ಷಾಂತರ ರೂ.ಗಳ ಸಂಪಾದನೆ ಮಾಡುತ್ತಿರುವ ಇಇವರಿಗೆ ಕರ್ನಾಟಕ ರತ್ನ, ಪವರ್ ಸ್ಟಾರ್ ಡಾ. ಪುನೀತ್ ರಾಜ್‌ಕುಮಾರ್ ರವರು ಮಾಡಿದ ದಾನ, ಧರ್ಮ, ಊಟ, ವಸತಿ, ವೃದ್ಧಾಶ್ರಮ, ಅನಾಥಾಶ್ರಮಗಳಿಗೆ ಮಾಡಿದ ಸೇವೆಗಳಿಂದ ಸ್ಫೂರ್ತಿಗೊಂಡು ತಮ್ಮ ದುಡಿಮೆಯಲ್ಲಿ ಪ್ರಚಾರ ಬಯಸದೆ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸಬೇಕೆಂಬ ಮಹಾದಾಸೆಯನ್ನು ಇಟ್ಟುಕೊಂಡಿದ್ದ ಸೂರಿ ಹೆತ್ತವರ ಹೆಸರಿನಲ್ಲಿ ಸೇವಾ ಸಂಸ್ಥೆಯೊಂದನ್ನು ಪ್ರಾರಂಭ ಮಾಡುವ ಮೂಲಕ ಸಮಾಜ ಸೇವಾ ಕಾರ್ಯಗಳನ್ನು ಮಾಡುತ್ತಿದ್ದರು. ಇವರು ಮಾಡುತ್ತಿರುವ ಸಾಧನೆ ಹಾಗೂ ಸಾಮಾಜಿಕ ಕಾರ್ಯಗಳನ್ನು ಗುರುತಿಸಿ ರಾಜ್ಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆಯುವ ಮೂಲಕ ತಂದೆ, ತಾಯಿಗೆ ಮತ್ತು ಹುಟ್ಟಿದ ಊರಿಗೆ ಕೀರ್ತಿ ತಂದಿದ್ದರಲ್ಲದೆ ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ

☞ 14



ನಟಿಯರಾದ ಪ್ರೇಮ, ಪ್ರಿಯಾಮಣಿ ಹಾಗೂ ಮಾಡೆಲಿಂಗ್ ತಂಡದವರೊಂದಿಗೆ ಸೂರಿ

# ಶಿರಸಿ: ಏರ್‌ಗನ್ ಗುಂಡಿಗೆ ಬಾಲಕ ಬಲಿ

**ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸೋಮನಳ್ಳಿ ಎಂಬಲ್ಲಿ, ಏರ್‌ಗನ್ ಗುಂಡೇಟಿಗೆ ಒಂಭತ್ತು ವರ್ಷದ ಬಾಲಕನೊಬ್ಬ ಬಲಿಯಾದ ಘಟನೆ 05-09-2025ರಂದು ನಡೆದಿದೆ.**


ಬಾಲಕನ ಮೃತದೇಹ




ಆರೋಪಿ ನಿತೀಶ್ ಗೌಡ

**ಉತ್ತರ ಕನ್ನಡ**
✍ ಸಂತೋಷಕುಮಾರ

ಹೆಸರು ರಾಘವ ಹೆಗಡೆ, ಇರೋದು ಶಿರಸಿ ತಾಲ್ಲೂಕಿನ ಸೋಮನಹಳ್ಳಿ. ಇವರದ್ದು ತೋಟ ಗದ್ದೆ ಎಲ್ಲ ಇದ್ದು, ಅದನ್ನು ನೋಡಿಕೊಳ್ಳುವುದಕ್ಕಂತ ಜನ ಬೇಕಾಗಿದ್ದರು. ಅದಕ್ಕೆ ಯಾರಿಂದಲೋ ಪರಿಚಯವಾದ ಹಾವೇರಿ ಜಿಲ್ಲೆಯ ಹೊಸ ಕಿತ್ತೂರಿ ಬಸಪ್ಪ ಉಂಡಿ ಅನ್ನುವರ ಕುಟುಂಬ ಬಂದುಳಿದಿತ್ತು. ಬಸಪ್ಪನ ಹೆಂಡ್ತಿ ಪವಿತ್ರಾ, ಮಕ್ಕಳಾದ ಪ್ರೀತಿ, ಕರಿಯಪ್ಪ, ದಿಳ್ಳಪ್ಪ ಜೊತೆ ರಾಘವ ಹೆಗಡೆ ಅವರು ಕೊಟ್ಟ ಮನೇಲಿ


ಎಸ್ಪಿ ದೀಪನ್ ಎಂ.ಎನ್.


ಹೆಚ್ಚುವರಿ ಎಸ್ಪಿ ಜಗದೀಶ್ ನಾಯ್ಕ


ಡಿವೈಎಸ್ಪಿ ಗೀತಾ ಪಾಟೀಲ್

ವಾಸವಾಗಿದ್ದರು. ಕಳೆದ ಒಂದೂವರೆ ವರ್ಷದ ಹಿಂದೆ ಬಂದಿದ್ದ ಈ ಕುಟುಂಬ ರಾಘವ ಹೆಗಡೆ ಅವರ ತೋಟದ ಕೆಲಸ ಮಾಡಿಕೊಂಡಿದ್ದರು. ಇವರ ಮೂರೂ ಮಕ್ಕಳು ವಿದ್ಯೆ ಕಲಿಯುವುದಕ್ಕಂತಾ ದ'ಮುನ ಬೈಲ್ ಶಾಲೆಗೆ ಹೋಗುತ್ತಾ ಇದ್ದರು. ಈ ಮಕ್ಕಳ ತಂದೆತಾಯಿ ಹೆಗಡೆಯವರ ಮನೆಗೆ ಕೂಲಿ ಕೆಲಸಕ್ಕೆ ಬೆಳಿಗ್ಗೆ ಎಂಟು ಗಂಟೆಗೆ ಮನೆಯಿಂದ ಹೋದರೆ ಮನೆಗೆ ಬರೋದು ಸಾಯಂಕಾಲ ಆರು ಗಂಟೆಗೆ. ಹೀಗಾಗಿ ಬಸಪ್ಪ ದಂಪತಿಗಳಿಗೆ ಮಕ್ಕಳನ್ನ ನೋಡಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತಿತ್ತೆನ್ನಲಾಗಿದೆ.


ಮೃತ ಬಾಲಕನ ತಾಯಿ ಪವಿತ್ರ

ರಾಘವ ಹೆಗಡೆ ತೋಟ ಅವರ ಮನೆ ಹತ್ತಿರ ಮಂಗಗಳ ಕಾಟ ಜಾಸ್ತಿಯಾಗಿದ್ದರಿಂದ ರಾಘವ ಹೆಗಡೆ ಶಿರಸಿ ತಾಲ್ಲೂಕಿನ ಸದಾಶಿವನಹಳ್ಳಿಯ ನಿತೀಶ ಲಕ್ಷ್ಮಣ ಗೌಡ ಅನ್ನೋವಾತನಿಗೆ ತನ್ನ ಬಳಿ ಇದ್ದ ಏರ್ ಗನ್ ಕೊಟ್ಟು ತೋಟ ಕಾಯುವಂತೆ ಹೇಳಿ ಕೆಲಸಕ್ಕೆ ಇಟ್ಟುಕೊಂಡಿದ್ದರು. ಈ ಲಕ್ಷ್ಮಣ ಗೌಡನಿಗೆ ಕೆಲ ತಿಂಗಳ ಹಿಂದೆ ಬೈಕ್ ಅಪಘಾತವಾಗಿ ಎಡಗೈ ಕೆಲಸ ಮಾಡದಂತಾಗಿತ್ತು. ಹಾಗೇ ಮೂಲತ; ಲಕ್ಷ್ಮಣ ಗೌಡ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನವನೆಂದು ತಿಳಿದು ಬಂದಿದ್ದು ಈತನದ್ದು ಪ್ರೇಮ ವಿವಾಹವಾಗಿದ್ದು ಈತನ ಹೆಂಡ್ತಿ ನಯನಾ, ಹಾಗೂ ಇಬ್ಬರು ಚಿಕ್ಕ ಮಕ್ಕಳಿದ್ದಾರೆ.

ಬಸಪ್ಪ ಉಂಡಿ ಮಕ್ಕಳು ಶಾಲೆಗೆ ಹೋಗಿ ಬಂದ ನಂತರ ಅಲ್ಲೇ ಹತ್ತಿರದಲ್ಲಿರೋ ಗಣಪತಿ ಹೆಗಡೆ ಮನೆ ಎದುರಿರುವ ಅಂಗಳದಲ್ಲಿ ಆಟವಾಡುತ್ತಿದ್ದರಂತೆ. ಆದರೆ ಲಕ್ಷ್ಮಣಗೌಡ ಆ ಮಕ್ಕಳಿಗೆ ಹೆದರಿಸಿ, ಬೆದರಿಸಿ ಇಲ್ಲಿ ಆಟವಾಡಬೇಡಿ ಅಂತಾ ಜೋರು ಮಾಡುತ್ತಿದ್ದನಂತೆ. ಅಲ್ಲದೇ ಬಸಪ್ಪ ದಂಪತಿಗಳಿಗೆ ನಿಮ್ಮ ಮಕ್ಕಳು ತುಂಬಾ ಉಡಾಳರಿದ್ದಾರಂತ ದೂರುತ್ತಿದ್ದನಂತೆ.


ಸಿಪಿಐ ಶಶಿಕಾಂತ ವರ್ಮಾ


ಪಿಎಸ್‌ಐ ಸಂತೋಷ್‌ಕುಮಾರ್


ಪಿಎಸ್‌ಐ ಅಶೋಕ್ ರಾಠೋಡ

ಅವತ್ತು 05-09-2025ರ ಶಾಲೆಗೆ ರಜೆ ಇದ್ದುದರಿಂದ ಬಸಪ್ಪನ ಮಕ್ಕಳು ಮನೇಲೇ ಇದ್ದಾರೆ. ಬಸಪ್ಪ ತಿಂಡಿ ತಿಂದು ಹೆಗ್ಡೇರ ತೋಟದ ಕೆಲಸಕ್ಕೆ ಹೋಗಿದ್ದಾರೆ. ಬಸಪ್ಪನ ಹೆಂಡ್ತಿ ಮಕ್ಕಳಿಗೆ ತಿಂಡಿ ಮಾಡಿಕೊಟ್ಟು ತಾನೂ ಕೆಲಸಕ್ಕೆ ಹೋಗೋ ತಯಾರಿ ಮಾಡಿಕೊಂಡಿದ್ದಾಳೆ. ಮಕ್ಕಳು ಗಣಪತಿ ಹೆಗಡೆಯವರ ಮನೆ ಎದುರಿನ ಅಂಗಳಕ್ಕೆ ಆಟಕ್ಕೆ ಅಂತ ಹೋಗಿದ್ದಾರೆ. ಆಗ ಬೆಳಗಿನ 9ರ ಸಮಯ. ಪವಿತ್ರಾ ತಾನೂ ಕೂಡಾ ಕೆಲಸಕ್ಕೆ ಹೋವುದಕ್ಕೆಕೆ ತಯಾರಾಗಿ ಮನೆಯಿಂದ ಹೊರಗೆ ಬರುತ್ತಿದ್ದಂತೆ ಗಣಪತಿ ಹೆಗಡೆ ಮನೆಕಡೆಯಿಂದ ಗುಂಡು ಹಾರಿದ ಸದ್ದು ಕೇಳಿ ಬಂತು. ಹಾಗೇ ಮಕ್ಕಳು ಕೂಡಾ ಜೋರಾಗಿ ಅಳುತ್ತಾ ಇದ್ದುದ್ದನ್ನು ಕೇಳಿ ಪವಿತ್ರಾ ಓಡಿ ಹೋಗಿ ನೋಡಿದಾಗ, ಬಸಪ್ಪ ಪವಿತ್ರಾ ದಂಪತಿಗಳ ಮಗ ಕರಿಯಪ್ಪ (9) ಗಣಪತಿ ಹೆಗಡೆಯವರ ಅಂಗಳದ ಕಟ್ಟಿಗೆ ಗೇಟ್‌ನ ಹತ್ತಿರ ಬಿದ್ದುಕೊಂಡಿದ್ದ. ಇನ್ನುಳಿದ ಮಕ್ಕಳಾದ ಪ್ರೀತಿ, ದಿಳ್ಳಪ್ಪಾ ಅಳುತ್ತಾ ಇದ್ದರು.


ಆರೋಪಿತನ ಪತ್ನಿ ನಯನ

ಎಡಗೈ ಸ್ವಾಧೀನ ಕಳೆದುಕೊಂಡಿದ್ದ ನಿತೀಶ್‌ಗೌಡ ತನ್ನ ಎಡಗೈಯಲ್ಲಿ ಏರಗನ್ ಹಿಡಿದುಕೊಂಡಿದ್ದನಂತೆ. ಆಗ ಇದ್ದಕ್ಕಿದ್ದಂತೆ 'ಫೈರ್ ಆಗಿದ್ದು, ಪವಿತ್ರಾಳ ಮಗ ಕರಿಯಪ್ಪನ ಎದೆಯ ಎಡಭಾಗದಲ್ಲಿ ಗುಂಡು ತಾಗಿ ಗಾಯವಾಗಿದ್ದು ಆತ ಮಾತಾಡ್ತಾ ಇರಲಿಲ್ಲ. ಆಗ ಪವಿತ್ರಾ ಅಲ್ಲಿಯೇ ಇದ್ದ ಶುಭ ಗಣಪತಿ ಹೆಗಡೆ ಇವರಿಗೆ ಏನಾಯಿತೆಂದು ಕೇಳಿದಾಗ ನಿತೀಶ್‌ಗೌಡ ತನ್ನ ಎಡಗೈಯಲ್ಲಿ ಏರ್‌ಗನ್ ಹಿಡಿದುಕೊಂಡು ನಮ್ಮ ಮನೆಯ ಕಟ್ಟಿಗೆ ಗೇಟ್ ಬಳಿ ನಿಂತು, ನನ್ ಮೊಬೈಲ್‌ಗೆ ಕರೆನ್ಸಿ ಹಾಕಿ ಅಂತಾ ಶುಭಾ ಅವರಿಗೆ ಹೇಳಿದ್ದನಂತೆ. ಆಗ ಶುಭಾ ನನ್ ಹತ್ತಿರ ಕರೆನ್ಸಿ ಇಲ್ಲ ಅನ್ನುತ್ತಿದ್ದಂತೆ ಬಸಪ್ಪ ದಂಪತಿಗಳ ಮಕ್ಕಳಾದ ಪ್ರೀತಿ, ಕರಿಯಪ್ಪ, ದಿಳ್ಳಪ್ಪ ನಿತೀಶ್‌ಗೌಡನ ಬಳಿ ಹೋಗಿದ್ದರಂತೆ.



ಘಟನೆ ನಡೆದ ಸ್ಥಳ

ಆಗ ನಿತೀಶ್ ಗೌಡ ಯಾವುದೋ ಹಳೇ ದ್ವೇಷದಿಂದ ತನ್ನ ಕೈಲಿರೋ ಏರ್‌ಗನ್‌ನಿಂದ ಕರಿಯಪ್ಪನ ಎದೆಯ ಎಡಭಾಗಕ್ಕೆ ಒಮ್ಮೆಲೇ ಫೈರ್ ಮಾಡಿದ್ದರಿಂದ ಕರಿಯಪ್ಪ ಸ್ಥಳದಲ್ಲೇ ಕುಸಿದು ಬಿದ್ದಂತಾ ಗೊತ್ತಾಗಿದೆ!

ವಿಷಯ ತಿಳಿದು ಸ್ಥಳಕ್ಕೆ ಬಂದ ಶ್ರೀಪಾದ ಹೆಗಡೆ ಜೊತೆ ಸೇರಿ ಪವಿತ್ರಾ, ಕರಿಯಪ್ಪನನ್ನ ಶಿರಸಿಯ ಟಿಎಸ್‌ಎಸ್ ಆಸ್ಪತ್ರೆಗೆ ಕರೆದುಕೊಂಡು ಬಂದು ವೈದ್ಯರಿಗೆ ತೋರಿಸಿದಾಗ ಬಾಲಕ ಆಗಲೇ ಮೃತಪಟ್ಟಿದ್ದಾಗಿ ತಿಳಿಸಿದ್ದಾರೆ!!

ನಂತರ ಮೃತ ಬಾಲಕ ಕರಿಯಪ್ಪನ ತಾಯಿ ಶಿರಸಿ ಗ್ರಾಮೀಣ ಪೊಲೀಸ್‌ಠಾಣೆಗೆ ತೆರಳಿ ತಾವು ಕೆಲಸ ಮಾಡುವ ತೋಟದ ಮಾಲೀಕರಾದ ರಾಘವ ಕೇಶವ ಹೆಗಡೆ ಯಾವುದೇ ಅಧಿಕೃತ ಪ್ರಾಧಿಕಾರದಿಂದ ಅನುಮತಿ ಪಡೆಯದೇ ತನ್ನಲ್ಲಿ ಏರ್‌ಗನ್‌ನ್ನು ಇಟ್ಟುಕೊಂಡು ತಮ್ಮ ತೋಟದ ಪೀಕನ್ನು ತಿನ್ನಲು ಬರೋ ಮಂಗಗಳನ್ನು ಕಾಯೋಕೆ ಆರೋಪಿತನಾದ ನಿತೀಶ ಗೌಡನಿಗೆ ಇಟ್ಕೊಂಡಿದ್ದರು. ಆದರೆ ಆರೋಪಿ ಏರ್‌ಗನ್‌ನಿಂದ ಫೈರ್ ಮಾಡಿ ತನ್ನ ಮಗನನ್ನು ಕೊಲೆಮಾಡಿದ್ದಾನೆ ಅಂತಾ ದೂರು ನೀಡಿದ್ದಾರೆ.

ವಿಷ್ಯ ತಿಳಿದಾಕ್ಷಣ ಸ್ಥಳಕ್ಕೆ ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ, ಶಿರಸಿ ಸಿಪಿಐ ಶಶಿಕಾಂತ ವರ್ಮಾ, ಪಿಎಸ್‌ಐಗಳಾದ ಸಂತೋಷಕುಮಾರ್, ಅಶೋಕ ರಾಠೋಡ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಕ್ರಮ ಕೈಗೊಂಡಿದ್ದು ಸ್ಥಳಕ್ಕೆ ಉತ್ತರ ಕನ್ನಡ ಎಸ್ಪಿ ದೀಪನ್ ಎಂ.ಎನ್, ಹೆಚ್ಚುವರಿ ಎಸ್ಪಿ ಜಗದೀಶ್ ನಾಯ್ಕ ಭೇಟಿ ನೀಡಿ ಪರಿಶೀಲಿಸಿ ತನಿಖೆಯ ಮುಂದಿನ ಮಾರ್ಗದರ್ಶನ ನೀಡಿದ್ದಾರೆ. ಶಿರಸಿ ಪೊಲೀಸರು ಆರೋಪಿ ನಿತೀಶ್‌ಗೌಡನನ್ನು ಬಂಧಿಸಿ ನ್ಯಾಯಾಂಗ ಬಂಧನ ಕ್ಕೊಪ್ಪಿಸಿದ್ದಾರೆ.


ಗಣಪತಿ ಹೆಗ್ಡೆ

# ಚುನಾವಣಾ ಆಯೋಗ ಸುಳ್ಳು ಹೇಳುತ್ತಿದೆಯಾ?!

ಮಹದೇವ್ ಕೆಂಪಯ್ಯ

ಚುನಾವಣಾ ಆಯೋಗವು ಮತಗಳ್ಳತನಕ್ಕೆ ಸಂಬಂಧಿಸಿದಂತೆ, ಎಲ್ಲಾ ಮಾಹಿತಿಯನ್ನು ಒದಗಿಸಿದೆ ಎಂದು ಹೇಳುವ ಮೂಲಕ....ಸುಳ್ಳು ಹೇಳಿದೆ! ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಸ್ಫೋಟಕ ಮಾಹಿತಿ ನೀಡಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಮತಗಳ್ಳರನ್ನು ರಕ್ಷಿಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಳೆದ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದರು. ಶುಕ್ರವಾರ ಬೆಂಗಳೂರಿನಲ್ಲಿ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಸಚಿವ ಪ್ರಿಯಾಂಕ್ ಖರ್ಗೆ, ಸಿಐಡಿ 18 ಪತ್ರಗಳನ್ನು ಬರೆದಿದ್ದು, ಇತ್ತೀಚಿನ ಪತ್ರ ಫೆಬ್ರವರಿ 1, 2025 ರಂದು ಬರೆದಿದೆ. ಮುಖ್ಯ ಚುನಾವಣಾ ಅಧಿಕಾರಿ(ಸಿಇಒ) ತನಿಖೆಯ ಉದ್ದೇಶಕ್ಕಾಗಿ ಸಂಬಂಧಿತ ಮಾಹಿತಿಯನ್ನು ಒದಗಿಸುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸುವಂತೆ ಕೇಳಿಕೊಂಡಿದೆ ಎಂದು ಹೇಳಿದ್ದರು.

ಜೊತೆಗೆ, ತನಿಖೆಯ ಸಮಯದಲ್ಲಿ, ಐಪಿ (ಇಂಟರ್ನೆಟ್ ಪ್ರೋಟೋ ಕಾಲ್) ಲಾಗ್‌ಗಳನ್ನು ಒದಗಿಸಲಾಗಿದೆ. ಗಮ್ಯಸ್ಥಾನವನ್ನು ಪರಿಶೀಲಿಸಿದಾಗ, ಐಪಿ ಮತ್ತು ಗಮ್ಯಸ್ಥಾನ ಪೋರ್ಟ್ ಕಾಣೆಯಾಗಿದೆ. ಆದ್ದರಿಂದ, ಸಂಬಂಧಪಟ್ಟವರಿಗೆ ಅದನ್ನು ಒದಗಿಸಲು ಮತ್ತು ಕೆಳಗೆ ತಿಳಿಸಲಾದ ಪ್ರಶ್ನೆಗಳಿಗೆ ಸಂಬಂಧಿಸಿದ ಮಾಹಿತಿ ದಾಖಲೆಯನ್ನು ಒದಗಿಸಲು ನಿರ್ದೇಶಿಸಲು ವಿನಂತಿಸಲಾಗಿದೆ ಎಂದು ಸಿಐಡಿ ನೀಡಿದ್ದ ಪತ್ರವನ್ನು ಸಹ ಖರ್ಗೆ ಓದಿ,



ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು ಓಟಿಪಿ ಮೂಲ, ಬಳಕೆ ಮಾಡಲಾಗಿರುವ ಐಪಿ ವಿಳಾಸ ಮತ್ತು ಸಲಕರಣೆಗಳ ವಿಳಾಸ ಸೇರಿದಂತೆ 5 ಪ್ರಮುಖ ಅಂಶಗಳ ಮಾಹಿತಿಯನ್ನು ಕೇಳಿದ್ದಾರೆ. ಇದ್ಯಾವುದನ್ನು ಒದಗಿಸದೆ ಆಯೋಗ ತಪ್ಪು ಮಾಡಿದರವರನ್ನು ರಕ್ಷಿಸುವ ಯತ್ನ ನಡೆಸುತ್ತಿದೆಎಂದು ದೂರಿದ್ದಾರೆ.

ರಾಷ್ಟ್ರೀಯ ಮತದಾರರ ಸೇವಾ ಪೋರ್ಟಲ್(NVSP), ಮತದಾರರ ಸಹಾಯವಾಣಿ ಅಪ್ಲಿಕೇಶನ್(VHA) ಪ್ಲಾಟ್ ಫಾರ್ಮ್‌ಗಳು OTP/ಮಲ್ಟಿಫ್ಯಾಕ್ಟರ್ ದೃಢೀಕರಣ ಸೌಲಭ್ಯವನ್ನು ಅಳವಡಿಸಿಕೊಂಡಿವೆಯೇ? ಅರ್ಜಿಗಳನ್ನು ಅಪ್‌ಲೋಡ್ ಮಾಡಲು OTP ದೃಢೀಕರಣ ಸೌಲಭ್ಯ ಇದೆಯೇ? ಇದ್ದರೆ, ವಿವರ ನೀಡಿ ಎಂದು ಕೇಳಿದೆ.

OTP ಯಂತಹ ದೃಢೀಕರಣ ಅಸ್ತಿತ್ವದಲ್ಲಿದ್ದರೆ, OTPಯನ್ನು ಲಾಗಿನ್‌ಗಾಗಿ ಬಳಸಿದ ಮೊಬೈಲ್ ಸಂಖ್ಯೆಗೆ ಅಥವಾ ಅರ್ಜಿದಾರರು ಫಾರ್ಮ್‌ನಲ್ಲಿ ಒದಗಿಸಿದ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುತ್ತದೆಯೇ ಅಥವಾ ಎರಡಕ್ಕೂ ಕಳುಹಿಸಲಾಗುತ್ತದೆಯೇ? ಲಾಗ್‌ಗಳನ್ನು ರಚಿಸಿ ಕಾನೂನು ಜಾರಿ ಸಂಸ್ಥೆ(LEA) ಮುಂದೆ ಹಾಜರುಪಡಿಸಲು ರಚಿಸಿದ ಕಾನೂನುಬದ್ಧ ನಿಯಂತ್ರಣ ಬಳಕೆದಾರರನ್ನು ಹೊಂದಿರುವ ವ್ಯಕ್ತಿಯಿಂದ ಭಾರತೀಯ ಸಾಕ್ಷ್ಯ ಕಾಯ್ದೆಯ 65ಬಿ ಅಡಿಯಲ್ಲಿ ಪ್ರಮಾಣಪತ್ರವನ್ನು ಒದಗಿಸಿ. ಇದಲ್ಲದೆ, ದ್ವಿತೀಯ ರೂಪದಲ್ಲಿ ಎಲೆಕ್ಟ್ರಾನಿಕ್ ಸಾಧನದ ಸ್ವೀಕಾರಾರ್ಹತೆಗೆ 65ಬಿ ಪ್ರಮಾಣಪತ್ರವು ಕಡ್ಡಾಯವಾಗಿದೆ ಎಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ...




ಮತದಾರರು/ಸಾರ್ವಜನಿಕ ದೃಷ್ಟಿಕೋನದಿಂದ NVSP, VHA ಮತ್ತು ಗರುಡ ಅಪ್ಲಿಕೇಶನ್‌ಗಳ ಹಂತ-ಹಂತದ ಬಳಕೆಗೆ ಸಂಬಂಧಿಸಿದಂತೆ ಪ್ರಸ್ತುತಿಯನ್ನು ವ್ಯವಸ್ಥೆ ಮಾಡಲು ಸಂಬಂಧಪಟ್ಟವರಿಗೆ ನಿರ್ದೇಶಿಸಿ ಎಂದು ಸಿಐಡಿ ಕೇಳಿಕೊಂಡಿದೆ. ಆದರೆ 2023, ಫೆ. 21ರಂದೇ ಪೊಲೀಸರ ತನಿಖೆಗೆ ಎಲ್ಲಾ ರೀತಿಯ ದಾಖಲೆಗಳ್ನು ಒದಗಿಸಿರುವುದಾಗಿ ಆಯೋಗ ನಿನ್ನೆ ಹೇಳಿಕೆ ನೀಡಿದೆ. ಇದು ಸಂಪೂರ್ಣ ಸುಳ್ಳು. ಮಾಹಿತಿ ನೀಡಿದ್ದೇ ಆಗಿದ್ದರೆ ಇತ್ತೀಚೆಗೆ 2025ರ ಫೆ.4ರಂದು ರಾಜ್ಯ ಚುನಾವಣಾ ಮುಖ್ಯಾಧಿಕಾರಿಗಳ ಕಚೇರಿಯ ಜಂಟಿ ಆಯುಕ್ತರು, ಕೇಂದ್ರ ಮುಖ್ಯಚುನಾವಣಾ ಆಯುಕ್ತರಿಗೆ ಪತ್ರ ಬರೆದು, ಅಳಂದ ಕ್ಷೇತ್ರದ ಪ್ರಕರಣದಲ್ಲಿ ತನಿಖಾಧಿಕಾರಿ ಕೇಳಿರುವ ಮಾಹಿತಿ ಒದಗಿಸುವಂತೆ ಏಕೆ ಮನವಿ ಮಾಡಿದ್ದಾರೆ. ಅದರ ಜೊತೆಗೆ ಈವರೆಗೂ ನಡೆದಿರುವ ಎಲ್ಲಾ ಪತ್ರವ್ಯವಹಾರಗಳ ಮಾಹಿತಿಯನ್ನು ಉಲ್ಲೇಖಿಸಿದ್ದಾರೆ ಎಂದು ಸಚಿವರು ತಿಳಿಸಿದ್ದು, ಈ ಪತ್ರವನ್ನು ಬಿಡುಗಡೆ ಮಾಡಿದ್ದಾರೆ.



ರಾಹುಲ್ಗಾಂಧಿ ಆನ್‌ಲೈನ್‌ನಲ್ಲಿ ಹೆಸರುಗಳು ಡಿಲಿಟ್ ಆಗಿವೆ ಎಂದು ಎಲ್ಲಿಯೂ ಹೇಳಲಿಲ್ಲ. ಆಯೋಗ ಈ ರೀತಿ ದಾರಿ ತಪ್ಪಿಸುವುದನ್ನು ಏಕೆ ಮಾಡುತ್ತಿದೆ ಎಂದು ಅರ್ಥವಾಗುತ್ತಿಲ್ಲ, ನಾವು ಚುನಾವಣಾ ಆಯೋಗವನ್ನು ಪ್ರಶ್ನೆ ಮಾಡಿದರೆ ಬಿಜೆಪಿಯ ಕೇಂದ್ರ ಸಚಿವರು, ಸಂಸದರು ಏಕೆ ಉತ್ತರ ನೀಡುತ್ತಿದ್ದಾರೆ? ಇವರೆಲ್ಲಾ ಚುನಾವಣಾ ಆಯೋಗದ ವಕ್ತಾರಿಕೆಯ ಹೊರ ಗುತ್ತಿಗೆ ಕೆಲಸ ಮಾಡುತ್ತಿದ್ದಾರೆಯೇ?? ಎಂದು ಪ್ರಶ್ನಿಸಿದರು.

ನೀವು ಯಾರಿಗೆ ಸುಳ್ಳು ಹೇಳುತ್ತಿದ್ದೀರಿ? ನೀವು ಎಲ್ಲಾ ಮಾಹಿತಿಯನ್ನು ಒದಗಿಸಿದ್ದರೆ, ನೀವು ಈ ಪತ್ರವನ್ನು ಏಕೆ ಬರೆದಿದ್ದೀರಿ ಎಂದು ಪ್ರಿಯಾಂಕ್ ಖರ್ಗೆ ಬಿಜೆಪಿ ಮುಖಂಡರಿಗೆ ತಿರುಗೇಟು ನೀಡಿದ್ದಾರೆ.

ಅಕ್ರಮ ನಡೆದಾಗ ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರಗಳಿದ್ದವು. ಆಯೋಗ ಮತ್ತು ಜಿಲ್ಲಾಡಳಿತದಲ್ಲಿ ಬಿಜೆಪಿ ಸರ್ಕಾರ ನಿಯೋಜಿಸಿದ್ದ ಅಧಿಕಾರಿಗಳೇ ಕೆಲಸಮಾಡುತ್ತಿದ್ದರು. ಅವರದೇ ಅಧಿಕಾರಿ ಪ್ರಾಥಮಿಕ ವಿಚಾರ ನಡೆಸಿ, ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ. ಈ ಕನಿಷ್ಠಜ್ಞಾನವೂ ಇಲ್ಲದ್ದಂತೆ ಬಿಜೆಪಿಯವರು ರಾಹುಲ್‌ಗಾಂಧಿಯವರ ಸಾಮಾನ್ಯ ಪ್ರಜ್ಞೆಯನ್ನು ಪ್ರಶ್ನಿಸುತ್ತಿದ್ದಾರೆ.... ಎಂದುಕಿಡಿ ಕಾರಿದ್ದಾರೆ.



ಪತ್ರಿಕಾಗೋಷ್ಟಿಯಲ್ಲಿದ್ದ ಶಾಸಕ ಬಿ.ಆರ್. ಪಾಟೀಲ್, 2023ರ ವಿಧಾನಸಭೆ ಚುನಾವಣೆಗೂ ಮುನ್ನ ತಮ್ಮ ಪಕ್ಷದ ಕಾರ್ಯಕರ್ತ ವಿಜಯ್‌ಕುಮಾರ್ ಕರೆ ಮಾಡಿ, ನನ್ನ ಹೆಸರನ್ನು ಮತದಾರರ ಪಟ್ಟಿಯಿಂದ ಡಿಲೀಟ್ ಮಾಡಲಾಗಿದೆ ಎಂದು ಬಿಎಲ್‌ಓ ಹೇಳಿರುವುದಾಗಿ ತಿಳಿಸಿದರು. ಆತಂಕಗೊಂಡ ನಾವು ಪರಿಶೀಲಿಸಿದಾಗ 6018 ಹೆಸರುಗಳ ಡಿಲೀಟ್‌ಗೆ ಅರ್ಜಿ ಬಂದಿರುವುದು ಪತ್ತೆಯಾಯಿತು ಎಂದು ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ತಿಳಿಸಿದ್ದಾರೆ.

ಈ ಬಗ್ಗೆ ಕಲಬುರಗಿ ಜಿಲ್ಲಾಧಿಕಾರಿ, ಅಳಂದ ತಹಶೀಲ್ದಾರ್, ರಾಜ್ಯ ಮುಖ್ಯಚುನಾವಣಾಧಿಕಾರಿ, ಕೇಂದ್ರ ಮುಖ್ಯ ಚುನಾವಣಾಧಿಕಾರಿಗಳಿಗೆ ಹಂತಹಂತವಾಗಿ ದೂರು ನೀಡಲಾಯಿತು. ಆಗ ಹೆಸರು ಡಿಲಿಟ್ ಮಾಡುವ ಪ್ರಕ್ರಿಯೆ ನಿಲ್ಲಿಸಿದ್ದರು. ಇಲ್ಲದೇ ಹೋದರೆ ಹೆಸರುಗಳು ಡಿಲಿಟ್ ಆಗಿ ನಾನು ಸೋಲುತ್ತಿದ್ದೆ ಎಂದು ಅಚ್ಚರಿ ವ್ಯಕ್ತಪಡಿಸಿದ್ದು, ನಿವೃತ ಶಿಕ್ಷಕ ಸೂರ್ಯಕಾಂತ್ ಗೋವಿಂದ್ ಮತ್ತು ಗೋದಬಾಯಿ ಎಂಬ ಅನಕ್ಷರಸ್ತ ಮಹಿಳೆ ಹೆರಿನಲ್ಲಿ ತಲಾ 12 ಜನರ ಹೆಸರು ಡಿಲಿಟ್ ಮಾಡಲು ಫಾರಂ ನಂ-7 ಸಲ್ಲಿಕೆಯಾಗಿವೆ. ಇದು ಅರ್ಜಿ ಸಲ್ಲಿಸಿದವರಿಗೂ ಗೊತ್ತಿಲ್ಲ, ಹೆಸರು ಡಿಲಿಟ್ ಆಗಬೇಕಾದವರಿಗೂ ಮಾಹಿತಿ ಇಲ್ಲ ಎಂದು ವಿವರಿಸಿದರು. ಒಟ್ಟಾರೆ, ಮತಗಳ್ಳತನ ವಿವಾದ ಈಗ ಭುಗಿಲೆದ್ದು ಕುಳಿತಿದ್ದು, ಬ್ಯಾಲೆಟ್ ಪೇಪರ್ ಮರು ಸ್ಥಾಪಿಸಲು ಕಾಂಗ್ರೆಸ್ ನಿರ್ಧರಿಸಿದೆ. ಇದಕ್ಕೆ ಬಿಜೆಪಿ ಧುರೀಣರಿಂದ ವಿರೋಧ ವ್ಯಕ್ತವಾದರೂ ಆಡಳಿತ ಸರ್ಕಾರದ ಕೈ ಮೇಲಾಗುವ ಎಲ್ಲಾ ಸೂಚನೆಗಳಿವೆ...

### ಫಾರ್ಮ್ 7 ದುರುಪಯೋಗ?!

ಮೇ 2023ರ ವಿಧಾನಸಭಾ ಚುನಾವಣೆಗೂ ಮುನ್ನ ಮತದಾರರನ್ನು ಸಾಮೂಹಿಕವಾಗಿ ಡಿಲೀಟ್ ಮಾಡಲು ಹಿಂದಿನ ಬಿಜೆಪಿ ಸರ್ಕಾರದ ಅಡಿಯಲ್ಲಿ ಫಾರ್ಮ್ 7 ಅನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ.

ಚುನಾವಣೆಗೆ ಮುನ್ನ ನಮ್ಮ ಪಕ್ಷದ ಬೆಂಬಲಿಗರ ಮತಗಳನ್ನು ವ್ಯವಸ್ಥಿತವಾಗಿ ಅಳಿಸಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪತ್ರಿಕಾಗೋಷ್ಠಿ ನಡೆಸಿ ವಿವರ ನೀಡಿದ್ದಾರೆ. ಈ ನಡುವೆ, ಕಲಬುರಗಿ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಹ ಅಳಂದಲ್ಲಿ ನಡೆದ ಘಟನೆಗಳ ಬಗ್ಗೆ ವಿವರ ನೀಡಿದ್ದಾರೆ.

ಫಾರ್ಮ್ 7 ಎಂಬುದು ಇನ್ನೊಬ್ಬ ವ್ಯಕ್ತಿಯ ಹೆಸರನ್ನು ಸೇರಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಲು ಅಥವಾ ಒಬ್ಬರ ಹೆಸರನ್ನು ಡಿಲೀಟ್ ಮಾಡಲು ಅಥವಾ ಸಾವು ಹಾಗೂ ಸ್ಥಳಾಂತರಗೊಂಡಿದ್ದರೆ ಅವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವಂತೆ ಕೋರುವ ಅರ್ಜಿಯಾಗಿದೆ. ಅಳಂದ (ಕಲಬುರಗಿ ಜಿಲ್ಲೆಯಲ್ಲಿ) ದಲ್ಲಿನ ವೋಟ್ ಚೋರಿಯು ದೊಡ್ಡ ಪ್ರಮಾಣದ ಮತದಾರರ ಅಳಿಸುವಿಕೆಯ ಆಘಾತಕಾರಿ ಪ್ರಕರಣವಾಗಿದೆ. ಮೇ 2023ರ ವಿಧಾನಸಭಾ ಚುನಾವಣೆಗೆ ಮುನ್ನ, ಬಿಜೆಪಿ ಅಧಿಕಾರದಲ್ಲಿದ್ದಾಗ ಫಾರ್ಮ್ 7 ಅನ್ನು ದುರುಪಯೋಗಪಡಿಸಿಕೊಂಡು ಮತದಾರರನ್ನು ಸಾಮೂಹಿಕವಾಗಿ ಡಿಲೀಟ್ ಮಾಡಲಾಗಿದೆ ಎಂದು ಖರ್ಗೆ ಹೇಳಿದ್ದಾರೆ.

ಸ್ವಯಂಚಾಲಿತ ಸಾಫ್ಟ್‌ವೇರ್ ಮತ್ತು ನಕಲಿ ಲಾಗಿನ್‌ಗಳನ್ನು ಬಳಸಿಕೊಂಡು ಒಟ್ಟು 6,018 ಮತದಾರರನ್ನು ಡಿಲೀಟ್ ಮಾಡಲು ಪ್ರಯತ್ನಿಸಲಾಗಿದೆ. ಪರಿಶೀಲನೆಯಲ್ಲಿ 5,994 ಮತದಾರರು ನಕಲಿ ಎಂದು ಕಂಡುಬಂದಿದೆ. ಕೇವಲ 24 ನಿಜವಾದ ಮತದಾರರು ಮಾತ್ರ ಇದ್ದಾರೆ ಎಂದು ಖರ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ವಂಚನೆ ಪತ್ತೆಯಾಗುವ ಮೊದಲು 2,494 ಮತದಾರರನ್ನು ವಾಸ್ತವವಾಗಿ ಡಿಲೀಟ್ ಮಾಡಲಾಗಿದೆ. ವಿಶೇಷವಾಗಿ ದಲಿತ ಮತ್ತು ಅಲ್ಪಸಂಖ್ಯಾತ ಮತದಾರರನ್ನು ಒಳಗೊಂಡ ಪ್ರಬಲ ಕಾಂಗ್ರೆಸ್ ಬೂತ್‌ಗಳನ್ನು ಗುರಿಯಾಗಿಸಿ ಡಿಲೀಟ್ ಮಾಡಲಾಗಿದೆ ಎಂದು ಖರ್ಗೆ ಆರೋಪಿಸಿದ್ದಾರೆ.

ಒಂದು ಹಂತದಲ್ಲಿ, ಕೇವಲ 14 ನಿಮಿಷಗಳಲ್ಲಿ 12 ಮತದಾರರನ್ನು ಡಿಲೀಟ್ ಮಾಡಲಾಗಿದೆ. ಇದು ಅತ್ಯಾಧುನಿಕ ಮತ ಚೋರಿ ಕಾರ್ಖಾನೆ ಎಂದು ಖರ್ಗೆ ವಾಗ್ದಾಳಿ ನಡೆಸಿದ್ದಾರೆ. ಮತ್ತೊಂದು ಪ್ರಕರಣದಲ್ಲಿ, 12 ಮತದಾರರನ್ನು ಅಳಿಸಲು 63 ವರ್ಷದ ಮಹಿಳೆಯ ಗುರುತನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಕರ್ನಾಟಕ ಸಿಐಡಿ, ಐಪಿ ಲಾಗ್‌ಗಳು, ಒಟಿಪಿ ಟ್ರೇಲ್‌ಗಳು, ಸಾಧನ ಐಡಿಗಳು ಮತ್ತು ಲಾಗಿನ್ ವಿವರಗಳನ್ನು ಕೋರಿ ಭಾರತದ ಚುನಾವಣಾ ಆಯೋಗಕ್ಕೆ 18 ಪತ್ರಗಳನ್ನು ಕಳುಹಿಸಿದೆ. ಆದರೆ ನಿರ್ಣಾಯಕ ಡೇಟಾವನ್ನು ಹಂಚಿಕೊಳ್ಳಲು ಚುನಾವಣಾ ಆಯೋಗ ನಿರಾಕರಿಸಿದೆ ಎಂದು ಆರೋಪಿಸಿದ್ದಾರೆ. ಇದು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿದೆ. ಈ ಡಿಲೀಟ್ ಮಾಡುವ ದಾಖಲೆಗಳನ್ನು ಯಾರು ಅನುಮೋದಿಸಿದರು? ಒಟಿಪಿ ಆಡಿಟ್ ಟ್ರಯಲ್ ಎಲ್ಲಿದೆ? ಅಳಿಸಲಾದ ಮತದಾರರನ್ನು ಯಾವಾಗ ಮರುಸ್ಥಾಪಿಸಲಾಗುತ್ತದೆ? ಇಸಿಐ ಸಿಐಡಿಯೊಂದಿಗೆ ಸಹಕರಿಸಲು ಏಕೆ ನಿರಾಕರಿಸುತ್ತಿದೆ? ಇಸಿಐ ಯಾರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ? ವಂಚನೆ ಇಷ್ಟೊಂದು ಸ್ಪಷ್ಟವಾದಾಗ, ಚುನಾವಣಾ ಆಯೋಗ ಇನ್ನೇನು ಪುರಾವೆಗಳಿಗಾಗಿ ಕಾಯುತ್ತಿದೆ? ಅವರು ಯಾರನ್ನು ರಕ್ಷಿಸುತ್ತಿದ್ದಾರೆ? ಎಂದು ಪ್ರಶ್ನೆಗಳ ಸುರಿಮಳೆಗೈದಿದ್ದಾರೆ ಪ್ರಿಯಾಂಕ್ ಖರ್ಗೆ! ಚುನಾವಣಾ ಆಯೋಗ ಇದಕ್ಕೆಲ್ಲ ಏನು ಉತ್ತರಿಸುತ್ತದೋ ಕಾದು ನೋಡಬೇಕಿದೆ!!

## ಚೋರಿ ನಡುವೆಯೂ ಗೆದ್ದಿದ್ದು ಕಾಂಗ್ರೆಸ್ಸೇ!

ಕಲ್ಯಾಣ ಕರ್ನಾಟಕ ಭಾಗದ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ, 2023ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಬಿ.ಆರ್. ಪಾಟೀಲ್ ಗೆಲುವು ಸಾಧಿಸಿದ್ದರು. ಇವರು ತಮ್ಮ ಪ್ರತಿಸ್ಪರ್ಧಿ, ಬಿಜೆಪಿಯ ಸುಭಾಷ್ ಗುತ್ತೇದಾರ ವಿರುದ್ಧ 10,348 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಇನ್ನು, ಈ ಕ್ಷೇತ್ರ ಬೀದರ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದು ಅಲ್ಲಿ, ಕಾಂಗ್ರೆಸ್ಸಿನ ಸಾಗರ್ ಖಂಡ್ರೆ (2024) ಗೆಲುವು ಸಾಧಿಸಿದ್ದರು. 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗುತ್ತೇದಾರ್ ಗೆಲುವು ಸಾಧಿಸಿದ್ದರು, ಗೆಲುವಿನ ಅಂತರ ಕೇವಲ 697 ಆಗಿತ್ತು. 1994ರ ಚುನಾವಣೆಯಿಂದಲೂ, ಬಿಆರ್ ಪಾಟೀಲ್ ಮತ್ತು ಸುಭಾಷ್ ಗುತ್ತೇದಾರ್ ನಡುವೆ ಫೈಟ್ ನಡೆಯುತ್ತಲೇ ಇದೆ. ನಾಲ್ಕು ಬಾರಿ ಗುತ್ತೇದಾರ್ ಗೆದ್ದಿದ್ದರೆ, ಮೂರು ಬಾರಿ ಪಾಟೀಲ್ ಗೆಲುವು ಸಾಧಿಸಿದ್ದರು.

ರಾಹುಲ್ ಗಾಂಧಿಯವರ ವೋಟ್ ಚೋರಿ ಆರೋಪದ ನಡುವೆಯೂ, ಕಾಂಗ್ರೆಸ್ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ ಮತ್ತು ಗೆಲುವಿನ ಅಂತರವೂ ಹೆಚ್ಚಿದೆ. ಒಂದು ವೇಳೆ, ಕಾಂಗ್ರೆಸ್ ಆರೋಪಿಸಿದಂತೆ, 6,018 ಮತಗಳು ಡಿಲಿಟ್ ಆಗದೇ ಇದ್ದ ಪಕ್ಷದಲ್ಲಿ ಕಾಂಗ್ರೆಸ್ ಗೆಲುವಿನ ಅಂತರ ಹೆಚ್ಚಾಗಬೇಕಿತ್ತು. ಪ್ರಿಯಾಂಕ್ ಖರ್ಗೆ ಆರೋಪದಂತೆ, ಡಿಲಿಟ್ ಆದವರೆಲ್ಲರೂ ಕಾಂಗ್ರೆಸ್ ಮತದಾರರಾಗಿದ್ದರೆ, ಅವರೆಲ್ಲರೂ ವೋಟ್ ಮಾಡಿದ್ದರೆ, ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿನ ಅಂತರ ಸುಮಾರು ಹದಿನಾರು ಸಾವಿರ ಸುಮಾರಿಗೆ ಇರಬೇಕಾಗಿತ್ತು. ಇಲ್ಲಿ ಗಮನಿಸಬೇಕಾದ ವಿಚಾರ ಏನಂದರೆ, ಮತದಾರರ ಹೆಸರು ಡಿಲಿಟ್ ಆಗಿರುವುದನ್ನು ಕ್ಷೇತ್ರದ ಶಾಸಕ ಬಿ.ಆರ್. ಪಾಟೀಲ್ ಹಿಂದಿನಿಂದಲೂ ಆರೋಪಿಸುತ್ತಲೇ ಬರುತ್ತಿದ್ದರು. ಈಗ, ಗೆದ್ದ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾಗುತ್ತಿರುವ ಮತದಾರರ ಹೆಸರು ಡಿಲಿಟ್ ಆಗಿರುವ ವಿದ್ಯಮಾನವನ್ನೇ ರಾಹುಲ್ ಗಾಂಧಿ, ಉದಾಹರಣೆಯಾಗಿ ತೆಗೆದುಕೊಂಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಜಮಖಂಡಿ ನಗರ ಪಿಎಸ್ಐ ಅನಿಲಕುಮಾರ ಕುಂಬಾರ ಮತ್ತು ತಂಡದ ಕಾರ್ಯಾಚರಣೆ

# 24 ಮೋಟಾರ್ ಬೈಕ್‌ಗಳನ್ನು ಕಳ್ಳತನ ಮಾಡಿದ್ದ ಅಂತರ್ ಜಿಲ್ಲಾ ಖತರ್‌ನಾಕ್ ಕಳ್ಳನ ಬಂಧನ!


ಖತರ್‌ನಾಕ್ ಬೈಕ್ ಕಳ್ಳ
ಲಕ್ಕಪ್ಪ ಬೋರವ್ವ ಮಾದರ

**ಮಹಾ ಖತರ್‌ನಾಕ್ ಅಂತರ್ ಜಿಲ್ಲಾ ಕಳ್ಳನೊಬ್ಬನು ತನ್ನ ಚೈನಿಗಾಗಿ ಹಣ ಹೊಂದಿಸಲು ಜನನಿಬಿಡ ಸ್ಥಳಗಳಲ್ಲಿ ಹ್ಯಾಂಡಲ್ ಲಾಕ್ ಮಾಡದೇ ನಿಲ್ಲಿಸಿ ಹೋಗಿದ್ದ ಮೋಟಾರ್ ಬೈಕ್‌ಗಳನ್ನೇ ಗುರಿಯಾಗಿರಿಸಿಕೊಂಡು ಅತ್ಯಂತ ಉಪಾಯದಿಂದ ಕ್ಷಣಮಾತ್ರದಲ್ಲಿ ಸದ್ದಿಲ್ಲದೇ ಕದ್ದುಕೊಂಡು ಪರಾರಿಯಾಗುತ್ತಿದ್ದನು. ಪದೇ ಪದೇ ನಡೆಯುತ್ತಲಿದ್ದ ಮೋಟಾರ್ ಬೈಕ್ ಕಳ್ಳತನ ಪ್ರಕರಣಗಳನ್ನು ಸವಾಲಾಗಿ ಸ್ವೀಕರಿಸಿದ ದಕ್ಷ ಹಾಗೂ ಧಾಡಸಿ ಪಿಎಸ್ಐ ಅನಿಲಕುಮಾರ ಕುಂಬಾರ ಮತ್ತು ತನಿಖಾ ತಂಡದವರು ಕಾರ್ಯಾಚರಣೆ ಕೈಗೊಂಡರು. ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿಗಳಾದ ಪ್ರಸನ್ ದೇಸಾಯಿ, ಮಹಾಂತೇಶ್ವರ ಜಿದ್ದಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ನಿರ್ದೇಶನದಲ್ಲಿ ಸಿಪಿಐ ಎಂ.ಡಿ. ಮಡ್ಡಿ ನೇತೃತ್ವದಲ್ಲಿ ಖಚಿತ ಮಾಹಿತಿ ಆಧರಿಸಿ ಖತರ್‌ನಾಕ್ ಅಂತರರಾಜ್ಯ ಬೈಕ್ ಕಳ್ಳನನ್ನು ಬಂಧಿಸಿ ಆತನ ವಶದಲ್ಲಿದ್ದ 11 ಲಕ್ಷ ರೂ.ಗಳ ಮೌಲ್ಯದ 24 ವಿವಿಧ ಕಂಪನಿಯ ಮೋಟಾರ್ ಬೈಕ್‌ಗಳನ್ನು ಜಪ್ತಿ ಮಾಡಿಕೊಂಡು ಜೈಲಿಗಟ್ಟಿರುವ ಪ್ರಕರಣ ಬಾಗಲಕೋಟ ಜಿಲ್ಲೆಯ ಜಮಖಂಡಿ ನಗರ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

ಎಲ್ಲರಂತೆ ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ಮಹಾ ಹರಾಮಿ ಖತರ್‌ನಾಕ್ ಅಂತರ ಜಿಲ್ಲಾ ಕಳ್ಳನೊಬ್ಬನು ತನ್ನ ಕಿಲಾಡಿ ಬುದ್ಧಿ ಉಪಯೋಗಿಸಿ ಕಂಡ...


ಎಸ್ಪಿ ಸಿದ್ಧಾರ್ಥ ಗೋಯಲ್


ಅ॥ ಎಸ್ಪಿ(ಕಾ.ಸು) ಪ್ರಸನ್ ದೇಸಾಯಿ


ಅ॥ ಎಸ್ಪಿ(ಕ್ರೈಂ) ಮಹಾಂತೇಶ್ವರ ಜಿದ್ದಿ


ಡಿವೈಎಸ್ಪಿ ಎಸ್. ರೋಷನ್ ಜಮೀರ್

ಕಂಡವರ ಮೋಟಾರ್ ಬೈಕ್‌ಗಳನ್ನು ಸದ್ದಿಲ್ಲದೇ ಅದ್ಯಾರಿಗೂ ಗೊತ್ತಾಗದಂತೆ ಎಗರಿಸಿಕೊಂಡು ತನ್ನ ಮನೆಯ ಮುಂದಿರಿಸಿಕೊಂಡಿದ್ದನು. ದಿಢೀರನೇ ಹಣ ಮಾಡಲು ಕದ್ದ ಬೈಕ್‌ಗಳನ್ನು ಮಾರಾಟ ಮಾಡಲು ದುಷ್ಟ ಯೋಜನೆಯನ್ನು ಹಾಕಿಕೊಂಡು ಕಾಯುತ್ತಲಿದ್ದನು. ಆದರೆ ಬಾಗಲಕೋಟ ಜಿಲ್ಲೆಯ ಜಮಖಂಡಿ ನಗರದ ಚತುರ ಮತ್ತು ಧಾಡಸಿ ಪಿಎಸ್ಐ ಅನಿಲಕುಮಾರ ಕುಂಬಾರ ಮತ್ತು ತಂಡದವರ ಕೈಗೆ ಸಿಕ್ಕು ಜೈಲಿನ ಕಂಬಿ ಹಿಂದೆ ತಂಗಳು ಮುರಿಯುತ್ತಿದ್ದಾನೆ.

**ಇದ್ದಕ್ಕಿದ್ದಂತೆ ಮೋಟಾರ್ ಬೈಕ್ ಮಾಯ...**

ಇಂದು ಜಮಖಂಡಿ ಪಟ್ಟಣ ಇದ್ದಕ್ಕಿದ್ದಂತೆ ಬೆಳೆದು ನಿಂತಿದೆ. ತಾಲ್ಲೂಕಿನ ಹಾಗೂ ಹಳ್ಳಿಗಳ ಜನರ ಜೀವನಾಡಿಯಾಗಿರುವ ಜಮಖಂಡಿ ನಗರದಲ್ಲಿ ಮೇಲಾಧಿಕಾರಿಗಳ ನಿರ್ದೇಶನದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು


ಖತರ್‌ನಾಕ್‌ನಿಂದ ಕಳ್ಳತನ ಮಾಡಿದ್ದ 24 ಮೋಟಾರ್ ಬೈಕ್‌ಗಳನ್ನು ವಶಪಡಿಸಿಕೊಂಡ ಜಮಖಂಡಿ ನಗರ ಪೊಲೀಸರು

ಕಾಪಾಡಿಕೊಂಡು ಬರುವಲ್ಲಿ ಪಿಎಸ್ಐಗಳಾದ ಅನಿಲ ಕುಮಾರ ಕುಂಬಾರ, ನಾಗರಾಜ ಕಾಜಗಾರ ಮತ್ತು ಸಿಬ್ಬಂದಿಗಳ ಶ್ರಮ ಬಹಳಷ್ಟಿದೆ.

ಇಂತಹುದರಲ್ಲಿ ದಿನಾಂಕ 07.08.2025ರಂದು ಜಮಖಂಡಿ ತಾಲ್ಲೂಕಿನ ಸಿದ್ದಾಪೂರದ ನಿವಾಸಿ ಯಲ್ಲಪ್ಪ ಭೀಮಪ್ಪ ಕಾಗವಾಡ (60 ವ) ಎಂಬಾತನು ಜಮಖಂಡಿ ನಗರದ ಗೌಳಿಗಲ್ಲಿ ಕ್ರಾಸ್ ಹತ್ತಿರ ಮಾರುತಿ ಮಂದಿರದ ಮುಂದೆ ಬೈಕ್ ನಿಲ್ಲಿಸಿ ಕೆಲಸ ಮುಗಿಸಿ ಬರುವಷ್ಟರಲ್ಲಿ ಅದ್ಯಾರೋ ಕಳ್ಳರು ಕೆಎ-48 ಇಎ-2749 ನೇದ್ದನ್ನು ಎಗರಿಸಿದ್ದರು. ತನ್ನ ಬೈಕ್ ಕಾಣದಾದಾಗ ಯಲ್ಲಪ್ಪ ಗಾಬರಿಯಿಂದ ಹೌಹಾರಿದನು. ಅತ್ತಿತ್ತ ಹುಡುಕಾಡಿದರು ಕೂಡಾ ಏನೂ ಪ್ರಯೋಜನವಾಗಲಿಲ್ಲ.

**ಪೊಲೀಸರಿಗೆ ದೂರು ನೀಡಿದನು...**

ತನ್ನ ವೋಟಾರ್ ಬೈಕ್ ಕಳೆದುಕೊಂಡು ಕಂಗಾಲಾಗಿದ್ದ ಯಲ್ಲಪ್ಪ ಭೀಮಪ್ಪ ಕಾಗವಾಡ ನೇರವಾಗಿ ಜಮಖಂಡಿ ನಗರ ಪೊಲೀಸ್ ಠಾಣೆಗೆ ಬಂದು ಕರ್ತವ್ಯದ ಮೇಲಿದ್ದ ಪಿಎಸ್ಐ (ಕಾ.ಸು) ಅನಿಲಕುವಾರ ಕುಂಬಾರ

✍ ಮನ್ನಾಪೂರ


ಸಿಪಿಐ ಎಂ.ಡಿ. ಮಡ್ಡಿ


ಪಿಎಸ್ಐ ಅನಿಲಕುಮಾರ್ ಕುಂಬಾರ


ಪಿಎಸ್ಐ ನಾಗರಾಜ ಕಾಜಗಾರ

ಅವರನ್ನು ಕಂಡು ಬೈಕ್ ಕಳ್ಳತನದ ಕುರಿತು ತಿಳಿಸಿದನು. ತಕ್ಷಣ ಜಾಗ್ರತರಾದ ಪಿಎಸ್ಐ ಕುಂಬಾರ ಅವರು ಕ್ರೈಂ ಪಿಎಸ್ಐ ನಾಗರಾಜ ಕಾಜಗಾರರೊಂದಿಗೆ ಸಮಾಲೋಚಿಸಿದರು. ಜಮಖಂಡಿ ವಲಯದ ಸಿಪಿಐ ಎಂ.ಡಿ. ಮಡ್ಡಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ಅವರಿಗೆ ವಿಷಯ ತಿಳಿಸಿದರು. ಅವರ ನಿರ್ದೇಶನದಂತೆ ಪ್ರಕರಣವನ್ನು ದಾಖಲಿಸಿಕೊಳ್ಳಲಾಯಿತು.

**ಸವಾಲಾಗಿ ಪ್ರಕರಣ ಸ್ವೀಕಾರ...**

ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ ಅದೆಷ್ಟೋ ಜಟಿಲ ಮತ್ತು ನಿಗೂಢವಾದ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿ ಭೇದಿಸಿ ಹಿರಿಯ ಅಧಿಕಾರಿಗಳಿಂದ ಮೆಚ್ಚುಗೆ ಪಡೆದಿದ್ದಾರೆ. ಕರ್ತವ್ಯದಲ್ಲಿ ಚತುರತೆ ಮತ್ತು ಧಾಡಸಿತನ ಮೈಗೂಡಿಸಿಕೊಂಡಿರುವ ಪಿಎಸ್ಐ (ಕಾ.ಸು) ಅನಿಲಕುಮಾರ, ಕ್ರೈಂ ಪಿಎಸ್ಐ ನಾಗರಾಜ ಕಾಜಗಾರ ಮತ್ತು ಸಿಬ್ಬಂದಿಗಳು ಹೆಚ್ಚುತ್ತಿರುವ ಮೋಟಾರ್ ಬೈಕ್ ಕಳ್ಳತನ ಪ್ರಕರಣಗಳನ್ನು ಶತಾಯ-ಗತಾಯ ಪತ್ತೆ ಮಾಡುವುದಕ್ಕಾಗಿ, ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿಗಳಾದ ಪ್ರಸನ್ ದೇಸಾಯಿ, ಮಹಾಂತೇಶ್ವರ ಜಿದ್ದಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ಇವರ ನಿರ್ದೇಶನದಲ್ಲಿ ದಿಟ್ಟ ಸಿಪಿಐ ಎಂ.ಡಿ. ಮಡ್ಡಿ ಇವರ ನೇತೃತ್ವದಲ್ಲಿ ಸವಾಲಾಗಿ ಸ್ವೀಕರಿಸಿದರು. ಇದಕ್ಕಾಗಿ ಅಗತ್ಯ ನಿರ್ದೇಶನಗಳನ್ನು ಪಡೆದುಕೊಂಡಿದ್ದರು.

ಡಿವೈಎಸ್ಪಿ ಎಸ್. ರೋಷನ್ ಜಮೀರ್ ಅವರು ಜಮಖಂಡಿ ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ನಡೆದಿರುವ ಬೈಕ್ ಕಳ್ಳತನ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದರು. ಇದಕ್ಕಾಗಿ ಸಿಪಿಐ ಎಂ.ಡಿ. ಮಡ್ಡಿ ಅವರೊಂದಿಗೆ ಸಮಾಲೋಚಿಸಿ ಬೈಕ್ ಕಳ್ಳರ ಹೆಡೆಮುರಿ ಕಟ್ಟಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದರು. ಅದರಂತೆ ಸಿಪಿಐ ಎಂ.ಡಿ. ಮಡ್ಡಿ ಅವರು ಪಿಎಸ್ಐಗಳಾದ ಅನಿಲಕುಮಾರ ಕುಂಬಾರ, ನಾಗರಾಜ ಕಾಜಗಾರ ಅವರನ್ನು ಕರೆಯಿಸಿ ಬೈಕ್ ಕಳ್ಳತನಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

**ವಿಶೇಷ ತನಿಖಾ ತಂಡ ರಚನೆ...**

ಸಿಪಿಐ ಎಂ.ಡಿ. ಮಡ್ಡಿ ಅವರು ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿ (ಕಾ.ಸು) ಪ್ರಸನ್ ದೇಸಾಯಿ, ಹೆಚ್ಚುವರಿ ಎಸ್ಪಿ(ಕ್ರೈಂ) ಮಹಾಂತೇಶ್ವರ ಜಿದ್ದಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ಅವರಿಂದ ನಿರ್ದೇಶನ ಪಡೆದುಕೊಂಡು ತಮ್ಮ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಲು ನಿರ್ಧರಿಸಿದರು. ತಂಡದಲ್ಲಿ ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ, ಪಿಎಸ್ಐ (ಕ್ರೈಂ) ನಾಗರಾಜ ಕಾಜಗಾರ, ಸಿಬ್ಬಂದಿಗಳಾದ ಸಂಗಪ್ಪ, ಕೋಟಿ, ಪರಶುರಾಮ ಘಾಟಗೆ, ಮುತ್ತಪ್ಪ ಮಾಂಗ, ಪ್ರಕಾಶ ಹೊಸಮನಿ, ನಾಗರಾಜ ಬಿಸಲದಿನ್ನಿ, ರಾಜು ಪೂಜೇರಿ, ರಾಜಶೇಖರ ಮನಗೂಳಿ ಇವರನ್ನು ಒಳಗೊಂಡಂತೆ ತನಿಖಾ ತಂಡ ರಚಿಸಲಾಯಿತು. ತಂಡದ ನೇತೃತ್ವ ವಹಿಸಿಕೊಂಡಿದ್ದ ಸಿಪಿಐ ಎಂ.ಡಿ. ಮಡ್ಡಿ ಸೂಕ್ತ ನಿರ್ದೇಶನಗಳನ್ನು ನೀಡಿ 'ಗೋ ಅಹೆಡ್' ಎಂದು ಹುರಿದುಂಬಿಸಿದ್ದರು.

**ಸಿಕ್ಕುಬಿದ್ದ ಅಂತರ್ ಜಿಲ್ಲಾ ಖತರ್‌ನಾಕ್ ಕಳ್ಳ...**

ವಿಶೇಷ ತನಿಖಾ ತಂಡದ ನಾಯಕತ್ವ ವಹಿಸಿಕೊಂಡಿದ್ದ ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ ಅಪರಾಧ ಪರಿಶೋಧನೆಯಲ್ಲಿ ತುಂಬಾ ಚತುರರು. ಸೆಪ್ಟೆಂಬರ್ ತಿಂಗಳ ಎರಡನೇ ವಾರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ 22 ಕಳ್ಳತನದ ಬೈಕ್ ಪತ್ತೆ ಮಾಡಿ ಕಳ್ಳನನ್ನು ಜೈಲಿಗಟ್ಟಿದ್ದರು.

ಅದರ ಮುಂದುವರೆದ ಭಾಗ ಎನ್ನುವಂತೆ ದಿನಾಂಕ 07.08.2025ರಂದು ಯಲ್ಲಪ್ಪ ಭೀಮಪ್ಪ ಕಾಗವಾಡ ನೀಡಿದ ಬೈಕ್ ಕಳ್ಳತನದ ದೂರನ್ನು ಆಧರಿಸಿ ಕಾರ್ಯಾಚರಣೆಗೆ ಇಳಿದ ವಿಶೇಷ ತನಿಖಾ ತಂಡ ಎಲ್ಲಾ ಆಯಾಮಗಳಿಂದಲೂ ಬೈಕ್ ಕಳ್ಳರ ಮಾಹಿತಿ ಹೆಕ್ಕಿ ತೆಗೆಯಲಾರಂಭಿಸಿತು. ಜಮಖಂಡಿ ನಗರದ ಗೌಳಿಗಲ್ಲಿ ಕ್ರಾಸ್ ಹತ್ತಿರ ಮಾರುತಿ ಮಂದಿರದ ಹತ್ತಿರವಿದ್ದ ಸಿಸಿಟಿವಿ ಫುಟೇಜ್ ಪರಿಶೀಲಿಸಲಾಗಿ ಖತರ್‌ನಾಕ್ ಕಳ್ಳ ಸಿಕ್ಕುಬಿದ್ದಿದ್ದನು. ಇದರ ಆಧಾರದ ಮೇಲಿನಿಂದ ಆತ ಯಾರು? ಎಲ್ಲಿಯವನು? ಎಂಬ ಗೌಪ್ಯನೀಯ ಮಾಹಿತಿಗೆ ಮುಂದಾದಾಗ ಜಮಖಂಡಿ ತಾಲ್ಲೂಕಿನ ಮಧುರಖಂಡಿಯ ಮಹಾಹರಾಮಿ ಎಂಬುದು ತಿಳಿದು ಬಂದಿತು. ಈತ ಲಕ್ಕಪ್ಪ ಬೋರವ್ವ ಮಾದರ ಎಂಬ ಕಟ್ಟಡ ಕಟ್ಟುವ ಗೌಂಡಿಯಾಗಿದ್ದನು. ಈತನಿಗೆ ಹೆಂಡತಿ, ಮಕ್ಕಳು ಇದ್ದರೂ ಕೂಡಾ ದುಡ್ಡಿನ ದುರಾಸೆಗಾಗಿ ಈತ ಕಳ್ಳತನ ಮಾಡಿದ ಬಗ್ಗೆ ಕೂಡಾ ವಿವರ ಸಿಕ್ಕಿತ್ತು. ಖತರ್‌ನಾಕ್ ಕಳ್ಳ ಲಡದು ಲಕ್ಯಾನ ಕುಂಡಲಿಯನ್ನು ಅಂಗೈಲಿರಿಸಿಕೊಂಡ ತನಿಖಾ ತಂಡ ಸಿಪಿಐ ಎಂ.ಡಿ. ಮಡ್ಡಿ, ಪಿಎಸ್ಐ (ಕಾ.ಸು) ಅನಿಲಕುವಾರ ಕುಂಬಾರರ ವುುಂದೆ ದಿ. 18-09-2025ರಂದು ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಪೊಲೀಸರನ್ನು ಯಾಮಾರಿಸಲು ಪ್ರಯತ್ನಿಸಿದ ವಂಚಕನನ್ನು ಸಲೀಸಾಗಿ ಬಾಯಿ ಬಿಡಿಸಲಾಯಿತು.

**24 ಮೋಟಾರ್ ಬೈಕ್ ಜಪ್ತಿ...**

ಮೂಲತಃ ಕಟ್ಟಡ ನಿರ್ಮಾಣದ ಗೌಂಡಿ ಆಗಿದ್ದ ಲಕ್ಕಪ್ಪ ಬೋರವ್ವ ಮಾದರ ತನಗಿರುವ ಖತರ್‌ನಾಕ್ ಐಡಿಯಾದಿಂದ ಹ್ಯಾಂಡಲ್ ಲಾಕ್‌ಮಾಡದೇ ಇರುವ ಬೈಕ್‌ಗಳನ್ನು ಟಾರ್ಗೆಟ್ ಮಾಡಿ ಸದ್ದಿಲ್ಲದೇ ಎಗರಿಸುತ್ತಿದ್ದನು. ತುಸು ದೂರ ಅಂತರ ಬಂದು ಡೈರೆಕ್ಟ್ ಆಗಿ ಚಾಲು ಮಾಡಿಕೊಂಡು ಬಂದು ತನ್ನ ಮನೆಯ ಮುಂದಿರಿಸಿಕೊಂಡಿದ್ದನು. ಈತ ಅಂತರ್ ಜಿಲ್ಲಾ ಕಳ್ಳನಾಗಿದ್ದು ಬಾಗಲಕೋಟ ಜಿಲ್ಲೆಯ ಜಮಖಂಡಿ ನಗರ, ಮುಧೋಳ, ಲೋಕಾಪೂರ, ಬನಹಟ್ಟಿ, ಬೆಳಗಾವಿ ಜಿಲ್ಲೆಯ ಮೂಡಲಗಿ, ಮುರಗೋಡ, ಸವದತ್ತಿ ಮತ್ತು ವಿಜಯಪುರ ಜಿಲ್ಲೆಯ ಗಾಂಧಿಚೌಕ್, ಬಬಲೇಶ್ವರ, ಬಸವನ ಬಾಗೇವಾಡಿ ಪೊಲೀಸ್ ಠಾಣೆ ವ್ಯಾಪ್ತಿಗಳಲ್ಲಿ ಬೈಕ್ ಕಳ್ಳತನ ಮಾಡಿದ್ದು ಪತ್ತೆ ಆಗಿವೆ. ಈತನ ಮೇಲೆ ಮುಧೋಳ ಪೊಲೀಸ್ ಠಾಣೆಯಲ್ಲೂ ಗಂಭೀರ ಅಪರಾಧ ಪ್ರಕರಣ ದಾಖಲಾಗಿದ್ದು, ಆದಷ್ಟು ಬೇಗ ಬೈಕ್ ಮಾಲೀಕರನ್ನು ಪತ್ತೆಹಚ್ಚಿ ವಿಲೇವಾರಿ ಮಾಡಲಾಗುವುದೆಂದು ಸಿಪಿಐ ಮಡ್ಡಿ ತಿಳಿಸಿದ್ದಾರೆ. ಖತರ್‌ನಾಕ್ ಕಳ್ಳ ಇದೀಗ ಜೈಲು ಸೇರಿ ಮುದ್ದೆ ಮುರಿಯುತ್ತಿದ್ದಾನೆ.

**ವಿಶೇಷ ತನಿಖಾ ತಂಡದ ಕಾರ್ಯ ಶ್ಲಾಘನೀಯ...**

ಸಿಪಿಐ ಎಂ.ಡಿ. ಮಡ್ಡಿ ನೇತೃತ್ವದಲ್ಲಿ ಪಿಎಸ್ಐಗಳಾದ ಅನಿಲಕುಮಾರ ಕುಂಬಾರ, ನಾಗರಾಜ ಕಾಜಗಾರ ಮತ್ತು ಸಿಬ್ಬಂದಿಗಳ ಯಶಸ್ವಿ ಕಾರ್ಯಾಚರಣೆಯನ್ನು ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿ(ಕಾ.ಸು) ಪ್ರಸನ್ ದೇಸಾಯಿ, ಹೆಚ್ಚುವರಿ ಎಸ್ಪಿ (ಕ್ರೈಂ) ಮಹಾಂತೇಶ್ವರ ಜಿದ್ದಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ಶ್ಲಾಘಿಸಿದ್ದಾರೆ. ಜತೆಗೆ ಎಸ್ಪಿ ಸಿದ್ಧಾರ್ಥ ಅವರು ಇಡೀ ತನಿಖಾ ತಂಡಕ್ಕೆ ನಗದು ಬಹುಮಾನ ಘೋಷಿಸಿದ್ದಾರೆ.

☯


ಸಿಬ್ಬಂದಿಗಳಾದ ಎಸ್.ಹೆಚ್. ಕೋಟಿ, ಪಿ.ಹೆಚ್. ಘಾಟಗೆ, ಮುತ್ತು ಮಾಂಗ ಹಾಗೂ ಪ್ರಕಾಶ ಹೊಸಮನಿ

# ಸೌಜನ್ಯ ಕುಟುಂಬಕ್ಕೇ ಅಂಟಿದ ಬುರುಡೆ ಕಥೆ!

9 ☜

ಕಟ್ಟಲಾಗುತ್ತಿತ್ತು. ಹೀಗಾಗಿ ಈ ಅಂಶಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ನಡೆಸಿದರೆ ಸೌಜನ್ಯ ನಿಧನಳಾದ ನಂತರ ಕೈ ಕಟ್ಟಲಾಗಿದೆ ಎಂಬುದು ತಿಳಿದು ಬರುತ್ತದೆ. ತನಿಖಾಧಿಕಾರಿಗಳು ಸದರಿ ವೇಲ್‌ನಲ್ಲಿ ಮತ್ತು ಶವದ ಮೇಲಿದ್ದ ಬಟ್ಟೆಗಳಲ್ಲಿರಬಹುದಾದ ಕೈಬೆರಳಚ್ಚುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯದಿಂದ ಪಡೆದು ಕೊಂಡಿದ್ದರೆ, ನಿಜವಾದ ಆರೋಪಿಯನ್ನು ಆ ಸಂದರ್ಭದಲ್ಲಿಯೇ ಪತ್ತೆ ಹಚ್ಚಬಹುದಾಗಿತ್ತು. ಈಗಲೂ ಕಾಲ ಮಿಂಚಿಲ್ಲ, ಮಾನ್ಯ ನ್ಯಾಯಾಲಯದ (ಪೊಲೀಸರ) ವಶದಲ್ಲಿರ ಬಹುದಾದ ಸೌಜನ್ಯಳ ಸದರಿ ಬಟ್ಟೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ, ಅದರಲ್ಲಿ ವಿಥಲ ಗೌಡನ ಬೆರಳಚ್ಚು ಇದೆಯೆ ? ಎಂಬುದರ ವರದಿಯನ್ನು ಪಡೆದುಕೊಂಡು, ಸತ್ಯಾಂಶವನ್ನು ತಿಳಿದುಕೊಳ್ಳಬೇಕಿದೆ.


ವಿಠಲಗೌಡ

ಮೇಲ್ಕಂಡಂತೆ ಈಗಲೂ ಸದರಿ ಬಟ್ಟೆಗಳಿಂದ ಬೆರಳಚ್ಚು ಗುರುತುಗಳನ್ನು ಪತ್ತೆ ಹಚ್ಚಬಹುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಅಪರಾಧ ಶಾಸ್ತ್ರ ಮತ್ತು ನ್ಯಾಯವಿಜ್ಞಾನ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಆದ ಡಾ.ಅಶೋಕ್‌ರವರು ತಿಳಿಸಿರುತ್ತಾರೆ.

ಅವರು ಬರೆದಿರುವ ವೈದ್ಯಕೀಯ ನ್ಯಾಯತತ್ವಮತ್ತು ನ್ಯಾಯವಿಜ್ಞಾನ ಎಂಬ ಪುಸ್ತಕದ ಮುಖಪುಟ ಮತ್ತು ಬಟ್ಟೆಗಳಿಂದ ಬೆರಳಚ್ಚು ಗುರುತುಗಳನ್ನು ಪತ್ತೆ ಹಚ್ಚುವ ಬಗ್ಗೆ ವಿವರ ನೀಡಿರುವ ಎರಡು ಪುಟದ ನಕಲು ಪ್ರಸಿಯನ್ನು ಅನುಬಂಧ-08 ಎಂದು ಗುರುತಿಸಿ ಲಗತ್ತಿಸಿರುತ್ತೇನೆ. (ಡಾ. ಅಶೋಕ್‌ರವರ ಸಂಚಾರಿ ದೂರವಾಣಿ ಸಂಖ್ಯೆ- 9945621902)

ಎ) ಸೌಜನ್ಯಳ ದೇಹದ ಮೇಲೆ ಹಲವಾರು ಕಡೆ ಊತವಿರುವುದು ಕಂಡು ಬಂದಿದೆ. ಬಹುಶಃ ಅಂತಹ ಊತವು, ಶವ ಸಿಕ್ಕ ಸ್ಥಳದಲ್ಲಿ ದೇಹದ ಮೇಲೆ ಒತ್ತಡ ಹಾಕಿದಾಗ ಕಂಡು ಬರುವುದಿಲ್ಲ, ಮನೆಯ ನೆಲ ಅಥವಾ ಗೋಡೆಯಂತಹ ಸ್ಥಳಗಳಲ್ಲಿ ದೇಹದ ಮೇಲೆ ಒತ್ತಡ ಹಾಕಿದಾಗ, ಇಂತಹ ಊತವಾಗುವ ಸಾಧ್ಯತೆ ಇರುತ್ತದೆ.

ಎ) ಲಭ್ಯವಿರುವ ದಾಖಲೆಗಳ ಪ್ರಕಾರ ಸೌಜನ್ಯಳ ಮರ್ಮಾಂಗದಲ್ಲಿ ಮಣ್ಣನ್ನು ತುಂಬಲಾಗಿದೆ. ಈ ಅಂಶವನ್ನು ವಿಶ್ಲೇಷಣೆ ನಡೆಸಿದಾಗ ಸಾಕ್ಷ್ಯಾಧಾರ ನಾಶಪಡಿಸುವ ದುರುದ್ದೇಶದಿಂದ ಮತ್ತು ತನಿಖೆಯ ದಿಕ್ಕನ್ನು ತಪ್ಪಿಸುವ ದುರುದ್ದೇಶದಿಂದ ಮರ್ಮಾಂಗಕ್ಕೆ ಮಣ್ಣನ್ನು ತುಂಬಲಾಗಿದೆ ಮತ್ತು ಈ ಕೃತ್ಯವನ್ನು ವಿಥಲಗೌಡನೇ ಮಾಡಿರಬಹುದು ಅಥವಾ ಈ ಕೃತ್ಯ ಎಸಗಲು ಆತನಿಗೆ ಬೇರೆಯವರು ಸಹಕರಿಸಿರಬಹುದು ಎಂಬ ಅನುಮಾನ ಮೂಡುತ್ತದೆ.

ಐ) ಸೌಜನ್ಯ ಧರಿಸಿದ್ದ ಕಾಲೇಜಿನ ಟ್ಯಾಗ್‌ನಿಂದ ಕೊಲೆ ಮಾಡಲಾಗಿದೆ ಎಂದು ಹೇಳಲಾಗಿದೆ. ನನ್ನ ಅನುಮಾನದ ಪ್ರಕಾರ ಸದರಿ ಟ್ಯಾಗ್‌ನಿಂದ ಉಸಿರುಕಟ್ಟಿಸಿ, ಸಾಯಿಸಲು ಸಾಧ್ಯವಿಲ್ಲ, ಏಕೆಂದರೆ ಆ ರೀತಿ ಟ್ಯಾಗ್‌ನಿಂದ ಬಿಗಿದು ಸಾಯಿಸುವ ಪ್ರಯತ್ನ ನಡೆಸಿದ್ದರೆ ಕುತ್ತಿಗೆಯಲ್ಲಿನ ಅಂಗಾಂಗಗಳು ಹಾನಿಯಾಗ ಬೇಕಾಗಿತ್ತು. ಲಭ್ಯವಿರುವ ಶವ ಪರೀಕ್ಷಾ ವರದಿ ಮತ್ತು ಕಸ್ತೂರ್ ಬಾ ಮೆಡಿಕಲ್ ಕಾಲೇಜಿನವರು ದಿನಾಂಕ:-14.11.2012 ರಂದು ನೀಡಿರುವ ವರದಿಯಲ್ಲಿನ ಅಂಶಗಳ ಪ್ರಕಾರ ಪ್ರಕಾರ ಕುತ್ತಿಗೆಯ ಯಾವುದೇ ಅಂಗಾಂಗಗಳು ಹಾನಿಗೆ ಒಳಗಾಗಿರುವುದಿಲ್ಲ. ಈಗಾಗಲೇ ಹೇಳಿರುವಂತೆ ನನ್ನ ಅನುಮಾನದ ಪ್ರಕಾರ ದಿಂಬಿನಂತಹ ವಸ್ತುವಿನಿಂದ ಮುಖದ ಮೇಲೆ ಒತ್ತಡ ಹಾಕಿ, ಉಸಿರುಗಟ್ಟಿಸಿ ಸಾಯಿಸಲಾಗಿದೆ. ಈ ರೀತಿ ದಿಂಬಿನಂತಹ ವಸ್ತುಗಳಿಂದ ಸಾಯಿಸುವ ಅವಕಾಶ ಪೊಲೀಸರಿಗೆ ಶವ ದೊರೆತ ಸ್ಥಳದಲ್ಲಿ ಸಿಗುವುದಿಲ್ಲ, ಈ ಅವಕಾಶ ಏನಿದ್ದರೂ ಮನೆಯಂತಹ ಸ್ಥಳದಲ್ಲಿ ಮಾತ್ರ ಅವಕಾಶ ಸಿಗುತ್ತದೆ. ಈ ಅವಕಾಶ ವಿಠಲಗೌಡನಿಗೆ ಸಿಕ್ಕಿರುವ ಸಾಧ್ಯತೆ ಹೆಚ್ಚಾಗಿ ಕಂಡು ಬರುತ್ತದೆ. ಈಗಾಗಲೇ ಹೇಳಿರುವಂತೆ ಈ ಬಗ್ಗೆ ನುರಿತ ವೈದ್ಯರೊಂದಿಗೆ ಮತ್ತು ವಿಧಿ ವಿಜ್ಞಾನ ತಜ್ಞರೊಂದಿಗೆ ಚರ್ಚೆ ನಡೆಸಬೇಕಿದೆ. ಶವ ಪರಿಕ್ಷಾ ವರದಿ, ಕಸ್ತೂರ್ ಬಾ ಮೆಡಿಕಲ್ ಕಾಲೇಜಿನವರು ನೀಡಿರುವ ವರದಿಯನ್ನು ಕ್ರಮವಾಗಿ ಅನುಬಂಧ-04, ಅನುಬಂಧ-05 ಎಂದು ಗುರುತಿಸಿ, ಲಗತ್ತಿಸಿದೆ.

ಬ) ಶವ ದೊರೆತ ಸ್ಥಳದ ಮಹಜರ್‌ನ ದಾಖಲೆ ಪ್ರಕಾರ ಟ್ಯಾಗ್ ಮಾತ್ರ ಸ್ಥಳದಲ್ಲಿ ದೊರೆತಿರುತ್ತದೆಯೇ ಹೊರತು, ಕಾಲೇಜಿನ ಗುರುತಿನ ಚೀಟಿ ದೊರೆತಿರುವುದಿಲ್ಲ, ಬಹುಶಃ ನಿಜವಾದ ಕೃತ್ಯ ನಡೆದ ಸ್ಥಳದಲ್ಲಿ ಗುರುತಿನ ಚೀಟಿ ಬಿದ್ದಿರುವ ಸಾಧ್ಯತೆ ಇರುತ್ತದೆ. ಅದೇ ಅಲ್ಲದೆ ನೈಲಾನ್ ಟ್ಯಾಗ್‌ನಿಂದ ಕುತ್ತಿಗೆ ಬಿಗಿ ಹಿಡಿದು, ಉಸಿರುಗಟ್ಟಿಸಿ, ಸಾಯುವಂತೆ ಮಾಡುವ ಸಾಧ್ಯತೆ ಕಡಿಮೆ. ಏಕೆಂದರೆ ಆ ರೀತಿ ಬಲವಾಗಿ ಎಳೆವಾಗ ನೈಲಾನ್ ಟ್ಯಾಗ್ ಕಿತ್ತು ಹೋಗುವ ಸಂಭವ ಇರುತ್ತದೆ. ದಿನಾಂಕ:- 17.09.2013 ರಂದು ವೈದ್ಯಾಧಿಕಾರಿಗಳು ನೀಡಿರುವ ವರದಿಯಲ್ಲಿ ಸದರಿ ಟ್ಯಾಗ್‌ನಿಂದ ಕೃತ್ಯ ನಡೆದಿರಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆಯೇ ಹೊರತು, ನಡೆದಿದೆ ಎಂದು ಸ್ಪಷ್ಟವಾಗಿ ಹೇಳಿರುವುದಿಲ್ಲ ಶವದೊರೆತ ಸ್ಥಳ ಮಹಜರ್ ದಾಖಲೆಯನ್ನು ಅನುಬಂಧ-06 ಎಂದು, ವೈದ್ಯಾಧಿಕಾರಿಗಳ ವರದಿಯನ್ನು ಅನುಬಂಧ-07 ಎಂದು ಗುರುತಿಸಿ, ಲಗತ್ತಿಸಿದೆ.

ಒ) ಬೇರೆಯವರು ಸೌಜನ್ಯಳನ್ನು ಅಪಹರಿಸಿದ್ದರೆ ಅಥವಾ ಅದೇ ಸ್ಥಳದಲ್ಲಿ ಅತ್ಯಾಚಾರ ಮಾಡಿದ್ದರೆ ಅಥವಾ ಮಾಡಲು ಪ್ರಯತ್ನಿಸಿದ್ದರೆ, ಆಕೆಯ ಕಾಲೇಜಿನ ಬ್ಯಾಗು ಶವದ ಪಕ್ಕದಲ್ಲಿ ಇಡುತ್ತಿರಲಿಲ್ಲ, ಅದರಲ್ಲೂ ಮುಖ್ಯವಾಗಿ ಗಮನಿಸಬೇಕಾದ ಪ್ರಮುಖ ಅಂಶವೇನೆಂದರೆ, ಬ್ಯಾಗಿನ ಎರಡು ಹಿಡಿಯು ಸೌಜನ್ಯಳ ಎರಡು ಕೈಯೊಳಗ ಇರದೆ. ಒಂದೇ ಹಿಡಿಯನ್ನು ಎರಡು ಕೈಗಳಿಗೆ ಹಾಕಲಾಗಿದೆ. ಈ ಅಂಶವನ್ನು ಸೂಕ್ಷ್ಮವಾಗಿ ಗಮನಿಸಿ, ವಿಶ್ಲೇಷಣೆಗೆ ಒಳಪಡಿಸಿದರೆ. ಉದ್ದೇಶ ಪೂರ್ವಕವಾಗಿ ಬ್ಯಾಗನ್ನು ಹಾಕಿರುವುದು ಖಚಿತವಾಗುತ್ತದೆ. ಅದೂ ಅಲ್ಲದೆ ಆಕೆಯನ್ನು ಅಪಹರಣ ಮಾಡಿದ ಕೂಡಲೇ ಅಥವಾ ಅತ್ಯಾಚಾರ ಮಾಡಲು ಪ್ರಯತ್ನ ನಡೆಸುತ್ತಿದ್ದಾಗಲೇ ಬ್ಯಾಗು ಬಿದ್ದು ಹೋಗುವ ಸಾಧ್ಯತೆ ಇತ್ತು ಅಥವಾ ದೌರ್ಜನ್ಯ ನಡೆಸಿದವರು ಬ್ಯಾಗನ್ನು ಕಿತ್ತು ಬಿಸಾಡುತ್ತಿದ್ದರು. ಬ್ಯಾಗು ಬೆನ್ನಿನಲ್ಲಿರುವಂತಹ ಸಂದರ್ಭದಲ್ಲಿ ಅತ್ಯಾಚಾರ ಮಾಡುವಂತಹ ಪ್ರಯತ್ನ ನಡೆಸುವುದಿಲ್ಲ, ಆಕೆ ಮನೆಗೇ ಬಂದಿಲ್ಲ, ಮನೆಗೆ ಬರುವ ಮೊದಲೇ ಅತ್ಯಾಚಾರ ನಡೆಸಿ, ಕೊಲೆ ಮಾಡಲಾಗಿದೆ ಎಂಬುದನ್ನು ಬಿಂಬಿಸುವ ಸಲುವಾಗಿ ಶವದ ಕೈಗಳಿಗೆ ಬ್ಯಾಗಿನ ಹಿಡಿಗಳನ್ನು ಹಾಕಿ. ಪಕ್ಕದಲ್ಲೇ ಬಿದ್ದಿರುವಂತೆ ಸೃಷ್ಟನೆಯನ್ನು ಮಾಡಲಾಗಿದೆ. ಈ ರೀತಿ ಸುಳ್ಳು ಸೃಷ್ಟಿ ಮಾಡುವ ಅನಿವಾರ್ಯತೆ ವಿಥಲಗೌಡನಿಗೆ ಇರುವುದು ಕಂಡು ಬರುತ್ತದೆಯೇ ಹೊರತು, ಬೇರೆಯವರಿಗೆ ಕಂಡು ಬರುವುದಿಲ್ಲ, ಅದೂ ಅಲ್ಲದೆ ಬೇರೆಯವರು ಈ ಕೃತ್ಯ ಮಾಡಿದ್ದರೆ ಕೈ ಕಟ್ಟುವ ಸಂದರ್ಭದಲ್ಲಾದರೂ ಬ್ಯಾಗಿನ ಹಿಡಿಯನ್ನು ಕೈಯಿಂದ ತೆಗೆದು ಹಾಕುತ್ತಿದ್ದರು.

ಭಾರತೀಯ ಸಾಕ್ಷಿ ಅಧಿನಿಯಮ ಕಲಂ 14 ರಲ್ಲಿ, ವ್ಯಕ್ತಿಗಳ ಸಹಜ ಮಾತು, ವರ್ತನೆಗಳನ್ನು ಸಹ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹೇಳಿರುವುದನ್ನು ಪರಿಗಣಿಸಿ, ಆರೋಪಿಯ ಸಹಜ ಮಾತು, ವರ್ತನೆಗಳನ್ನು ಆಧರಿಸಿ, ಈ ಪ್ರಕರಣದಲ್ಲಿ ಸತ್ಯವನ್ನು ಎತ್ತಿ ಹಿಡಿಯಬೇಕಿದೆ. ಕೃಷ್ಣ ನಡೆದ ಸ್ಥಳದಲ್ಲಿ ಆರೋಪಿ ಯಾವುದಾದರೂ ರೀತಿಯ ಒಂದು ಸುಳಿವನ್ನು ಬಿಟ್ಟಿರುತ್ತಾನೆ ಎಂಬುದು ನಿಮಗೆ ಗೊತ್ತಿರುವ ವಿಚಾರವೇ. ಈ ನಿಟ್ಟಿನಲ್ಲಿ ಶವದೊಂದಿಗೆ ಬ್ಯಾಗು ಇರುವ ರೀತಿಯನ್ನು ಮತ್ತು ಸ್ಥಳದಲ್ಲಿ ಶ್ರೀಮತಿ ಪ್ರೇಮ, ಬಾಲಕೃಷ್ಣರವರ ಸಂಚಾರಿ ದೂರವಾಣಿ ಸಂಖ್ಯೆ ಇರುವ ಚೀಟಿ ಬಿಸಾಕಿರುವುನ್ನು ಗಮನಿಸಿ, ವಿಶ್ಲೇಷಣೆ ನಡೆಸಿದಾಗ, ಈಗಾಗಲೇ ಹೇಳಿರುವಂತೆ ಆಕೆ ಮನೆಗೆ ಬಂದಿಲ್ಲ, ಬರುವ ಮುನ್ನವೇ ಈ ಕೃತ್ಯ ನಡೆದಿದೆ ಮತ್ತು ಈ ಕೃತ್ಯಕ್ಕೆ ಶ್ರೀಮತಿ ಪ್ರೇಮ, ಬಾಲಕೃಷ್ಣರವರು ಕಾರಣರಿರಬಹುದು ಎಂದು ಎಂಬಿಸುವ ಸಲುವಾಗಿ, ಬ್ಯಾಗನ್ನು ಆ ರೀತಿ ಇಟ್ಟಿರುವುದು ಹಾಗೂ ಸಂಚಾರಿ ದೂರವಾಣಿ ಸಂಖ್ಯೆಗಳ ಚೀಟಿಯನ್ನು ಶವದ ಪಕ್ಕ ಬಿಸಾಕಿರುವುದು ತಿಳಿದುಬರುತ್ತದೆ. ಈಗಾಗಲೇ ಹೇಳಿರುವಂತೆ ಈ ರೀತಿ ಸುಳ್ಳು ಸೃಷ್ಟನೆ ಮಾಡಿರುವ ಅನಿವಾರ್ಯತೆ ವಿಠ್ಠಲಗೌಡನಿಗೆ ಮಾತ್ರ ಇರುತ್ತದೆ.


ಸ್ನೇಹಮಯಿ ಕೃಷ್ಣ

ಓ) ಹಾಲಿ ಲಭ್ಯವಿರುವ ಸಾಕ್ಷ್ಯಾಧಾರಗಳ ಪ್ರಕಾರ ದಿನಾಂಕ : 09.10. 2023ರಂದು ಸೌಜನ್ಯ ತಿಂಡಿ, ಊಟ ಮಾಡದೆ ಉಪವಾಸ ಇದ್ದಳು. ಆದರೆ ಶವ ಪರೀಕ್ಷಾ ವರದಿಯ ಪ್ರಕಾರ ಸೌಜನ್ಯಳ ಹೊಟ್ಟೆಯಲ್ಲಿ ಜೀರ್ಣವಾಗದ ಆಹಾರ ಇತ್ತು, ಸೌಜನ್ಯ ಮನೆಗೆ ಹೋಗುವ ಮೊದಲು ಬೇರೆಯವರು (ಸಂತೋಷ್ ರಾವ್) ಈ ಕೃತ್ಯ ಎಸಗಿದ್ದರೆ ಆಕೆಯ ಹೊಟ್ಟೆಯಲ್ಲಿ ಜೀರ್ಣವಾಗದ ಆಹಾರ ಇರಲು ಸಾಧ್ಯವಾಗುತ್ತಿರಲಿಲ್ಲ ಅಥವಾ ಬೇರೆ ಯವರು ಆಕೆಯ ಮೇಲೆ ದೌರ್ಜನ್ಯ ಎಸಗಿ, ಕೊಲೆ ಮಾಡುವವರು ಆ ಸಂದರ್ಭದಲ್ಲಿ ಆಕೆಗೆ ಊಟ ಕೊಡುವಷ್ಟು ಒಳ್ಳೆಯತನ ತೋರಿಸಲು ಮತ್ತು ತನ್ನ ಮೇಲೆ ನಡೆದ ದೌರ್ಜನ್ಯವನ್ನು ಸಹಿಸಿಕೊಂಡು, ದುರುಳರು ನೀಡುವ ಊಟವನ್ನು ತಿನ್ನದಂತಹ ಗಟ್ಟಿ ಮನಸ್ಸು ಸೌಜನ್ಯಳಿಗೆ ಇರಲು ಸಾಧ್ಯವಿಲ್ಲ ಹೀಗಾಗಿ ಬೇರೆಯವರು ಆಕೆಗೆ ಊಟ ಮಾಡಿಸಿ, ಆನಂತರ ದೌರ್ಜನ್ಯ ನಡೆಸಿ, ಕೊಲೆ ಮಾಡಿರುತ್ತಾರೆ ಎಂಬುದನ್ನು ನಂಬಲು ಸಾಧ್ಯವಿಲ್ಲ, ಈ ಅಂಶವನ್ನು ವಿಶ್ಲೇಷಣೆ ನಡೆಸಿದಾಗಲೂ ಈಗಾಗಲೇ ಹೇಳಿರುವಂತೆ ಮತ್ತು ನನಗಿರುವ ಅನುಮಾನದ ಪ್ರಕಾರ ವಿಥಲಗೌಡನ ಮನೆಯಲ್ಲಿ ಸೌಜನ್ಯ ಹೊಸ ಅಕ್ಕಿ ಊಟವನ್ನು ಮಾಡಿದೆ ನಂತರವೇ ಸೌಜನ್ಯಳ ಮೇಲೆ ದೌರ್ಜನ್ಯ ನಡೆದಿದೆ ಮತ್ತು ಆಕೆಯನ್ನು ಕೊಲೆ ಮಾಡಲಾಗಿದೆ ಎಂಬುದು ಖಚಿತವಾಗುತ್ತದೆ.

ಔ) ದಿನಾಂಕ: 09.10.2012 ರಂದು ಹೊಸ ಅಕ್ಕಿ ಊಟ ಮಾಡುವಂತಹ ಹಬ್ಬದ ವಾತಾವಣ ಧರ್ಮಸ್ಥಳದಲ್ಲಿ ಇದ್ದುದ್ದರಿಂದ ಸದರಿ ಹಬ್ಬಕ್ಕಾಗಿ ಕುಟುಂಬದವರು ಮತ್ತು ಸಂಬಂಧಿಕರು ಒಡಾಡುತ್ತಾದ್ದರಿಂದ ಇಂತಹ ಸಂದರ್ಭದಲ್ಲಿ ಬೇರೆಯವರು ಸೌಜನ್ಯಳನ್ನು ಅಪಹರಿಸುವ ಸಂಚನ್ನು ರೂಪಿಸಿದ್ದರು ಮತ್ತು ಅಪಹರಣ ಮಾಡಿದ್ದರು ಎಂದರೆ ನಂಬಲು ಸಾಧ್ಯವಿಲ್ಲ.

ಅಂ) ಬೇರೆಯವರು ಸೌಜನ್ಯಳನ್ನು ಅಪಹರಿಸಿ, ದೌರ್ಜನ್ಯ ನಡೆಸುವ ಕೊಲೆ ಮಾಡುವ ಸಂಚನ್ನು ರೂಪಿಸಿದ್ದರೆ, ಆಕೆ ಕಾಲೇಜಿನಿಂದ ಹೊರಡುವುದನ್ನು ಗಮನಿಸಿ, ಅಲ್ಲಿಂದಲೇ ಹಿಂಬಾಲಿಸುವ ಕೆಲಸ ಮಾಡುತ್ತಿದ್ದರೆ ಹೊರತು, ಸೌಜನ್ಯರ ಮನೆಯವರು ಹೇಳಿರುವಂತೆ ಮಧ್ಯಾಹ್ನವೇ, ಸ್ನಾನಘಟ್ಟದ ಬಸ್ ನಿಲ್ದಾಣದ ಬಳಿ ಇರುತ್ತಿರಲಿಲ್ಲ.

ಅಃ) ಶ್ರೀಮತಿ ಕುಸುಮಾವತಿರವರಿಗೆ ಶ್ರೀಮತಿ ಯಶೋಧ ಎಂಬುವವರ ಜೊತೆಗೆ ಶ್ರೀಮತಿ ಪ್ರೇಮಾ ಎಂಬ ಮತ್ತೊಬ್ಬ ಸಹೋದರಿ ಇದ್ದು, ಸದರಿ ಶ್ರೀಮತಿ ಪ್ರೇಮಾರವರ ವಿಚಾರವು ಈ ಪ್ರಕರಣದಲ್ಲಿ ಎಲ್ಲಿಯೂ ಪ್ರಮುಖವಾಗಿ ಕಂಡು ಬರುವುದಿಲ್ಲ. ಹೊಸ ಅಕ್ಕಿ ಊಟಕ್ಕಾಗಿ ಶ್ರೀಮತಿ ಪ್ರೇಮಾ ಹಾಗೂ ಅವರ ಮನೆಯವರು ವಿಥಲಗೌಡರವರ ಮನೆಗೆ ಬಂದಿರುವ ಮಾಹಿತಿ ಇರುವುದಿಲ್ಲ, ಕೇವಲ ಶ್ರೀಮತಿ ಯಶೋಧರವರು ಬಂದಿದ್ದ ಬಗ್ಗೆ ಮಾಹಿತಿ ಇರುತ್ತದೆ. ಸೌಜನ್ಯಳ ಶವ ದೊರೆತ ಸ್ಥಳದಲ್ಲಿ ಶವದ ಪಕ್ಕ ಒಂದು ಚೀಟಿಯು ಲಭ್ಯವಾಗಿದ್ದು ಅದರಲ್ಲಿ ಶ್ರೀಮತಿ ಪ್ರೇಮಾ ಹಾಗೂ ಬಾಲಕೃಷ್ಣ ಎಂಬುವವರ ಸಂಚಾರಿ ದೂರವಾಣಿ ಸಂಖ್ಯೆ ಬರೆದಿರುವುದು ಕಂಡು ಬರುತ್ತದೆ. ಸದರಿ ದೂರವಾಣಿ ಸಂಖ್ಯೆಯನ್ನು ಸೌಜನ್ಯ ತನ್ನ ನೋಟ್ ಪುಸ್ತಕ ಒಂದರಲ್ಲಿ ಬರೆದುಕೊಂಡಿದ್ದಳು ಮತ್ತು ಆ ದೂರವಾಣಿ ಸಂಖ್ಯೆಗೆ ಕರೆಯನ್ನು ಮಾಡಿ ಮನೆಗೆ ಸೌಜನ್ಯ ಹೋಗುತ್ತಿದ್ದಳು ಎಂಬುದು ತಿಳಿದು ಬಂದಿರುತ್ತದೆ. ತನ್ನ ಮನೆಯಲ್ಲಿರುವ ಮೊಬೈಲ್‌ಗಳಲ್ಲಿ ಶ್ರೀಮತಿ ಪ್ರೇಮಾ ಹಾಗೂ ಬಾಲಕೃಷ್ಣರವರ ದೂರವಾಣಿ ಸಂಖ್ಯೆಗಳನ್ನು ದಾಖಲಿಸಿಕೊಳ್ಳದೆ. ಪ್ರತ್ಯೇಕವಾಗಿ ನೋಟ್ ಪುಸ್ತಕದಲ್ಲಿ ಬರೆದಿಟ್ಟುಕೊಂಡಿದ್ದಳು. ಹೊಸ ಅಕ್ಕಿ ಊಟಕ್ಕಾಗಿ ಶ್ರೀಮತಿ ಪ್ರೇಮಾ ಮತ್ತು ಅವರ ಮನೆಯವರು ಬಾರದಿರುವುದು. ಈ ಅಂಶಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸಿದಾಗ, ಯಾವುದೊ ವಿಚಾರಕ್ಕಾಗಿ (ನನಗೆ ಬಂದಿರುವ ಮಾಹಿತಿ ಪ್ರಕಾರ ಆಸ್ತಿಯ ವಿಚಾರಕ್ಕಾಗಿ) ಶ್ರೀಮತಿ ಪ್ರೇಮಾರವರ ಕುಟುಂಬದವರಿಗೂ, ಶ್ರೀಮತಿ ಕುಸುಮಾವತಿ, ವಿಠಲಗೌಡರವರ ಕುಟುಂಬ ದವರಿಗೂ ಮನಸ್ತಾಪ, ವೈರತ್ವ ಇತ್ತು ಎಂಬ ಅನುಮಾನ ಮೂಡುತ್ತದೆ. ಬಾಲಕೃಷ್ಣ ಎಂಬುವವರು ಯಾರು ಸೌಜನ್ಯಳ ಕುಟುಂಬದವರಿಗೂ, ಬಾಲಕೃಷ್ಣರವರಿಗೂ ಏನು ಸಂಬಂಧ? ಎಂಬುದರ ಬಗ್ಗೆ ತನಿಖೆ ನಡೆಸಬೇಕಿದೆ. ಯಾವುದೋ ದುರುದ್ದೇಶದಿಂದ ಶ್ರೀಮತಿ ಪ್ರೇಮಾ ಮತ್ತು ಬಾಲಕೃಷ್ಣರವರ ದೂರವಾಣಿ ಸಂಖ್ಯೆಯ ಚೀಟಿಯನ್ನು ವಿಶ್ವಲಗೌಡ ಶವದ ಪಕ್ಕ ಎಸೆದು ಸೌಜನ್ಯಳ ಕೊಲೆಯ ಸಂಬಂಧ ಶ್ರೀಮತಿ ಪ್ರೇಮಾ ಮತ್ತು ಬಾಲಕೃಷ್ಣರವರ ಮೇಲೆ ಅನುಮಾನ ಬರುವಂತೆ ಪ್ರಯತ್ನ ನಡೆಸಿರುವುದು ತಿಳಿದು ಬರುತ್ತದೆ.

ಬೇರೆಯವರು ಸೌಜನ್ಯಳ ಮೇಲೆ ದೌರ್ಜನ್ಯವನ್ನು ನಡೆಸಿ, ಕೊಲೆ ಮಾಡಿದ್ದರೆ ಈ ರೀತಿ ಶ್ರೀಮತಿ ಪ್ರೇಮಾ, ಬಾಲಕೃಷ್ಣರವರ ದೂರವಾಣಿ ಸಂಖ್ಯೆ ಇರುವ ಚೀಟಿಯನ್ನು ಶವದ ಪಕ್ಕ ಎಸೆಯುತ್ತಿರಲಿಲ್ಲ ಅಥವಾ ಸೌಜನ್ಯಳ ಬ್ಯಾಗಿನಲ್ಲಿರುವುದನ್ನು ಹುಡುಕಾಟ ನಡೆಸಿರುವ ಸಂದರ್ಭದಲ್ಲಿ ಸದರಿ ಚೀಟಿಯು ಆಕಸ್ಮಿಕವಾಗಿ ಹೊರಗೆ ಬಿದ್ದಿದೆ ಎಂದು ಹೇಳಲು ಸಾಧ್ಯವಿಲ್ಲ, ಏಕೆಂದರೆ, ಬೇರೆಯವರು ಆ ರೀತಿ ಬ್ಯಾಗಿನಲ್ಲಿ ಹುಡುಕಾಟ ನಡೆಸಿದ್ದರೆ ಬ್ಯಾಗಿನಲ್ಲಿ ಇರುವ ಇತರೆ ವಸ್ತುಗಳು ಹೊರಗಡೆ ಬಿದ್ದಿರಬೇಕಿತ್ತು. ಕೇವಲ ಶ್ರೀ ಪ್ರೇಮಾ ಮತ್ತು ಬಾಲಕೃಷ್ಣರವರ ಸಂಚಾರಿ ದೂರವಾಣಿ ಸಂಖ್ಯೆಗಳ ಚೀಟಿಯನ್ನಷ್ಟೇ ಬ್ಯಾಗಿನಿಂದ ತೆಗೆದು ಎಸೆಯುತ್ತಿರಲಿಲ್ಲ, ಈ ರೀತಿ ಚೀಟಿ ಶವದ ಪಕ್ಕ ಎಸೆಯುವುದರಿಂದ

☞ 13

12

ಬೇರೆಯುವರಿಗೆ ಯಾವುದೇ ರೀತಿಯು ಲಾಭ ಇರುವುದಿಲ್ಲ.

ಈ ಮೇಲ್ಕಂಡ ಕಾರಣಗಳಿಂದ ಶ್ರೀಮತಿ ಪ್ರೇಮಾರವರ ಕುಟುಂಬದವರಿಗೂ ಶ್ರೀಮತಿ ಕುಸುಮಾವತಿ ಮತ್ತು ವಿಠ್ಠಲ್ ಗೌಡರವರ ಕುಟುಂಬದವರಿಗೂ ಮನಸ್ತಾಪ, ವೈರತ್ವ ಉಂಟಾಗಲು ಕಾರಣವೇನು ? ಸೌಜನ್ಯ ಮೃತ ಪಟ್ಟ ನಂತರ ಇವರುಗಳ ನಡುವೆ ಯಾರಿಗೆ, ಎಷ್ಟು ಆಸ್ತಿ ಅಥವಾ ಹಣ ವರ್ಗಾವಣೆ ಆಗಿದೆ ಅಥವಾ ಯಾರಿಗೆ ಯಾವ ರೀತಿಯ ಹೆಚ್ಚಿನ ಲಾಭವಾಗಿದೆ ಎಂಬುದರ ಬಗ್ಗೆ ಹಾಗೂ ಬಾಲಕೃಷ್ಣರವರ ವಿಚಾರದ ಬಗ್ಗೆ ಸಮಗ್ರ ತನಿಖೆಯನ್ನು ನಡೆಸಿದರೆ ಹೆಚ್ಚಿನ ಸತ್ಯಾಂಶ ತಿಳಿದುಬರುತ್ತದೆ.

ಶ್ರೀಮತಿ ಕುಸುಮಾವತಿ ಮತ್ತು ವಿಠಲಗೌಡರವರ ಹೇಳಿಕೆಗಳ ಪ್ರಕಾರ ದಿನಾಂಕ:- 09.10.2012 ರಂದು ರಾತ್ರಿ ಸಮಯದಲ್ಲಿ ಧರ್ಮಸ್ಥಳದ ಹೊರ ಠಾಣೆಯ ಸಿಬ್ಬಂದಿಗಳಾದ ಕೃಷ್ಣ ಮತ್ತು ನವೀನ್ ಎಂಬುವವರು ಸೌಜನ್ಯಳ ಮನೆಗೆ ಬಂದಿದ್ದು ಸೌಜನ್ಯಳ ನೋಟ್ ಪುಸ್ತಕದಲ್ಲಿ ಬರೆದಿಟ್ಟುಕೊಂಡಿದ್ದ ಈ ಎರಡು ಮೊಬೈಲ್ ನಂಬರ್‌ಗಳ ಹಾಳೆಯನ್ನಷ್ಟೇ ಹರಿದುಕೊಂಡು ಜೇಬಿನಲ್ಲಿಟ್ಟುಕೊಳ್ಳುವ ಕೃಷ್ಣರವರು ಆ ಚೀಟಿಯನ್ನು ಶವದ ಪಕ್ಕ ಎಸೆದಿದ್ದಾರೆ ಎಂಬಂತ ಗಿರೀಶ್ ಮಟ್ಟಣ್ಣನವರ್ ಕೃತಕ ಬುದ್ಧಿಮತ್ತೆಯ ಮೂಲಕ ಸೃಷ್ಟಿಸಿರುವ ವಿಡಿಯೋದಲ್ಲಿ ಹೇಳಿಸಿರುತ್ತಾರೆ. ಪುರಂದರ ಗೌಡ ಮಾಧ್ಯಮದ ಮುಂದೆ ಮಾತನಾಡುವಾಗಲೂ ಈ ವಿಚಾರ ಹೇಳಿದ್ದಾರೆ. ಸವರ ವೀಡಿಯೋವನ್ನು ಪುರಂದರ-02 ರಂದು ಗುರುತಿಸಿ, ಸೌಜನ್ಯ ಎಂಬ ಡಿ.ವಿ.ಡಿ.ಯಲ್ಲಿ ಹಾಕಿದ್ದೇನೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷಾಧಾರಗಳು ಬಧವಿರುವುದಿಲ್ಲ ಪೊಲೀಸರಿಗೆ ಶ್ರೀಮತಿ ಪ್ರೇಮಾ ಮತ್ತು ಬಾಲಕೃಷ್ಣರವರ ಮೇಲೆ, ಸೌಜನ್ಯ ಪ್ರಕರಣದಲ್ಲಿ ಅನುಮಾನ ಬರುವಂತ ಮಾಡುವ ಯಾವುದೇ ಉದ್ದೇಶವು ಕಂಡು ಬರುವುದಿಲ್ಲ. ಆ ರೀತಿ ಇದ್ದಿದ್ದರೆ ಪ್ರಕರಣದ ಯಾವುದಾದರು ಒಂದು ಕಡೆ ಅವರಿಬ್ಬರ ಹೆಸರು ಬರುವಂತೆ ಮಾಡುತ್ತಿದ್ದರು.

ವಿಠ್ಠಲಗೌಡನೇ ಸೌಜನ್ಯಳ ಮೇಲೆ ದೌರ್ಜನ್ಯ ನಡೆಸಿ, ಕೊಲೆ ಮಾಡಿದ್ದಾನೆ. ಈತನಿಗೆ ಸೌಜನ್ಯಳ ಮನೆಯವರೇ ರಕ್ಷಣೆ ಮಾಡಿದ್ದಾರೆ ಎಂಬುದನ್ನು ಖಚಿತ ಪಡಿಸುವ ಹೆಚ್ಚುವರಿ ಸಾಕ್ಷ್ಯಾಧಾರಗಳು ಈ ಕೆಳಕಂಡಂತಿವೆ.

ಅ) ದಿನಾಂಕ :10.10.2012 ರಂದು ಬೆಳಿಗ್ಗೆ ಶ್ರೀಮತಿ ಕುಸುಮಾವತಿ (ಸೌಜನ್ಯಳ ತಾಯಿ) ಸೌಜನ್ಯಳನ್ನು ಹುಡುಕಲು ಹೋಗಿದ್ದಾರೆ ಎಂಬುದಕ್ಕೆ ಯಾವುದೇ ಸ್ಪಷ್ಟ ಸಾಕ್ಷಿ ಸಿಗುವುದಿಲ್ಲ. ಅವರು ನೀಡಿರುವ ಹೇಳಿಕೆಯ ಪ್ರಕಾರವೇ ಶವ ಸಿಕ್ಕಿದೆ ಎಂಬುದು ತಿಳಿದುಬಂದಾಗಲೂ ಸ್ಥಳಕ್ಕೆ ಹೋಗುವುದಿಲ್ಲ ! ಎಂತಹ ತಾಯಿಯೇ ಆದರೂ ಮಗಳ ಶವ ಸಿಕ್ಕಿದೆ ಎಂಬುದು ತಿಳಿದುಬಂದಾಗ ಸ್ಥಳಕ್ಕೆ ಹೋಗಿಯೇ ಹೋಗುತ್ತಾರೆ. ಆದರೆ ಶ್ರೀಮತಿ ಕುಸುಮಾವತಿ ಏನೇನೋ ಕಾರಣಗಳನ್ನು ನೀಡುತ್ತಾರೆಯೇ ಹೊರತು, ಮಗಳ ಶವ ದೊರೆತ ಸ್ಥಳಕ್ಕೆ ಹೋಗಿರುವುದಿಲ್ಲ. ಸೌಜನ್ಯಳ ಶವ ದೊರೆತ ಸ್ಥಳಕ್ಕೆ ಹೋಗದಿರುವುದನ್ನು ಶ್ರೀಮತಿ ಕುಸುಮಾವತಿ ಒಪ್ಪಿಕೊಂಡಿರುವ ವೀಡಿಯೋವನ್ನು ಕುಸುಮಾವತಿ-01 ಎಂದು ಗುರುತಿಸಿ, ಸೌಜನ್ಯ ಎಂದು ಬರೆದಿರುವ ಡಿ.ವಿ.ಡಿಯಲ್ಲಿ ಹಾಕಿರುತ್ತೇನೆ.

ಆ) ಕೇವಲ ಶ್ರೀಮತಿ ಕುಸುಮಾವತಿಯಷ್ಟೇ ಅಲ್ಲದೆ, ವಿಠಲಗೌಡ ಮತ್ತು ಪುರಂದರಗೌಡ ಕೂಡ ಸ್ಥಳಕ್ಕೆ ಹೋಗುವುದಿಲ್ಲ. ವಿಠಲಗೌಡ ಸ್ಥಳಕ್ಕೆ ಹೋದರೂ ಸಹ, ಶವದ ಹತ್ತಿರ ಹೋಗದೆ, ದೂರದಿಂದ ಸವ ನೋಡಿಕೊಂಡು ಅಲ್ಲಿ ಇರಲಾಗದೆ ಮನೆಗೆ ಹೋದೆ ಎಂದು ವಿಠಲಗೌಡ ಹೇಳಿದರೆ, ಕುಸುಮಾವತಿಗೆ ಸಮಾಧಾನ ಮಾಡಬೇಕಾಗಿದ್ದರಿಂದ ಸ್ಥಳದಲ್ಲಿ ಇರದೆ ಮನೆಗೆ ಹೋದೆ ಎಂದು ಪುರಂದರ ಗೌಡ ಹೇಳಿರುತ್ತಾನೆ. ನನ್ನ ಅನುಮಾನದ ಪ್ರಕಾರ ಸೌಜನ್ಯಳನ್ನು ವಿಠ್ಠಲಗೌಡ ಕೊಲೆ ಮಾಡಿದ್ದಾನೆಂಬ ವಿಚಾರದಲ್ಲಿ ಕುಸುಮಾವತಿಗೆ ಸತ್ಯಾಂಶ ತಿಳಿದಿದ್ದರಿಂದ ಅವರನ್ನು ಸಮಾಧಾನಪಡಿಸಲು, ಸತ್ಯಾಂಶವನ್ನು ಮುಚ್ಚಿ ಹಾಕಲು. ಒತ್ತಡ ಹೇರಲು, ಹಣದ ಅಥವಾ ಸ್ವತ್ತಿನ ಅಮಿಷ ಒಡ್ಡಲು ವಿಠಲಗೌಡ, ಪುರಂದರ ಗೌಡರವರು ಬೆಳಿಗ್ಗೆಯಿಂದ ಸಂಜೆಯವರೆಗೆ ಮನೆಯಲ್ಲಿಯೇ ಇದ್ದು ಕುಸುಮಾವತಿರವರಿಗೆ ಸತ್ಯಾಂಶವನ್ನು ಯಾರಿಗೂ ಹೇಳದಂತೆ, ಈ ಬಗ್ಗೆ ದೂರು ನೀಡದಂತೆ ಒತ್ತಡ ಹಾಕಿದ್ದಾರೆ, ಪುಸಲಾಯಿಸಿದ್ದಾರೆ. ಹೀಗಾಗಿ ಸೌಜನ್ಯ ಸತ್ತ ನಂತರ ಮೂರು ಅಂತಸ್ತಿನ ಮನೆಯನ್ನು ಕಟ್ಟಲು, ಕಾರು, ಬೈಕುಗಳನ್ನು ಕೊಂಡುಕೊಳ್ಳಲು ಶ್ರೀಮತಿ ಕುಸುಮಾವತಿರವರಿಗೆ ಹಣ ಎಲ್ಲಿಂದ ಬಂತು ? ಎಂಬುದರ ಬಗ್ಗೆ ಹಾಗು ಸೌಜನ್ಯ ಸತ್ತ ನಂತರ ಎಕರೆಗಟ್ಟಲೆ ಜಮೀನನ್ನು ಶ್ರೀಮತಿ ಕುಸುಮಾವತಿ ಅವರು ಪಡೆದುಕೊಂಡಿರುತ್ತಾರೆ ಎಂಬ ಮಾಹಿತಿ ಇದ್ದು, ಸದರಿ ಜಮೀನುಗಳನ್ನು ಪಡೆದುಕೊಂಡಿದ್ದು ಹೇಗೆ ? ಎಂಬುದರ ಬಗ್ಗೆ ಸಮಗ್ರ ತನಿಖೆಯನ್ನು ನಡೆಸಿದಲ್ಲಿ ಹೆಚ್ಚಿನ ಸತ್ಯಾಂಶ ತಿಳಿದುಬರಲಿದೆ.

ಐವತ್ತು ಲಕ್ಷ ರೂಪಾಯಿ ಸಾಲ ಮಾಡಿ ಮನೆ ಕಟ್ಟಿದ್ದೇನೆ ಎಂಬಂತೆ ಶ್ರೀಮತಿ ಕುಸುಮಾವತಿ ತಿಳಿಸಿದ್ದು, ಐವತ್ತು ಲಕ್ಷ ರೂಪಾಯಿ ಸಾಲ ಪಡೆದಿರುವ ಬಗೆಯೂ ತನಿಖೆ ನಡೆಸಬೇಕಿದೆ.

ಇ) ಶ್ರೀಮತಿ ಕುಸುಮಾವತಿರವರು ಇಂದಿರಾವತಿ ಎಂಬ ಹೆಸರಿನಲ್ಲಿ ಜಮೀನನ್ನು ಪಡೆದುಕೊಂಡಿರುತ್ತಾರೆ ಎಂಬ ಮಾಹಿತಿ ಇದ್ದು. ಈ ಬಗ್ಗೆಯೂ ತನಿಖೆಯನ್ನು ನಡೆಸಬೇಕಿದೆ.

ಈ) ಗೋಪಾಲ ಪೂಜಾರಿ ಎಂಬುವವರು ನೀಡಿರುವ ಸಾಕ್ಷಾಧಾರಗಳ ಪ್ರಕಾರ ದಿನಾಂಕ:- 09.10.2012 ರಂದು ಮಧ್ಯಾಹ್ನದ ಸಮಯದಲ್ಲಿ ಘಟನೆ ನಡೆದ ಸ್ಥಳದಲ್ಲಿ ಸಂತೋಷ್ ರಾವ್ ಇದ್ದುದ್ದನ್ನು ನೋಡಿದೆ ಎಂದು ಹೇಳಿರುವುದನ್ನು ಮತ್ತು ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿ ಶ್ರೀಮತಿ ರೂಪಾಲಿರವರು ಸಂತೋಷ್ ರಾವ್‌ನ ಮಾತು. ವರ್ತನೆಗಳನ್ನು ಗಮನಿಸಿ, ವಿಶ್ಲೇಷಣೆ ನಡೆಸಿರುವ ವರದಿಯಲ್ಲಿನ ಅಂಶಗಳನ್ನು ಗಮನಿಸಿದಾಗ, ಘಟನೆ ನಡೆದ ಸ್ಥಳದ ಸುತ್ತಮುತ್ತಲಿನ ನಿರ್ಜನ ಪ್ರದೇಶದಲ್ಲಿ ಸಂತೋಷ್ ರಾವ್ ಉಳಿದುಕೊಂಡಿದ್ದು, ಆ ಸಮಯದಲ್ಲಿ ವಿಠಲಗೌಡ ಶವವನ್ನು ಎಳೆದುಕೊಂಡು ಬಂದು ಪೊಲೀಸರಿಗೆ ಶವ ದೊರೆತ ಸ್ಥಳದಲ್ಲಿ ಹಾಕಿರುವ ಘಟನೆಯನ್ನು ಸಂತೋಷ್ ರಾವ್ ನೋಡಿರುವ ಅಥವಾ ಸೌಜನ್ಯಳ ಶವ ಸಾಗಿಸಲು ಸಂತೋಷ್ ರಾವ್ ವಿಠಲಗೌಡನಿಗೆ ಸಹಕರಿಸಿರುವ ಸಾಧ್ಯತೆ ಇದ್ದು, ತನ್ನ ಕೃತ್ಯವನ್ನು ನೋಡಿದ (ಸಹಕರಿಸಿದ) ಸಂತೋಷ್‌ರಾವ್ ಮಾನಸಿಕ ಅಸ್ವಸ್ಥ ಎಂದು ತಿಳಿದಿದ್ದ ವಿಠ್ಠಲ್ ಗೌಡನಿಗೆ ತನ್ನ ಕೃತ್ಯದ ಬಗ್ಗೆ ಯಾರಿಗೂ ಹೇಳುವುದಿಲ್ಲ ಎಂಬ ಸಂಪೂರ್ಣ ನಂಬಿಕೆಯಿಂದ ಹಾಗೂ ಬಹುಶಃ ಈ ಕೃತ್ಯದ ಬಗ್ಗೆ ಯಾರಿಗಾದರೂ ಹೇಳಿದ್ದಲ್ಲಿ ಇದೇ ರೀತಿ ನಿನ್ನನ್ನು ಕೊಲೆ ಮಾಡುವುದಾಗಿ ಅಥವಾ ಈ ಕೊಲೆಯನ್ನು ನೀನೇ ಮಾಡಿದ್ದೀಯ ಎಂಬಂತೆ ನಿನ್ನನ್ನೇ ಸಿಲುಕಿಸುವುದಾಗಿ ಬೆದರಿಕೆ ಹಾಕಿದ್ದರಿಂದ, ಈ ವಿಚಾರವನ್ನು ತಿಳಿಸಿದರೆ ತನ್ನ ಜೀವಕ್ಕೆ ಅಪಾಯವಾಗಬಹುದು ಅಥವಾ ತನಗೂ ಶಿಕ್ಷೆಯಾಗಬಹುದೆಂಬ ಭಯದಿಂದ ಸಂತೋಷ್ ರಾವ್ ತಾನು ನೋಡಿದ ವಿಠಲಗೌಡನ ಕೃತ್ಯದ ಬಗ್ಗೆ ಬಾಯಿಬಿಟ್ಟಿರುವುದಿಲ್ಲ. ನಂತರದ ದಿನಗಳಲ್ಲಿ ಸಂತೋಷ್ ರಾವ್‌ನನ್ನೇ ಆರೋಪಿಯನ್ನಾಗಿಸಿದ ವಿಚಾರವನ್ನು ತಿಳಿದ ವಿಠಲ್‌ಗೌಡ ನೇರವಾಗಿ ಅಥವಾ ತನ್ನ ಕಡೆಯವರ ಮೂಲಕ ಕಾರಾಗೃಹ ವಾಸದಲ್ಲಿದ್ದ ಸಂತೋಷ್ ರಾವ್‌ನನ್ನು ಸಂಪರ್ಕಿಸಿ ದಿನಾಂಕ: 09.10.2012 ರಂದು ನೋಡಿದ ಕೃತ್ಯದ ಬಗ್ಗೆ ಯಾರಿಗೂ ಹೇಳಬಾರದೆಂದು. ಈ ಪ್ರಕರಣದಲ್ಲಿ ನಿನಗೆ ಶಿಕ್ಷೆಯಾಗದಂತೆ ನೋಡಿಕೊಂಡು ಆದಷ್ಟು ಬೇಗ ಈ ಪ್ರಕರಣದಿಂದ ನಿನ್ನನ್ನು ಬಿಡುಗಡೆ ಮಾಡಿಸುವುದಾಗಿಯೂ, ಆಕಸ್ಮಾತ್ ನೀನು ನೋಡಿದ ವಿಚಾರವನ್ನು ಯಾರಿಗಾದರೂ ಹೇಳಿದಲ್ಲಿ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ, ನಿನಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದಾಗಿಯೂ ಬೆದರಿಕೆ ಹಾಕಿರುವ ಸಾಧ್ಯತೆ ಇರುವುದರಿಂದ ಸಂತೋಷ್ ರಾವ್ ತಾನು ನೋಡಿದ ಕೃತ್ಯದ ಬಗ್ಗೆ ಯಾರಿಗೂ ಹೇಳಿರುವುದಿಲ್ಲ. ಬಹುಶಃ ಈ ಕಾರಣದಿಂದಲೇ ಅಂದರೆ ತಾನು ಮಾಡಿದ ಕೃತ್ಯದ ಬಗ್ಗೆ ಸಂತೋಷ್ ರಾವ್ ಎಲ್ಲಿ ಹೇಳಿ ಬಿಡುತ್ತಾನೊ ಎಂಬ ಭಯದಿಂದ ವಿಠಲಗೌಡ ಮತ್ತು ಆತನ ಕಡೆಯವರು ಸಂತೋಷ್ ರಾವ್‌ನ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನು ವಹಿಸಿ ಆತನನ್ನು ಬಿಡುಗಡೆ ಮಾಡಿಸುವ ಎಲ್ಲಾ ಪ್ರಯತ್ನವನ್ನು ನಡೆಸಿರುತ್ತಾರೆ.

ವಸಂತ್ ಗಿಳಿಯಾರ್ ಎಂಬುವವರು ವಿಠಲ್ ಗೌಡನನ್ನು ಮಾತನಾಡಿಸಿದಾಗ, ಸಂತೋಷ ರಾವ್‌ನನ್ನು ಆರೋಪದಿಂದ ಬಿಡುಗಡೆ ಮಾಡಿಸಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿರುವುದನ್ನು ಒಪ್ಪಿಕೊಂಡಿರುತ್ತಾನೆ. ಸದರಿ ವೀಡಿಯೋ ತುಣುಕನ್ನು ವಿಠಲಗೌಡ-04 ಎಂದು ಗುರುತಿಸಿ ಸೌಜನ್ಯ ಎಂದು ಬರೆದಿರುವ ಡಿ.ವಿ.ಡಿ. ಯಲ್ಲಿ ಹಾಕಿದ್ದೇನೆ. ಸೌಜನ್ಯಳ ಮೇಲೆ ದೌರ್ಜನ್ಯ ನಡೆಸಿ ಕೊಲೆ ಮಾಡಿದ್ದಾರೆಂದು ಪೊಲೀಸರು ಆರೋಪಿಸಿ ದೋಷಾರೋಪಣ ಪತ್ರ ಸಲ್ಲಿಸಿರುವ ಆರೋಪಿತ ವ್ಯಕ್ತಿಯಾದ ಸಂತೋಷ್ ರಾವನನ್ನು ಆರೋಪದಿಂದ ಬಿಡುಗಡೆಗೊಳಿಸಲು ಒಂದು ಕೋಟಿಗಿಂತ ಹೆಚ್ಚಿನ ಹಣವನ್ನು ವಿಠಲ್‌ಗೌಡ ಖರ್ಚು ಮಾಡಿರುವುದು ಏಕೆ ಮತ್ತು ಸದರಿ ಹಣ ವಿಠಲ್‌ಗೌಡನಿಗೆ ಎಲ್ಲಿಂದ ಬಂತು ಎಂಬುದರ ಬಗ್ಗೆ ಸಮಗ್ರ ತನಿಖೆ ನಡೆಸಿದರೆ ಹೆಚ್ಚಿನ ಸತ್ಯಾಂಶ ತಿಳಿದು ಬರುತ್ತದೆ.

ಉ) ಸೌಜನ್ಯಳ ಪ್ರಕರಣದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆನೆಂದರೆ, ಈ ಪ್ರಕರಣದಲ್ಲಿ ಸಂಬಂಧಿಸಿದಂತೆ ಎಲ್ಲಾ ವಿಚಾರದಲ್ಲೂ ಶ್ರೀಮತಿ ಕುಸುಮಾರವರೇ ಮುಂದಿದ್ದು, ಎಲ್ಲಾ ವ್ಯವಹಾರಗಳನ್ನು ಇವರೇ ನಡೆಸಿರುವುದು ಕಂಡು ಬರುತ್ತದೆ. ಎಲ್ಲಿಯೂ ಕೂಡ ಸೌಜನ್ಯಳ ತಂದೆ ಚಂದಪ್ಪಗೌಡರವರು ಮುಂಚೂಣಿಯಲ್ಲಿರುವುದು ಕಂಡು ಬರುವುದಿಲ್ಲ. ನನಗಿರುವ ಮಾಹಿತಿಯ ಪ್ರಕಾರ ಚಂದಪ್ಪಗೌಡರವರಿಗೆ ತಮ್ಮ ಮಗಳ ಸಾವಿಗೆ ವಿಠಲಗೌಡ ಕಾರಣ ಎಂಬುದು ಮತ್ತು ತಮ್ಮ ಹೆಂಡತಿ ಶ್ರೀಮತಿ ಕುಸುಮಾವತಿ ವಿಠ್ಠಲಗೌಡನನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದಾಳೆ ಎಂಬುದು ಗೊತ್ತಿದ್ದರೂ ಕೂಡ ಶ್ರೀಮತಿ ಕುಸುಮಾವತಿ ಮತ್ತು ಇತರರ ಬೆದರಿಕೆಯಿಂದ ಚಂದ್ರಪ್ಪ ಗೌಡರವರಿಗೆ ಸತ್ಯವನ್ನು ಹೇಳಲಾರದೆ ಎಲ್ಲವನ್ನು ಸಹಿಸಿಕೊಂಡು ಮೌನವಾಗಿದ್ದರು ಹಾಗೂ ಇದೇ ಕೊರಗಿನಲ್ಲಿ ಜೀವ ಬಿಟ್ಟಿರುತ್ತಾರೆ ಎಂಬ ಅನುಮಾನವಿದೆ ಚಂದಪ್ಪಗೌಡರ ಸಾವಿನ ಬಗ್ಗೆ ಶ್ರೀಮತಿ ಕುಸುಮಾವತಿರವರೇ ಅನುಮಾನ ವ್ಯಕ್ತಪಡಿಸಿ, ಮಾಧ್ಯಮದ ಮುಂದೆ ಮಾತನಾಡಿದ್ದಾರೆ. ಸಮು ವೀಡಿಯೋ ತುಣುಕನ್ನು ಕುಸುಮಾವತಿ-02 ಎಂದು ಗುರುತಿಸಿ, ಸೌಜನ್ಯ ಎಂದು ಬರೆದಿರುವ ಡಿ.ವಿ.ಡಿಯಲ್ಲಿ ಹಾಕಿರುತ್ತೇನೆ.

ಊ) ವಿಠ್ಠಲಗೌಡ ಹೇಳುವ ಪ್ರಕಾರ ಜೀಪಿನಲ್ಲಿ ಹೋಗುವಾಗ ಸ್ನಾನಘಟ್ಟದ ಬಳಿ ಸೌಜನ್ಯ ಹೋಗುತ್ತಿದ್ದುವನ್ನು ನೋಡಿದ್ದು ನಿಜವಾಗಿದ್ದರೆ ಆಕೆ ಬೆಳಿಗ್ಗೆಯಿಂದ ಉಪವಾಸ ಇದ್ದ ವಿಚಾರ ಗೊತ್ತಿದ್ದರಿಂದ ಆಕೆಯನ್ನು ಜೀಪಿನಲ್ಲಿ ಮನೆಗೆ ಕರೆದುಕೊಂಡು ಹೋಗಿ, ಊಟ ಮಾಡಿಸುವ ಕೆಲಸವನ್ನು ವಿಠಲಗೌಡ ಮಾಡಬೇಕಾಗಿತ್ತು. ಏಕೆಂದರೆ ಜೀಪು ವಿಠಲಗೌಡ ನದ್ದೇ ಆಗಿತ್ತು. ಭಾರತೀಯ ಸಾಕ್ಷ್ಯ ಅಧಿನಿಮಯ ಕಲಂ 14 ರಲ್ಲಿ ಹೇಳಿರುವಂತೆ ಉಪವಾಸವಿದ್ದ ಸೌಜನ್ಯಳನ್ನು ವಿಠಲಗೌಡ ಜೀಪಿನಲ್ಲಿ ಕರೆದುಕೊಂಡು ಮನೆಗೆ ಹೋಗದೆ. ನಡೆದುಕೊಂಡು ಹೋಗುವಂತೆ ಮಾಡಿರುವುದು ಸಾಕಷ್ಟು ಅನುಮಾನಗಳನ್ನು ಮೂಡಿಸುತ್ತದೆ.

ಋ) ನನಗೆ ತಿಳಿದಿರುವ ಮಾಹಿತಿ ಪ್ರಕಾರ ವಿಠಲಗೌಡನ ಸಂಚಾರಿ ದೂರವಾಣಿ ದಾಖಲೆಗಳನ್ನು ತನಿಖೆಯ ಸಂದರ್ಭದಲ್ಲಿ ಪಡೆದುಕೊಂಡಿದ್ದು ಸದರಿ ದಾಖಲಾತಿಯನ್ನು ವಿಶ್ಲೇಷಣೆಗೆ ಒಳಪಡಿಸಿ 09.10. 2012 ಮತ್ತು 10.10.2012 ರಂದು ಮತ್ತು ಇತರೆ ದಿನಗಳಂದು, ವಿಠಲಗೌಡ ಯಾವ ಸಮಯದಲ್ಲಿ, ಯಾರೊಂದಿಗೆ, ಯಾವ ಕಾರಣಕ್ಕಾಗಿ ಸಂಪರ್ಕ ಮಾಡಿರುತ್ತಾನೆ ಮತ್ತು ಯಾವ ಸ್ಥಳದಲ್ಲಿ ಇರುತ್ತಾನೆ ಎಂಬಂತಹ ಅಂಶಗಳ ಬಗ್ಗೆ ಪರಿಶೀಲನೆ ನಡೆಸಿದರೆ ಹೆಚ್ಚಿನ ಸತ್ಯಾಂಶ ದೊರಕುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಮತ್ತು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರಗಳನ್ನು ಗಮನಿಸಿದಾಗ, ಸೌಜನ್ಯಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ವಿಠಲಗೌಡ, ಆಕೆಯನ್ನು ಕೊಲೆ ಮಾಡಿದ್ದಾನೆ. ಸಾಕ್ಷ್ಯಾಧಾರಗಳನ್ನು ನಾಶ ಮಾಡಿದ್ದಾನೆ ಮತ್ತು ಸುಳ್ಳು ಸಾಕ್ಷ್ಯಾಧಾರಗಳನ್ನು ನಾಶಪಡಿಸಿದ್ದಾನೆ. ಎಂಬುದು ಮೇಲ್ನೋಟಕ್ಕೆ ತಿಳಿದು ಬರುತ್ತದೆ. ಆದ್ದರಿಂದ ಮೇಲ್ಕಂಡ ಅಂಶಗಳ ಬಗ್ಗೆ ಮತ್ತು ವಿಚಾರಣೆ/ತನಿಖೆ ಸಂದರ್ಭದಲ್ಲಿ ಸೂಕ್ತ ಎಂದು ಕಂಡು ಬರುವ ಇತರೆ ಅಂಶಗಳ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆಯನ್ನು, ಆದಷ್ಟು ಬೇಗ ನಡೆಸಿ, ಸೂಕ್ತ ಕಾನೂನು ಕ್ರಮಗಳನ್ನು ತೆಗೆದುಕೊಂಡು, ಸೌಜನ್ಯ ಮೇಲೆ ದೌರ್ಜನ್ಯ ನಡೆಸಿ, ಕೊಲೆ ಮಾಡಿರುವ ನಿಜವಾದ ಆರೋಪಿತರಿಗೆ ಶಿಕ್ಷೆಯನ್ನು ಕೊಡಿಸಿ, ಸೌಜನ್ಯಳ ಆತ್ಮಕ್ಕೆ ಶಾಂತಿ ಸಿಗುವಂತೆ, ನಿಮ್ಮ ಇಲಾಖೆಯ ಗೌರವಕ್ಕೆ ಅಂಟಿರುವ ಕಳಂಕವನ್ನು ಹೋಗಲಾಡಿಸುವಂತೆ, ಸೌಜನ್ಯ ಪ್ರಕರಣವನ್ನು ಮುಂದಿಟ್ಟುಕೊಂಡು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿರುವುದಕ್ಕೆ ಕಡಿವಾಣ ಹಾಕುವಂತೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ತನಿಖೆಯ ಸಂದರ್ಭದಲ್ಲಿ ಪರಿಗಣಿಸಬೇಕಾದ ಮತ್ತುಷ್ಟು ಪ್ರಮುಖ ಅಂಶಗಳ (ಸಾಕ್ಷ್ಯಾಧಾರಗಳ) ಬಗ್ಗೆ ಪ್ರತ್ಯೇಕವಾಗಿ ಮತ್ತೊಂದು ಮನವಿ ಪತ್ರವನ್ನು ನೀಡಲಿದ್ದೇನೆ.

ಬುರುಡೆ ರಹಸ್ಯ!

ಸುದ್ದಿಯಲ್ಲಿದೆ ಬುರುಡೆ. ಎಪ್ಪತ್ತೈದು ವರ್ಷಗಳ ಹಿಂದೆ ಸಿಕ್ಕಿತ್ತು ಬುರುಡೆ. ಇದರ ಹಿಂದೆ ಹೋಗಿದ್ದರು ಎಸ್‌ಐ. ಕೊನೆಗೂ ಆರೋಪಿಯ ಬಂಧನ. ಈ ಪ್ರಕರಣ ನ್ಯಾಯಾಲಯದಲ್ಲಿ ಸಾಬೀತು. ಆರೋಪಿಗೆ ಗಲ್ಲು ಶಿಕ್ಷೆ. ಅತ್ಯಂತ ಕುತೂಹಲಭರಿತ ಕಥಾನಕ...

ಅತೀ ಶೀಘ್ರದಲ್ಲಿ

# ನಿವೃತ್ತ ಎಸಿಪಿ ಸುಬ್ಬಣ್ಣ ಮೇಲೆ ದಾಳಿ, ಚಿನ್ನಾಭರಣ ದರೋಡೆ!

3 ☞

ಬ್ರಾಸ್‌ಲೆಟ್ ಅನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಬೆಳಿಗ್ಗೆ 9.30ರ ಸುಮಾರಿಗೆ ಎಚ್. ಸುಬ್ಬಣ್ಣ ವಾಕಿಂಗ್ ಮುಗಿಸಿಕೊಂಡು ಹೆಬ್ಬಾಳದ ವೆಟರಿನರಿ ಆಸ್ಪತ್ರೆ ಬಳಿಯಿಂದ ಮನೆ ಕಡೆಗೆ ಹೊರಟಿದ್ದ ವೇಳೆ ಮುಖಕ್ಕೆ ಕಪ್ಪು ಬಟ್ಟೆ ಧರಿಸಿಕೊಂಡು ಬಂದಿದ್ದ ದರೋಡೆಕೋರರು,

ಸುಬ್ಬಣ್ಣ ಅವರ ಬಳಿಯಿಂದ ಸುಮಾರು 8 ಲಕ್ಷ ರೂಪಾಯಿ ಬೆಲೆಬಾಳುವ ಚಿನ್ನಾಭರಣವನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ದರೋಡೆಕೋರರು ಸುಬ್ಬಣ ಮೇಲೆ ಚಾಕುವಿನಿಂದ ದಾಳಿ ನಡೆಸಿದ್ದರಿಂದ ಅವರ ಕೈಗೆ ಗಾಯವಾಗಿತ್ತು. ಕೂಡಲೇ ಸ್ಥಳೀಯ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದರು.

ತಮ್ಮ ಮೇಲೆ ನಡೆದ ದಾಳಿ, ಹಲ್ಲೆ ಹಾಗೂ ದರೋಡೆ ಬಗ್ಗೆ ಸುಬ್ಬಣ್ಣ ಅವರು ಸಂಜಯ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅಲ್ಲಿನ ಪೊಲೀಸ್ ಇನ್ಸ್ ಪೆಕ್ಟರ್ ತನಿಖೆ ಕೈಗೊಂಡು ಈ ದರೋಡೆ ಕೇಸ್‌ಗೆ ಸಂಬಂಧಿಸಿದಂತೆ ಇದೀಗ ಮೂವರು ಐನಾತಿ ಆರೋಪಿಗಳನ್ನು ಬಂಧಿಸಿದ್ದಾರೆ.

**ಡೇರಿಂಗ್ ಪೊಲೀಸ್ ಆಫೀಸರ್ ಎಚ್. ಸುಬ್ಬಣ್ಣ**

ನಿವೃತ್ತ ಎಸಿಪಿ ಎಚ್.ಸುಬ್ಬಣ್ಣ ಅವರ ಬಗ್ಗೆ ಬೆಂಗಳೂರು ಪೊಲೀಸ್ ಇಲಾಖೆಯಲ್ಲಿ ಒಳ್ಳೆಯ ಹೆಸರಿದೆ. ತುಮಕೂರು ಮೂಲದ ಹೆಚ್. ಸುಬ್ಬಣ್ಣನವರು ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಹಾಗೂ ಎಸಿಪಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಹಳೇ ಪಂಟರ್ ಕಾಟನ್ ಪೇಟೆ ಪುಷ್ಪನ ಕಾಲನ್ನು ಸ್ಕ್ರಾಪ್ ಮಾಡಿದ ಪ್ರಕರಣ, ನಂದಿನಿ ಲೇಔಟ್‌ನಲ್ಲಿ 2003-04ರಲ್ಲಿ ನಡೆದಿದ್ದ ಅಬಕಾರಿ ಗುತ್ತಿಗೆದಾರನ ಕೊಲೆ ಕೇಸ್ ಈಗಲೂ ನೆನಪಾಗುತ್ತವೆ.


ಕ್ಷೇಮ ವಿಚಾರಿಸುತ್ತಿರುವ ಸ್ನೇಹಿತರು

ನಂದಿನಿ ಲೇಔಟ್‌ನಲ್ಲಿ ಐನಾತಿ ಹೆಂಗಸೊಬ್ಬಳು ಯುವ ಮಿಂಡನೊಂದಿಗೆ ಮಜಾ ಮಾಡು ವಾಸೆಯಿಂದ ಅಬಕಾರಿ ಗುತ್ತಿಗೆದಾರನಾಗಿದ್ದ ತನ್ನ ಗಂಡನನ್ನು ಮನೆಯಲ್ಲೇ ಕೊಲ್ಲಿಸಿದ್ದ ಘಟನೆ ನಡೆದಿತ್ತು. ಕಲ್ಬುರ್ಗಿಯ ವೈದ್ಯ ವಿದ್ಯಾರ್ಥಿಯ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಚಿನಾಲಿ ಪತ್ನಿಯು, ಗಂಡನ ಕತೆ ಮುಗಿಸಿ ಜೀವನ ಪೂರಾ ಆ ಯುವಕನ ಜೊತೆ ಚಕ್ಕಂದ ಆಡಿಕೊಂಡು ಇರುವ ದುರಾಸೆಯಿಂದ ತಾಳಿ ಕಟ್ಟಿದ ಗಂಡನನ್ನು ನಿರ್ದಾಯವಾಗಿ ಮುಗಿಸಿದ್ದಳು!

ಆ ರಾತ್ರಿ ತನ್ನ ಗಂಡ ಮನೆಗೆ ಬಂದು ಮಲಗಿದ್ದಾಗ, ಪ್ರಿಯಕರನನ್ನು ರಹಸ್ಯವಾಗಿ ಮನೆಗೆ ಕರೆಸಿಕೊಂಡು, ರೂಮಿನ ಸಜ್ಜಾದಲ್ಲಿ ಅಡಗಿಕೊಳ್ಳುವಂತೆ ಮಾಡಿ, ಮಟ ಮಟ ಮಧ್ಯರಾತ್ರಿ ವೇಳೆ, ಗೊರಕೆ ಹೊಡಿತಾ ಮಲಗಿದ್ದ ನಿಷ್ಪಾಪಿ ಪತಿಯನ್ನು ನಿದ್ದೆಯಲ್ಲೇ ಕೊಲೆ ಮಾಡಿಸಿದ್ದಳು! ಈ ಕೊಲೆ ಕೇಸ್ ಆಗ ಬೆಂಗಳೂರಿನಿಂದ ಹಿಡಿದು ದೂರದ ಕಲ್ಬುರ್ಗಿವರೆಗೂ ದೊಡ್ಡ ಸಂಚಲನವನ್ನೇ ಉಂಟು ಮಾಡಿತ್ತು. ಅಲ್ಲದೆ ಈ ಕೊಲೆ ಕೇಸ್ ಅಂದಿಗೆ ಬೆಂಗಳೂರಿನ ಹೈಪ್ರೊಫೈಲ್ ಕೊಲೆ ಕೇಸ್ ಕೂಡ ಆಗಿತ್ತು. ಈ ಕೊಲೆ ಪ್ರಕರಣವನ್ನು ಭೇಧಿಸಿ, ಚಿನಾಲಿ ಪತ್ನಿ ಹಾಗೂಅವಳ ಯುವ ಪ್ರಿಯಕರನನ್ನು ಬಂಧಿಸಿದ್ದು ಇದೇ ಎಚ್. ಸುಬ್ಬಣ್ಣ ಎಂಬ ಧಿಟ್ಟ ಪೊಲೀಸ್ ಅಧಿಕಾರಿ!

ಬೆಂಗಳೂರಿನ ಲಗ್ಗೆರೆ, ರಾಜಗೋಪಾಲ ನಗರ, ಕಾಟನ್‌ಪೇಟೆ, ವಿ.ವಿ. ಪುರ, ಪೀಣ್ಯ ಇವೇ ಮುಂತಾದ ಪೊಲೀಸ್ ಠಾಣೆಗಳಲ್ಲಿ ಎಚ್.ಸುಬ್ಬಣ್ಣ ಕೆಲಸ ಮಾಡಿದ್ದಾರೆ. ಜೊತೆಗೆ ತುಮಕೂರು ಟೌನ್ ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಆಗಿಯೂ ಕೆಲಸ ಮಾಡಿದ್ದಾರೆ.

ಕರ್ತವ್ಯದ ಜೊತೆಗೆ ವಹ್ನಿ ಕುಲ ಕ್ಷತ್ರಿಯ (ತಿಗಳ) ಸಮುದಾಯದ ಸಾಮಾಜಿಕ ಚಟುವಟಿಕೆಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡು, ಪೊಲೀಸ್ ಇಲಾಖೆಯಿಂದ ನಿವೃತ್ತಿಗೊಂಡ ಬಳಿಕವೂ ಇಂದಿಗೂ ಸಕ್ರಿಯವಾಗಿದ್ದಾರೆ. ಇಂಥ ಅಧಿಕಾರಿಯ ಮೇಲೆ ಮುಸ್ಲಿಂ ಪುಂಡ ಪೋಕರಿಗಳಿಂದ ದರೋಡೆ ನಡೆದಿದ್ದು ಪ್ರಜ್ಞಾವಂತ ಜನತೆಯನ್ನು ಬೆಚ್ಚಿಬೀಳುವಂತೆ ಮಾಡಿದೆ!

ಸದ್ಯ,ಸಂಜಯ ನಗರ ಪೊಲೀಸರು ಖಡಕ್ ಕಾರ್ಯಾಚರಣೆ ನಡೆಸಿ ಕೆಲವೇ ದಿನಗಳಲ್ಲಿ ಈ ದರೋಡೆ ಕೃತ್ಯದ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಮೊಹಮ್ಮದ್ ಸಲ್ಮಾನ್, ಸೈಯ್ಯದ್ ಮೋಹಿಸಿನ್, ಸೈಯ್ಯದ್ ಇರ್ಫಾನ್ ಎಂಬುವರೇ ಬಂಧಿತ ದರೋಡೆಕೋರರು.ಅಂದಹಾಗೆ, ನಿವೃತ್ತ ಎಸಿಪಿ ಸುಬ್ಬಣ್ಣನವರ ಮನೆಗೆ ನಗರಾಭಿವೃದ್ಧಿ ಖಾತೆ ಸಚಿವ,ಹೆಬ್ಬಾಳ ಕ್ಷೇತ್ರದ ಶಾಸಕ ಭೈರತಿ ಸುರೇಶ್ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ. ಇನ್ನುಳಿದಂತೆ, ಜೆಸಿ ನಗರ ಉಪ ವಿಭಾಗದ ಪೊಲೀಸ್ ಅಧಿಕಾರಿಗಳು ಸುಬ್ಬಣ್ಣನವರ ಯೋಗ ಕ್ಷೇಮ ನೋಡಿಕೊಳ್ಳುತ್ತಿದ್ದಾರೆ. ☯

5 ☞

ಬರುವ ಗಿರಾಕಿಗಳ ಸಂಖ್ಯೆ ಹೆಚ್ಚಾಗಿತ್ತು.

ಪ್ರತಿದಿನವೂ ಪಾರ್ಲರ್ ಮುಂದೆ ಕಾರು ಜೀಪುಗಳಲ್ಲಿ ಗಂಡಸರು, ಹುಡುಗರು ಬರುತ್ತಿದ್ದರು. ಅಷ್ಟೇ ಆಗಿದ್ದರೆ ಯಾವುದೇ ಅನುಮಾನಗಳು ಬರುತ್ತಿರಲಿಲ್ಲ, ಆದರೆ ಟೈಟ್ ಜೀನ್ಸ್ ಟೀ ಶರ್ಟ್ ಹಾಕಿಕೊಂಡು ಬರುತ್ತಿದ್ದ ಯುವತಿಯರು, ಮಹಿಳೆಯರು ಅವರ ಕಿಲಕಿಲ ನಗು ಎಲ್ಲವೂ ಸುತ್ತಮುತ್ತಲಿನವರಲ್ಲಿ ಅನುಮಾನವನ್ನು ಹುಟ್ಟು ಹಾಕಿತ್ತು. ಹೀಗಾಗಿ ಕೆಲವರು ಪೊಲೀಸರಿಗೆ ಮೌಖಿಕವಾಗಿ ಮಾಹಿತಿಗಳನ್ನು ನೀಡಿದ್ದರು.

ಆರೇಂಜ್ ಫ್ಯಾಮಿಲಿ ಬ್ಯೂಟಿ ಪಾರ್ಲರ್ ಮತ್ತು ಸ್ಪಾ ಸೆಂಟರ್‌ನ ಮೇಲೆ ದಿನದಿಂದ ದಿನಕ್ಕೆ ಸಾರ್ವಜನಿಕ ವಲಯದಲ್ಲಿ ಅನುಮಾನಗಳು ಕಾಡಲಾರಂಭಿಸಿದ್ದರಿಂದ ಡಿವೈಎಸ್ಪಿ ಮಹೇಶ್‌ಕುಮಾರ್, ಸಿಪಿಐ ಅನೂಪ್ ಮಾದಪ್ಪ ವಿರಾಜಪೇಟೆ ನಗರ ಪೊಲೀಸ್ ಠಾಣೆ ಪಿಎಸ್‌ಐ ಪ್ರಮೋದ್, ಗ್ರಾಮಾಂತರ ಠಾಣೆ ಪಿಎಸ್‌ಐ ಲತಾ. ಎನ್.ಜೆ. ಮತ್ತು ಸಿಬ್ಬಂದಿಯನ್ನೊಳಗೊಂಡ ತಂಡ ಪಾರ್ಲರ್ ಮೇಲೆ ದಾಳಿ ಮಾಡಿತ್ತು.

ದಾಳಿಯ ವೇಳೆ ಬ್ಯೂಟಿ ಪಾರ್ಲರ್ ಹೆಸರಿನಲ್ಲಿ ಪರವಾನಗಿ ಪಡೆದು ಅಕ್ರಮವಾಗಿ ಸ್ಪಾ ಮಸಾಜ್ ಸೆಂಟರ್ ನಡೆಸುತ್ತಿರುವುದು ತಿಳಿದುಬಂದಿದೆ. ಅಲ್ಲದೆ ಕೆಲವು ಯುವತಿಯರನ್ನು ಮತ್ತು ಮಹಿಳೆಯರನ್ನು ಗಿರಾಕಿಗಳಿಗೆ ಪೂರೈಸುತ್ತಿದ್ದುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸದ್ಯ ಕೊಡಗು, ಮಂಗಳೂರು ಹಾಗೂ ತಮಿಳುನಾಡು ಮೂಲದ ಆರು ಮಹಿಳೆಯರನ್ನು ಪೊಲಿಸರು ರಕ್ಷಣೆ ಮಾಡಿ ಮಹಿಳಾ ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಗಿದೆ. ಆರೋಪಿಗಳಾದ ಪ್ರದೀಪನ್ ಪಿ.ಪಿ, (48), ಕಲೇಶ್ ಕುಮಾರ್ (45), ಶಾಜಿ (38), ವಿರಾಜಪೇಟೆ ತಾಲೂಕು ಅಮ್ಮತ್ತಿ ಗ್ರಾಮದ ನೆಲ್ಲಮಕ್ಕಡ ಎ. ಪೊನ್ನಣ್ಣ (48) ಎಂಬುವರನ್ನು ಬಂಧಿಸಲಾಗಿದೆ. ತಂಡದ ಕಾರ್ಯವನ್ನು ಜಿಲ್ಲಾ ಎಸ್ಪಿ ಕೆ. ರಾಮರಾಜನ್ ಶ್ಲಾಘಿಸಿದ್ದಾರೆ. ☯


# ಜೆಡಿಎಸ್ ಹನುಮಂತೇಗೌಡ ಕದ್ದಿದ್ದ 150 ಕೋಟಿ ಮೌಲ್ಯದ ಬಿಡಿಎ ಲ್ಯಾಂಡ್ ಕಬ್ಜಾ!

ಕಂಡ ಕಂಡ ಖಾಲಿ ಜಾಗಗಳಿಗೆ ಬೇಲಿ ಹಾಕುತ್ತಿದ್ದ ಬಿಬಿಎಂಪಿ ಮಾಜಿ ಸದಸ್ಯ ಹನುಮಂತೇಗೌಡ ಒತ್ತುವರಿ ಮಾಡಿಕೊಂಡಿದ್ದ 150 ಕೋಟಿ ಬೆಲೆಬಾಳುವ ಬಿಡಿಎಗೆ ಸೇರಿದ ಭೂಮಿಯನ್ನು ಎಸ್ಪಿ ಲಕ್ಷ್ಮಿ ಗಣೇಶ್ ನೇತೃತ್ವದಲ್ಲಿ ನಿನ್ನೆ ಸೋಮವಾರ ದಾಳಿ ನಡೆಸಿ ವಶಕ್ಕೆ ಪಡೆಯಲಾಗಿದೆ.

ಕೆಂಗೇರಿ ಬಳಿಯ ವಳಗೆರೆಹಳ್ಳಿಯಲ್ಲಿದ್ದ ಬಿಡಿಎಗೆ ಸೇರಿದ್ದ 1.22 ಎಕರೆ ಭೂಮಿಗೆ ಹನುಮಂತೆಗೌಡ ಬೇಲಿ ಹಾಕಿ, ಸದರಿ ಜಮೀನನ್ನು ಪತ್ನಿ ಲತಾ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು! ಬೇಲಿ ಹಾಕಿರುವ ಪ್ರದೇಶ



ಬಿಡಿಎಗೆ ಸೇರಿದ್ದು ಜಾಗ ತೆರವು ಮಾಡುವಂತೆ ಬಿಡಿಎ ಅಧಿಕಾರಿಗಳು ಹಲವಾರು ಬಾರಿ ನೋಟೀಸ್ ನೀಡಿದ್ದರೂ ಹನುಮಂತೆಗೌಡ ಕ್ಯಾರೇ ಎಂದಿರಲಿಲ್ಲ. ಹೀಗಾಗಿ, ಸೋಮವಾರ ಮುಂಜಾನೆ ಎಸ್ಪಿ ಲಕ್ಷ್ಮಿ ಗಣೇಶ್ ನೇತೃತ್ವದಲ್ಲಿ ದಾಳಿ ನಡೆಸಿ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ.


ಎಸ್ಪಿ ಲಕ್ಷ್ಮಿ ಗಣೇಶ್

ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಹನುಮಂತೇಗೌಡ ಈ ಹಿಂದೆ ಹೇರೋಹಳ್ಳಿ ವಾರ್ಡ್‌ನಿಂದ ಬಿಬಿಎಂಪಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಹಾಗೂ ಯಲಹಂಕ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಕಂಡೋರ ಭೂಮಿಗೆ ಬೇಲಿ ಸುತ್ತುವುದರಲ್ಲಿ ಎಕ್ಸ್‌ಪರ್ಟ್ ಆದ ಹನುಮಂತೇಗೌಡ ವಿರುದ್ಧ ಇಂಥ ಹತ್ತಾರು ಆರೋಪಗಳಿವೆ!! ☯

# ಬಾಡಿ ಬಿಲ್ಡರ್ ಸೂರಿ ಅಮೇರಿಕಾ ಅಪಘಾತದಲ್ಲಿ ಸಾವು!

6 ☞

ಅಮೇರಿಕಾದಲ್ಲಿ ಸಂತೋಷದಿಂದ ಜೀವನ ನಡೆಸುತ್ತಿದ್ದರು.

**ಕಾರು ಅಪಘಾತದಲ್ಲಿ ಸೂರಿ ಸಾವು**

ಎಮ್ಮೆ ಮೇಯಿಸುವ ಕಾಯಕ ಮಾಡುತ್ತಾ ತನ್ನ ದೇಹವನ್ನು ಹುರಿಗುಟ್ಟಿಸಿ ತನ್ನ ಸಾಧನೆಯ ಮೂಲಕ ಜಗತ್ತಿನಲ್ಲೇ ವಿಸ್ಮಯ ಮೂಡಿಸಿದ್ದ ಸೂರಿ, ತಾನು ಹುಟ್ಟಿ ಬೆಳೆದ ಊರನ್ನು ಬಿಟ್ಟು ಹೋಗಿ ವಿದೇಶಗಳಲ್ಲಿ ಖ್ಯಾತಿಯನ್ನು ಹೊಂದಿದ್ದರು. ತನ್ನ ಹೆತ್ತ ತಾಯಿ, ತಂದೆ ಮತ್ತು ಹುಟ್ಟಿದ ಊರನ್ನು ಮರೆತಿರಲಿಲ್ಲ. ವರ್ಷದಲ್ಲಿ ಒಂದು ಬಾರಿಯಾದರೂ ಕೋಲಾರಕ್ಕೆ ಬಂದು ತಂದೆತಾಯಿ ಮತ್ತು ಕುಟುಂಬದವರೊಂದಿಗೆ ಒಂದು ವಾರ ಇದ್ದು ಮತ್ತೆ ಅಮೇರಿಕಾಕ್ಕೆ ಹೋಗುತ್ತಿದ್ದರು.

ಕಳೆದ ಆಗಸ್ಟ್ ಕೊನೆಯ ವಾರದಲ್ಲಿ ಸೂರಿ ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ ಕೋಲಾರಕ್ಕೆ ಬಂದಿದ್ದು, ಕೆಲವು ದಿನಗಳು ತಂದೆತಾಯಿಯ ಜೊತೆ ಇದ್ದು ಅವರಿಗೆ ಬೇಕಾದ ಅನುಕೂಲಗಳನ್ನು ಮಾಡಿ ನಂತರ ಅಮೇರಿಕಾಕ್ಕೆ ಹೋಗಿದ್ದರು. ಆಗಸ್ಟ್ 30ರಂದು ಸನಿವಾರ ಸಂಜೆ ಕೆಲಸದ ನಿಮಿತ್ತ ಬಾಡಿ ಬಿಲ್ಡರ್ ಸುರೇಶ್‌ಬಾಬು (48) ಅಮೇರಿಕಾದ ಫ್ಲೋರಿಡಾದಿಂದ ಟೆಕ್ಸಾಸ್ ನಗರಕ್ಕೆ ತನ್ನ ಸ್ನೇಹಿತನ ಕಾರನ್ನು ತೆಗೆದುಕೊಂಡು ಏಕಾಂಗಿಯಾಗಿ ಹೋಗುತ್ತಿದ್ದ ವೇಳೆ ಕಾರು ಅಪಘಾತಕ್ಕೆ ತುತ್ತಾಗಿದ್ದು, ತಕ್ಷಣ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಸೇರಿಸಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದ ಸೂರಿರವರು ಮೂರು ದಿನಗಳ ನಂತರ ಚಿಕಿತ್ಸೆ ಫಲಕಾರಿಯಾಗದೆ ಸೆಪ್ಟೆಂಬರ್ 1ರಂದು ಸೋಮವಾರ ಸಾವನ್ನಪ್ಪಿರುತ್ತಾರೆಂದು ತಿಳಿದು ಬಂದಿರುತ್ತದೆ. ಮಗನ ಸಾವಿನ ಸುದ್ದಿಯುನ್ನು ಕೇಳಿದ ತಂದೆತಾಯಿ ಮತ್ತು ಕುಟುಂಬದವರಿಗೆ ಸಿಡಿಲು ಬಡಿದಂತಾಗಿರುವುದಲ್ಲದೆ ಗಾಂಧಿನಗರದಲ್ಲಿ ಸೂತಕದ ಛಾಯೆ ಮೂಡಿತ್ತು. ಆಸ್ಪತ್ರೆಯ ನಿಯಮದಂತೆ ಪೊಲೀಸರ ಮತ್ತು ಸಂಬಂಧಿಕರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಿಂದ ಸುರೇಶ್‌ಬಾಬುರವರ ಮೃತದೇಹದ ಪರೀಕ್ಷೆಯನ್ನು ನಡೆಸಿದ ಮೇಲೆ ಪೊಲೀಸರು ಶವವನ್ನು ವಾರಸುದಾರರಾದ ಸೂರಿರವರ ಧರ್ಮಪತ್ನಿ ರಂಜಿತಾರವರಿಗೆ ನೀಡಲಾಯಿತು.


ಕಾಫಿನ್‌ನಲ್ಲಿ ಮೃತ ಸೂರಿ ಶವ

ಅಮೇರಿಕಾದಿಂದ ಸುರೇಶ್ ಬಾಬುರವರ ಶವವನ್ನು ಭಾರತಕ್ಕೆ ತರಲು ಮಾಡಬೇಕಾಗುವ ಕಾನೂನಾತ್ಮಕ ಪ್ರಕ್ರಿಯೆಗಳನ್ನು ಮುಗಿಸಿದ ನಂತರ ಸೂರಿರವರ ಮೃತದೇಹವನ್ನು ಅಮೇರಿಕಾದಿಂದ ಬೆಂಗಳೂರಿಗೆ ವಿಮಾನದಲ್ಲಿ ತೆಗೆದುಕೊಂಡು ಬಂದು, ಕೋಲಾರದಲ್ಲಿ ಕುಟುಂಬಸ್ಥರು, ಸಂಬಂಧಿಕರು ಮತ್ತು ಗಾಂಧಿನಗರದ ಸಾರ್ವಜನಿಕರ ಸಮ್ಮುಖದಲ್ಲಿ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ಸೂರಿರವರ ಸಾವಿನಿಂದ ದುಃಖತಪ್ತರಾದ ಸಾಮಾಜಿಕ ಕಾರ್ಯಕರ್ತ ಕೆ.ಸಿ. ರಾಜಣ್ಣ ಮತ್ತು ಕೆ.ಎಂ. ಅನಂತಕೀರ್ತಿ ಸೇರಿದಂತೆ ಸ್ನೇಹಿತರು ಕಂಬನಿ ಮಿಡಿದಿದ್ದಾರೆ. ☯

# ಸಿನಿಮಾ ಟಿಕೆಟ್ ದರ 200 ರೂ. ಫಿಕ್ಸ್! ಕೋರ್ಟ್ ಮೊರೆ ಹೋದ ಡಿಸ್ಟ್ರಿಬ್ಯೂಟರ್ಸ್!!

ಪ್ರತಿ ಬಾರಿ ಬಿಗ್ ಬಜೆಟ್ ಸಿನಿಮಾಗಳು ಬರುವಾಗಲೂ ದುಬಾರಿ ಟಿಕೆಟ್ ದರ ನಿಗದಿ ಮಾಡಲಾಗುತ್ತದೆ. ಅದರಲ್ಲೂ ಪರಭಾಷಾ ಸಿನಿಮಾಗಳು ಕರ್ನಾಟಕದಲ್ಲಿ ರಿಲೀಸ್ ಆದಾಗ ಟಿಕೆಟ್ ದರ 500 ರಿಂದ ಶುರುವಾಗಿ 1000 ರೂ. ತಲುಪಿದ ಉದಾಹರಣೆ ಇದೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಏಕರೂಪ ಟಿಕೆಟ್ ದರ ಜಾರಿಗೆ ತರುವುದಾಗಿ ಹಿಂದೆಯೇ ಹೇಳಿತ್ತು. ಇದೀಗ ಸೆಪ್ಟೆಂಬರ್ 12ರಿಂದ ಈ ನಿಯಮ ಜಾರಿಗೆ ತಂದು ಸರ್ಕಾರ ಆದೇಶ ಹೊರಡಿಸಿದೆ.



ಮಲ್ಟಿಪ್ಲೆಕ್ಸ್‌ಗಳಲ್ಲಿ ಟಿಕೆಟ್ ದರಕ್ಕೆ ಕಡಿವಾಣವೇ ಇಲ್ಲದಂತೆ ಆಗಿತ್ತು. ಇದರಿಂದ ಜನಸಾಮಾನ್ಯರು ಸಿನಿಮಾ ನೋಡೋದು ಕಷ್ಟ ಎಂಬಂತಹ ಪರಿಸ್ಥಿತಿ ನಿರ್ಮಾಣ ಆಗಿತ್ತು. ಈ ಕಾರಣದಿಂದಲೇ ಜನರು ಥಿಯೇಟರ್‌ನತ್ತ ಮುಖ ಮಾಡುವುದಿಲ್ಲ ಎಂಬ ಮಾತುಗಳು ಕೂಡ ಕೇಳಿ ಬಂದವು. ಈಗ ಇದಕ್ಕೆ ಕಡಿವಾಣ ಬಿದ್ದಿದೆ. ಸರ್ಕಾರ ಇಂದು ಹೊಸ ಆದೇಶವನ್ನು ಹೊರಡಿಸಿದೆ.

ಹೊಸ ಆದೇಶವು ಇಂದಿನಿಂದಲೇ ಅನ್ವಯ ಆಗಲಿದೆ. ಇದರ ಪ್ರಕಾರ ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ನಲ್ಲಿ ಟಿಕೆಟ್‌ನ ಮೂಲ ಬೆಲೆ 200 ರೂ. ದಾಟುವಂತಿಲ್ಲ, ಶೇ.18 ತೆರಿಗೆಯೂ ಸೇರಿದರೆ ಸಿನಿಮಾದ ಟಿಕೆಟ್ ದರ 236 ರೂಪಾಯಿ ಆಗಲಿದೆ. ಇದು ಪ್ರೇಕ್ಷಕ ನಿಟ್ಟುಸಿರು ಬಿಡುವಂತೆ ಮಾಡಿದೆ. ಇನ್ನು ಕೆಲವು ಷರತ್ತುಗಳನ್ನು ಕೂಡ ಸರ್ಕಾರ ಹೇರಿದೆ. ಅನೇಕ ಮಲ್ಟಿಪ್ಲೆಕ್ಸ್‌ಗಳಲ್ಲಿ ಗೋಲ್ಡ್ ಕ್ಲಾಸ್, ಡೈಮಂಡ್ ಕ್ಲಾಸ್ ವ್ಯವಸ್ಥೆ ಇರುತ್ತವೆ. ಇವುಗಳಿಗೆ 200 ರೂ. ಟಿಕೆಟ್ ದರದ ಮಿತಿ ಇಲ್ಲ! ಈ ಆಸನಗಳಿಗೆ ಮಲ್ಟಿಪ್ಲೆಕ್ಸ್‌ಗಳು ತಮ್ಮಿಷ್ಟದ ದರ ನಿಗದಿ ಮಾಡಬಹುದು....!!


ಬಹುತೇಕ ಮಲ್ಟಿಪ್ಲೆಕ್ಸ್‌ಗಳಲ್ಲಿ ರಿಕ್ಲೈನ್ ಸೀಟ್‌ಗಳು ಇರುತ್ತವೆ. ಅವುಗಳಿಗೂ 200 ರೂ. ಟಿಕೆಟ್ ದರ ಅನ್ವಯ ಆಗುತ್ತದೆ. ಎಲ್ಲಾ ಸರಿ, ಗೋಲ್ಡ್ ಕ್ಲಾಸ್‌ಗೆ ದರ ಮಿತಿ ಇಲ್ಲಾ ಎಂದ ಸರ್ಕಾರದ ನುಡಿ, ದಗಲು ಬಾಜಿಗಳಿಗೆ ದರ್ಬಾರ್ ಮಾಡಲು ಅವಕಾಶ ಕಲ್ಪಿಸಿದಂತಾಗಲಿಲ್ಲವೇ? ಶ್ರೀಮಂತರಿಗಾಗಿ ಇಷ್ಟು ಸಹಾಯ ಮಾಡಿದರೂ ಸಹ ಕೆಲ ಪ್ರೊಡ್ಯೂಸರ್ಸ್ / ಡಿಸ್ಟ್ರಿಬ್ಯೂಟರ್ಸ್ ಸರ್ಕಾರದ ಆದೇಶದ ವಿರುದ್ಧ ಕೋರ್ಟ್ ಮೊರೆ ಹೋಗಿದ್ದಾರೆ.

ಮಲ್ಟಿಪ್ಲೆಕ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಪಿವಿಆರ್ ಐನಾಕ್ಸ್ ಲಿಮಿಟೆಡ್, ಕೀ ಸ್ಟೋನ್ ಎಂಟರ್ಟೈನ್ಮೆಂಟ್ ಪ್ರೈವೇಟ್ ಲಿಮಿಟೆಡ್, ಹೊಂಬಾಳೆ ಫಿಲಂಸ್... ಮುಂತಾದವರು ಕೋರ್ಟ್‌ಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿದ್ದಾರೆ. ಸರ್ಕಾರ ಈ ರೀತಿ ಕಡಿಮೆ ದರ ನಿಗದಿ ಮಾಡಿರುವುದರ ಬಗ್ಗೆ ಆಕ್ಷೇಪಣೆ ಸಲ್ಲಿಸಿವೆ. ''200 ರೂ. ನಿಗದಿ ಮಾಡಿರುವ ಸರ್ಕಾರದ ನಿರ್ಧಾರ ಏಕಪಕ್ಷೀಯ ಮತ್ತು ಕಾನೂನುಬಾಹಿರ'' ಎಂದು ನ್ಯಾಯಾಲಯದಲ್ಲಿ ವಾದ ಮಾಡಿವೆ. ''ಟಿಕೆಟ್ ಖರೀದಿಸಿ ಸಿನಿಮಾ ನೋಡೋದು ಪ್ರೇಕ್ಷಕರಿಗೆ ಬಿಟ್ಟ ವಿಚಾರ. ಅದರಲ್ಲಿ ಸರ್ಕಾರ ಮಧ್ಯ ಪ್ರವೇಶಿಸಬಾರದು'' ಎಂದೆಲ್ಲಾ ವಿತಂಡ ವಾದ ಮಾಡಲಾಗಿದೆ!




ಸದ್ಯ ಕೋರ್ಟ್ ಈ ಏಕರೂಪ ದರ ನಿಗದಿಪಡಿಸಿದ ಸರಕಾರದ ಆದೇಶಕ್ಕೆ ಮಧ್ಯಂತರ ತಡೆ ನೀಡುವ ಕುರಿತು ಹೈಕೋರ್ಟ್ ತನ್ನ ತೀರ್ಪನ್ನು ಕಾಯ್ದಿರಿಸಿದೆ. ಇರಲಿ, ನ್ಯಾಯಾಲಯ ಏನು ಆದೇಶ ನೀಡಲಿದೆಯೋ, ಕಾದು ನೋಡೋಣ.

ಅದು ಒತ್ತಟ್ಟಿಗಿರಲಿ. ಕರ್ನಾಟಕದಲ್ಲಿ ಕಾರ್ಯ ನಿರ್ವಹಣೆ ಮಾಡುವ ಇದೇ ಮಲ್ಟಿಪ್ಲೆಕ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಪಿವಿಆರ್ ಐನಾಕ್ಸ್ ಲಿಮಿಟೆಡ್ ಮುಂತಾದ ಸಂಸ್ಥೆಗಳು ಚೆನ್ನೈ, ಹೈದರಾಬಾದ್, ಕೊಚ್ಚಿಯಂತಹ ದೊಡ್ಡ ದೊಡ್ಡ ಸಿಟಿಗಳಲ್ಲೂ ಸಿನಿಮಾ ತೋರಿಸುತ್ತಿವೆಯಲ್ಲ, ಅಲ್ಲಿ ಇವರು ನಿಗದಿಪಡಿಸಿರುವ ಟಿಕೆಟ್ ದರವೆಷ್ಟು?




**ಇಲ್ಲಿದೆ ನೋಡಿ ಅಂಕಿ-ಅಂಶಗಳು.....**

ಕರ್ನಾಟಕ ಸರ್ಕಾರದ ಹೊಸ ರೂಲ್ಸ್ ಪ್ರಕಾರ, ಬೆಂಗಳೂರಿನಲ್ಲಿ ಒಂದು ಪಿವಿಆರ್, ಐನಾಕ್ಸ್ ಮುಂತಾದ ಮಲ್ಟಿಪ್ಲೆಕ್ಸ್‌ನಲ್ಲಿ ಒಂದು ಟಿಕೆಟ್‌ನ ಬೆಲೆ ತೆರಿಗೆ ಸೇರಿ 236 ರೂ.! ಆದರೆ ಇದೇ ಪಿವಿಆರ್, ಐನಾಕ್ಸ್ ಚೆನ್ನೈ ನಗರದಲ್ಲಿ ಗರಿಷ್ಠ 183.80 ರೂ.ಗಳಿಗೆ ಸಿನಿಮಾವನ್ನು ತೋರಿಸುತ್ತಿದೆ! ಕೇರಳದಲ್ಲೂ ಕೂಡ ರಿಕ್ಲೈನರ್ ಸೀಟ್‌ಗಳನ್ನು ಹೊರತುಪಡಿಸಿ, ಮಿಕ್ಕ ಟಿಕೆಟ್‌ಗಳ ಬೆಲೆ 220 ರೂ. ದಾಟೋದಿಲ್ಲ! ಆದರೆ ಕರ್ನಾಟಕದಲ್ಲಿ ಮಾತ್ರ, ಕ್ಯಾತೆ ತೆಗೆದು ಕೋರ್ಟ್‌ಗೆ ಹೋಗಲಾಗಿದೆ ನೋಡ್ರಿ.

**ನಾವು ಗುಗ್ಗುಗಳ?!**

ಹೈದರಾಬಾದ್, ಮುಂಬೈನಂತಹ ಸಿಟಿಗಳಲ್ಲಿ 300 ರೂ.ವರೆಗೂ ಟಿಕೆಟ್ ದರವಿದೆ. ಆದರೆ ಅಲ್ಲಿ ಅದು ನಿಶ್ಚಿತ ದರ. ಯಾವುದೇ ಹೊಸ ಸಿನಿಮಾ, ಎಂಥದ್ದೇ ದೊಡ್ಡ ಸಿನಿಮಾವೇ ಬರಲಿ. ಅಷ್ಟೇ ದರ ಅಥವಾ ಅದಕ್ಕಿಂತ ಕಡಿಮೆ ದರದಲ್ಲಿ ಟಿಕೆಟ್ ಮಾರಾಟ ಮಾಡಬೇಕು. ಐದು ಹತ್ತು ರೂಪಾಯಿ ಟಿಕೆಟ್ ದರ ಜಾಸ್ತಿ ಮಾಡಬೇಕೆಂದರೂ ಸರ್ಕಾರದ ಎದುರು ಮಂಡಿಯೂರಿ ನಿಲ್ಲಬೇಕು.

ಸ್ಪೆಷಲ್ ಶೋ ಮಾಡಬೇಕೆಂದರೂ ತೆಲುಗು ನಿರ್ಮಾಪಕರು ಅಲ್ಲಿ ಅನುಮತಿಗಾಗಿ ಎಷ್ಟೆಲ್ಲಾ ಸರ್ಕಸ್ ಮಾಡುತ್ತಾರೆಂಬುದು ನಮಗೆ ತಿಳಿದಿದೆ. ಹೊರ ರಾಜ್ಯಗಳಲ್ಲಿ ಕೆಲವು ವರ್ಷಗಳಿಂದಲೇ ಈ ಏಕರೂಪ ಟಿಕೆಟ್ ದರವು ಜಾರಿಯಲ್ಲಿದೆ. ಇದುವರೆಗೂ ಅಲ್ಲಿ ಯಾವುದೇ ಸಮಸ್ಯೆ ಆಗಿಲ್ಲ ಆದರೆ ಕರ್ನಾಟಕದಲ್ಲಿ ಮಾತ್ರ ಕಿತಾಪತಿ ನಡೆಯುತ್ತಿದೆ. ಈ 200 ರೂ. ಟಿಕೆಟ್ ದರ ಜಾರಿ ಆಗುವುದಕ್ಕೂ ಮುನ್ನ ರಾಜ್ಯದಲ್ಲಿ ಎಂತಹ ಲೂಟಿ ಆಗುತ್ತಿತ್ತು ಎಂಬುದು ಎಲ್ಲಾ ಸಾಮಾನ್ಯ ಸಿನಿಮಾ ಪ್ರೇಕ್ಷಕನಿಗೂ ಗೊತ್ತಿದೆ.

ಟಿಕೆಟ್ ದರ ನಿಗದಿ ಮಾಡುವುದರಲ್ಲಿ ತಲೆ ಬುಡ ಇರುತ್ತಿರಲಿಲ್ಲ, ಸಾಮಾನ್ಯ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳಲ್ಲೂ ಮೊದಲ ಎರಡ್ಮೂರು ದಿನ 700-800 ರೂ.ಗಳವರೆಗೂ ಟಿಕೆಟ್ ದರ ನಿಗದಿಪಡಿಸಿದ ಉದಾಹರಣೆಗಳಿವೆ. ಮಲ್ಟಿಪ್ಲೆಕ್ಸ್‌ಗಳಂತೂ ಮೊದಲ ಮೂರು ದಿನಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಕಮಾಯಿ ಮಾಡಿಕೊಳ್ಳಬೇಕು ಎಂಬ ಹಠಕ್ಕೆ ಬಿದ್ದು ಸ್ಟಾರ್ ನಟರ ಬಿಗ್ ಬಜೆಟ್ ಸಿನಿಮಾಗಳಿಗೆ ಶೋಗಳನ್ನು ಎತ್ತಿತ್ತಿ ಕೊಡುತ್ತಾ, ದುಬಾರಿ ಟಿಕೆಟ್ ದರ ಫಿಕ್ಸ್ ಮಾಡಿ, ಭರ್ಜರಿ ಹಣವನ್ನು ಬಾಚಿಕೊಳ್ಳುವುದು ಹೊಸದೇನಲ್ಲ.... ಇಂತಹ ಲೂಟಿಗೆ ಬೆಂಗಳೂರಿಗರೇ ಬಲಿಯಾಗುತ್ತಿರುವುದು ಗಮನಿಯ ಸಂಗತಿ.

ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಏಕರೂಪ ದರವನ್ನು ನಿಗದಿ ಮಾಡಿರುವುದು ಸರಿಯಾಗಿದೆ. ಈಚೆಗೆ ಪ್ಯಾನ್ ಇಂಡಿಯಾ ಸಿನಿಮಾಗಳಿಗೆ ದೊಡ್ಡ ಬಜೆಟ್ ಹಾಕಲಾಗುತ್ತದೆ ಅಂತಾರೆ. ಒಂದೇ ಭಾಷೆಯಲ್ಲಿ ಸಿನಿಮಾ ತೆಗೆದು ಆಯಾ ಭಾಷೆಗಳಿಗೆ ಡಬ್ ಮಾಡುವುದು ಪ್ಯಾನ್ ಫ್ಯಾಶನ್ ಅನ್ನೋದು ಯಾರಿಗೆ ಗೊತ್ತಿಲ್ಲ ಹೇಳಿ? ಕೆಲ ಟ್ರಿಕ್ಕಿ ಕಿಲಾಡಿ ನಿರ್ಮಾಪಕರು, ಕಲಾವಿದರಿಗೆ ನೂರಾರು ಕೋಟಿ ಸಂಭಾವನೆ ನೀಡಿ, ಟಿಕೆಟ್ ಕಡಿಮೆ ರೇಟ್ ಇಟ್ಟರೆ ರಿಕವರಿ ಮಾಡೋದು ಹೇಗೆ ಎಂಬ ಪ್ರಶ್ನೆ ಎತ್ತುತ್ತಾರೆ.

ಅಲ್ಲಾ ಸ್ವಾಮಿ, ಕಲಾವಿದರಿಗೆ ದುಬಾರಿ ಸಂಭಾವನೆ ಕೊಡೋದು, ಎಗ್ಗಿಲ್ಲದಂತೆ ಹಣವನ್ನು ಖರ್ಚು ಮಾಡಿ ಸಿನಿಮಾ ನಿರ್ಮಿಸಿ, ಅದನ್ನು ಪ್ರೇಕ್ಷಕರ ತಲೆ ಮೇಲೆ ಹಾಕಿದರೆ ಹೇಗೆ? ಈ ಹಿಂದೆಯೂ ಕೂಡ ಕನ್ನಡದಲ್ಲಾಗಲಿ, ಪರಭಾಷೆಯಲ್ಲಾಗಲಿ, ದುಬಾರಿ ಬಜೆಟ್‌ನ ಸಿನಿಮಾಗಳು ಬಂದಿಲ್ಲವೇ? ಹಾಗೆಲ್ಲಾ ಇದೆ ಥರ ಟಿಕೆಟ್ ದರವನ್ನು ನಾಲ್ಕೈದು ಪಟ್ಟು ಹೆಚ್ಚಿಸಿ ಲೂಟಿ ಮಾಡಲಾಗಿತ್ತೇ? ಈ ಹಿಂದೆ 'ಜೋಗಿ', 'ಮುಂಗಾರು ಮಳೆ'ಯಂತಹ ಸಿನಿಮಾಗಳು ಕಡಿಮೆ ಟಿಕೆಟ್ ದರದಲ್ಲೂ ನಿರ್ಮಾಪಕರಿಗೆ ಭರ್ಜರಿ ಲಾಭ ತಂದುಕೊಟ್ಟಿಲ್ಲವೇ?

ಮೊದಲು ಚಿತ್ರ ನಿರ್ಮಾಣದಲ್ಲಿ ಬೇಕಾದ ಸರಿಯಾದ ಆರ್ಥಿಕ ಶಿಸ್ತು ಬಂದರೆ ಎಲ್ಲಾ ಸಮಸ್ಯೆಗಳು ತನ್ನಷ್ಟಕ್ಕೇ ತಾನೇ ಬಗೆಹರಿಯುತ್ತವೆ. ಇಷ್ಟಕ್ಕೂ ನಿಮ್ಮ ಗುಡಾಣ ತುಂಬಿಸಲು ಗಲ್ಲಾಪೆಟ್ಟಿಗೆ ಒಂದೇ ಮಾರ್ಗವಲ್ಲ! ಮಲ್ಟಿಪ್ಲೆಕ್ಸ್, ಚಿತ್ರ ಮಂದಿರಗಳಿಂದ ಹಣ ಬಂದರೆ ಮಾತ್ರ ನಿರ್ಮಾಪಕ ಬದುಕಲು ಸಾಧ್ಯ ಎಂಬ ಪರಿಸ್ಥಿತಿ ಏನಿಲ್ಲ.




ಈಗ ಸಿನಿಮಾ ಬಿಡುಗಡೆಗೂ ಮುನ್ನವೇ ದೊಡ್ಡ ವ್ಯವಹಾರ ನಡೆಯುತ್ತದೆ. ದೊಡ್ಡ ಬಜೆಟ್ ಸಿನಿಮಾ, ದೊಡ್ಡ ಹೀರೋ ನಟಿಸಿರುವ ಸಿನಿಮಾಗಳು ಅಂತ ಏನ್ ಹೇಳುತ್ತಾರೋ, ಅಂಥದ್ದೇ ಸಿನಿಮಾಗಳು ಪ್ರೀ - ರಿಲೀಸ್ ಬ್ಯುಸಿನೆಸ್‌ನಲ್ಲಿ ಮುಂದಿರುತ್ತವೆ. ಇಂತಹ ಸಿನಿಮಾಗಳ ಡಿಜಿಟಲ್ ಹಕ್ಕುಗಳನ್ನು ಒಟಿಟಿ ವೇದಿಕೆಗಳು ತುಟಿಕ್ ಪಿಟಿಕ್ ಎನ್ನದೇ ನಿರ್ಮಾಪಕರು ಹೇಳಿದ ರೇಟ್‌ಗೆ ಖರೀದಿ ಮಾಡುತ್ತಾರೆ. ಟಿವಿಯಲ್ಲಿ ಪ್ರಸಾರ ಮಾಡಲು ಸ್ಯಾಟಲೈಟ್ ಹಕ್ಕುಗಳನ್ನು ಕೂಡ ಪೈಪೋಟಿಗೆ ಬಿದ್ದು ಖರೀದಿ ಮಾಡಲಾಗುತ್ತದೆ. ಅಲ್ಲಿಯೇ ನಿರ್ಮಾಪಕರಿಗೆ ಹಾಕಿದ ಬಂಡವಾಳದಲ್ಲಿ ಬಹುತೇಕ ಹಣವನ್ನು ವಾಪಸ್ ಬಂದಿರುತ್ತದೆ. ಆದರೂ ಪ್ರೇಕ್ಷಕರ ಮೇಲೆ ಕಣ್ಣು, ಟಿಕೆಟ್‌ಗೆ ದುಬಾರಿ ಮೊತ್ತ ನಿಗದಿ ಪಡಿಸಿ, ಅಲ್ಲಿಯೂ ಕಾಸು ಕೀಳುವ ಹುನ್ನಾರ!

ಮೊದಲೆಲ್ಲಾ ಒಂದು ಫ್ಯಾಮಿಲಿಗೆ ಮನರಂಜನೆ ಬೇಕೆಂದರೆ, ಬಹುತೇಕ ಚಿತ್ರಮಂದಿರಗಳಿಗೆ ಬರಬೇಕಿತ್ತು. ವಾರಕ್ಕೋ, ತಿಂಗಳಿಗೋ ಒಂದು ಸಿನಿಮಾವನ್ನು ನೋಡಲು ಮನೆಮಂದಿಯೆಲ್ಲಾ ಕುಟುಂಬ ಸಮೇತ ಹೋಗುತ್ತಿದ್ದರು. ಆದರೆ ಈಗ ಮನರಂಜನೆಗೆ ಸಾಕಷ್ಟು ದಾರಿಗಳಿವೆ.

ಮೊಬೈಲ್ ಬಂದ ಮೇಲೆ ಬಹುತೇಕರು ಥಿಯೇಟರ್‌ಗೆ ಹೋಗೋದನ್ನೇ ಮರೆತಿದ್ದಾರೆ. 'ಲಾಸ್ಟ್ ಯಾವ ಸಿನಿಮಾ ನೋಡಿದ್ರಿ...'' ಎಂದು ಕೇಳಿದರೆ, ಹತ್ತನ್ನೆರಡು ವರ್ಷಗಳ ಹಿಂದೆ ಬಂದ ಯಾವುದೋ ಹಿಟ್ ಸಿನಿಮಾದ ಹೆಸರನ್ನ ಹೇಳುತ್ತಾರೆ!

ಇಂಥಹ ಮಟ್ಟಕ್ಕೆ ಸಿನಿಮಾ ಪ್ರೇಕ್ಷಕ ತಲುಪಿದ್ದಾನೆ. ಹೀಗಿರುವಾಗ ಅಂತಹವರನ್ನು ಮರಳಿ ಚಿತ್ರಮಂದಿರಗಳಿಗೆ ಕರೆತರುವುದು ಹೇಗೆ ಎಂಬುದರ ಬಗ್ಗೆ ಯೋಚಿಸಬೇಕಿದೆ ನೀವು. ಅದು ಬಿಟ್ಟು ದುಬಾರಿ ಟಿಕೆಟ್ ಹೆಸರಿನಲ್ಲಿ ಬರೆ ಹಾಕಿ, ಜನರನ್ನು ಥಿಯೇಟರ್‌ನಿಂದ ಇನ್ನಷ್ಟು ದೂರ ಇಡುವುದರಿಂದ ಏನೂ ಪ್ರಯೋಜನ ಇಲ್ಲ!



ಈಗಿನ ಪರಿಸ್ಥಿತಿಯಲ್ಲಿ ಒಂದು ಕುಟುಂಬದ ನಾಲ್ಕೈದು ಮಂದಿ ಸಿನಿಮಾಗೆ ಹೋಗಬೇಕು ಎಂದರೆ, ಕನಿಷ್ಠ ಟಿಕೆಟ್‌ಗೆಂದೇ 2 ಸಾವಿರ ರೂ. ಎತ್ತಿಡಬೇಕಾದ ಅನಿವಾರ್ಯತೆ ಇದೆ. ಉಳಿದಂತೆ, ಅಲ್ಲಿ ಹೊರಗಿನ ತಿಂಡಿಗೆ ಅವಕಾಶ ಇಲ್ಲ, ಅಲ್ಲಿಯೇ ಖರೀದಿ ಮಾಡಬೇಕು ಎಂಬ ರೂಲ್ಸ್ ಇರೋದ್ರಿಂದ ಆ ದುಬಾರಿ ಸ್ನ್ಯಾಕ್ಸ್‌ಗೆ ಒಂದೆರಡು ಸಾವಿರ ರೂ. ಖರ್ಚಾಗೋದು ಫಿಕ್ಸ್! ಜೊತೆಗೆ ಸ್ವಂತ ಗಾಡಿ ಇದ್ದರೆ ಪಾರ್ಕಿಂಗ್, ಪೆಟ್ರೋಲ್‌ಗೆ ಅಂತ 500 ರೂ. ಬೇಕು ಅಥವಾ ಆಟೋ, ಕ್ಯಾಬ್‌ನಲ್ಲಿ ಹೋದರೂ ಇಷ್ಟೇ ಮೊತ್ತ ಖರ್ಚು ಮಾಡಬೇಕು. ಅಲ್ಲಿಗೆ ಒಂದು ಮಿಡಲ್ ಕ್ಲಾಸ್ ಕುಟುಂಬಕ್ಕೆ ಕನಿಷ್ಠ ಎಂದರೂ ಒಂದು ಸಿನಿಮಾ ನೋಡಲು 4 ರಿಂದ 5 ಸಾವಿರ ರೂ. ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ. ಹೀಗಿರುವಾಗ ಯಾರು ರೆಗ್ಯುಲರ್ ಆಗಿ ಸಿನಿಮಾ ನೋಡಲು ಬರುತ್ತಾರೆ? ಇದರ ಬಗ್ಗೆಯೂ ನಿರ್ಮಾಪಕರು, ಮಲ್ಟಿಪ್ಲೆಕ್ಸ್‌ನವರು ಗಮನಿಸಬೇಕಲ್ಲವೇ?

ಹರ್ಷದ ಕೂಳಿಗಾಗಿ ವರ್ಷದ ಕೂಳು ಕಳೆದುಕೊಂಡ್ರಂತೆ ಎಂಬ ಗಾದೆಯಂತೆ, ಮೊದಲ ಎರಡ್ಮೂರು ದಿನಗಳಲ್ಲಿ ಟಿಕೆಟ್ ದರವನ್ನು ಅಧಿಕ ಮಾಡಿ, ಯರ್ರಾಬಿರ್ರಿ ಹಣ ಬಾಚಬಹುದು ಎಂಬ ಲೆಕ್ಕಾಚಾರದಲ್ಲಿರುವ ನಿರ್ಮಾಪಕರುಗಳು ಮತ್ತು ಮಲ್ಟಿಪ್ಲೆಕ್ಸ್‌ಗಳು ಮುಂದೊಂದು ದಿನ ಶಾಶ್ವತವಾಗಿ ಪ್ರೇಕ್ಷಕರನ್ನ ಕಳೆದುಕೊಂಡು ಬಾಗಿಲು ಮುಚ್ಚಿಕೊಳ್ಳಬೇಕಾಗಬಹುದು! ಚೆನ್ನಾಗಿ ಯೋಚಿಸಿ ಹುಷಾರಾಗಿರಿ....!!

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 21.9.2025

# ಜೆಎಸ್ಎಸ್ ಮೈದಾನದಲ್ಲಿ ವಿಷ್ಣು ಹುಟ್ಟುಹಬ್ಬ ಸಂಭ್ರಮ



ಸೆಪ್ಟೆಂಬರ್ 18 ವಿಷ್ಣುವರ್ಧನ್ ಅವರ 75ನೇ ಜಯಂತಿ. ಪ್ರತಿವರ್ಷವೂ ಈ ದಿನ ರಾಜ್ಯದ ವಿವಿಧ ಮೂಲೆಗಳಿಂದ ಅಭಿಮಾನಿಗಳು ಅಭಿಮಾನ್ ಸ್ಟುಡಿಯೋನಲ್ಲಿ ಸೇರುತ್ತಿದ್ದರು. ವಿಷ್ಣು ಅವರ ಸಮಾಧಿಗೆ ಪೂಜೆ ಸಲ್ಲಿಸಿ, ಅನ್ನಸಂತರ್ಪಣೆ ಮಾಡಿ, ರಕ್ತದಾನ, ನೇತ್ರದಾನಗಳಂಥ ಸಮಾಜ ಮುಖಿ ಕಾರ್ಯಗಳನ್ನು ಆಯೋಜಿಸುತ್ತಿದ್ದರು. ಆದರೆ ಈ ಬಾರಿ ಪರಿಸ್ಥಿತಿ ಭಿನ್ನ. ಬಾಲಣ್ಣ ಕುಟುಂಬದವರು ವಿಷ್ಣು ಸಮಾಧಿಯನ್ನು ಧ್ವಂಸಗೊಳಿಸಿರುವ ಜೊತೆಗೆ ವಿಷ್ಣು ಅಭಿಮಾನಿಗಳು ಅಭಿಮಾನ್ ಸ್ಟುಡಿಯೋನಲ್ಲಿ ಹುಟ್ಟುಹಬ್ಬ ಆಚರಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು.

ಸೋ, ಈ ದಿನ ಅಭಿಮಾನ್ ಸ್ಟುಡಿಯೋದ ಆವರಣ ಅಭಿಮಾನಿಗಳಿಲ್ಲದೆ ಬಣಗುಟ್ಟುತ್ತಿತ್ತು. ಯಾರಾದ್ರೂ ಬಂದು ಕಿರಿಕ್ ಮಾಡಬಹುದು ಅಂತ ಪೊಲೀಸ್ ಪಹರೆ ಹಾಕಲಾಗಿತ್ತು. ಆದರೆ, ಅವರು ನೊಣ ಹೊಡಕೊಂಡು ಕುಳಿತಿದ್ದು ಸಂಜೆ ಎದ್ದು ಹೋದರು. ವಿಷ್ಣುಸೇನಾ ಸಮಿತಿ ವಿರಕಪುತ್ರ ಶ್ರೀನಿವಾಸ್ ಟೀಮ್ ಹಾಗೂ ಬೆಂಗಳೂರಿನ ಅಸಂಖ್ಯಾತ ವಿಷ್ಣುವರ್ಧನ್ ಅಭಿಮಾನಿಗಳು ಅಭಿಮಾನ್ ಸ್ಟುಡಿಯೋ ಸಮೀಪದಲ್ಲೇ ಜೆಎಸ್ ಎಸ್ ಕಾಲೇಜ್ ಆವರಣದಲ್ಲಿ ಎರಡು ಎಕರೆ ಪ್ರದೇಶದಲ್ಲಿ ವಿಷ್ಣು ದಾದಾ ಹುಟ್ಟುಹಬ್ಬವನ್ನು ಭರ್ಜರಿಯಾಗಿ ಏರ್ಪಡಿಸಿದ್ದರು.






ದೇವಸ್ಥಾನ ನೆನಪಿಸೋ ಮಂಟಪ. ಅದರಲ್ಲಿ ವಿಷ್ಣುವರ್ಧನ್ ಅವರ ವಿಗ್ರಹ. ಅದ್ಭುತವಾದ ಶೃಂಗಾರ. ಭೂ ಕೈಲಾಸ ಎನ್ನಬಹುದು. ಅಲ್ಲಿಗೆ ಲಕ್ಷಾಂತರ ಅಭಿಮಾನಿಗಳು ಆಗಮಿಸಿದ್ರು. ಎತ್ತ ಕಿವಿಗೊಟ್ಟರೂ ವಿಷ್ಣು ಗುಣಗಾನ... ಗಾನವೆ. ಅನ್ನ ಸಂತರ್ಪಣೆ, ರಕ್ತದಾನ ಶಿಬಿರ, ಆರೋಗ್ಯ ತಪಾಸಣೆ ಶಿಬಿರ.... ಹೀಗೆ, ಸಾಮಾಜಿಕ ಸೇವೆಗಳ ಮೂಲಕ ಅರ್ಥಪೂರ್ಣವಾಗಿ ವಿಷ್ಣು ಹುಟ್ಟು ಹಬ್ಬವನ್ನ ಆಚರಿಸಲಾಗಿದೆ. ಇನ್ನೊಂದೆಡೆ, ಅರಮನೆ ಮೈದಾನದಲ್ಲಿ ಭಾರಿ ಅಭಿಮಾನಿ ಸಮೂಹ ಸೇರಿ ವಿಷ್ಣುವರ್ಧನ್ ಬರ್ತ್‌ಡೇ ಆಚರಿಸಿದ್ದಾರೆ. ಅತ್ತ ಮೈಸೂರಿನಲ್ಲಿ ಶ್ರೀಮತಿ ಭಾರತಿ ವಿಷ್ಣುವರ್ಧನ್ ಕುಟುಂಬ ಅರಮನೆ ಬಳಿ ಕಾವಾಡಿ ಮಕ್ಕಳ ಜೊತೆ ದಾದಾ ಹುಟ್ಟುಹಬ್ಬ ಆಚರಿಸಿದೆ.

ಇದೆಲ್ಲಾ ಒತ್ತಟ್ಟಿಗಿರಲಿ, ವಿಷ್ಣುವರ್ಧನ್ ಅವರು ಗತಿಸಿ 16 ವರ್ಷ ಕಳೆದಿದೆ. ಈಗಲೂ ಅವರ ಸಮಾಧಿ ವಿವಾದ ಇರುವುದು ವಿಪರ್ಯಾಸ. ಮೈಸೂರಿನಲ್ಲಿ 5 ಎಕರೆಯಲ್ಲಿ ಸ್ಮಾರಕ ನಿರ್ಮಾಣ ಆಗಿದೆಯಾದರೂ ಅದು ಒರಿಜಿನಲ್ ಸಮಾಧಿ ಆಗದು!

ಇನ್ನು, ಸುದೀಪ್ ಕೆಂಗೇರಿ ಬಳಿ ನಿರ್ಮಿಸಲು ಹೊರಟಿರೋ ವಿಷ್ಣುದರ್ಶನ ಕೂಡ ಸಂತೃಪ್ತಿ ನೀಡದು. ಚಿಕ್ಕದಾದರೂ ಸರಿಯೇ, ಮೊದಲು ಮಣ್ಣು ಮಾಡಿದ ಸ್ಥಳದಲ್ಲೇ ಸ್ಮಾರಕ ಆದರೆ ವಿಷ್ಣು ಆತ್ಮಕ್ಕೆ ಶಾಂತಿ. ಮತ್ತದು ಅಭಿಮಾನಿಗಳಿಗೂ ಸಂತಸ ತರುತ್ತದೆ... ಸರ್ಕಾರ ಈ ನಿಟ್ಟಿನಲ್ಲಿ ಗಮನ ಹರಿಸಲಿ.







# 'ರೈ' ಅತ್ತ ವರ್ಮ ಚಿತ್ತ!



ರಕ್ಕಸ ರಸಿಕ ರಾಮ್‌ಗೋಪಾಲ್ ವರ್ಮ ಸಖಿಯರ ಜೊತೆ ಖುಲ್ಲಮ್ ಖುಲ್ಲಾ ಚಲ್ಲಾಟ ಆಡಿಕೊಂಡು ಕಾಲ ಕಳೆಯುತ್ತಲೇ, ಒಂದೊಂದು ಕಾಂಟ್ರೋವರ್ಸಿ ಕ್ರಿಯೇಟ್ ಮಾಡ್ತಾ ಬಂದಿದ್ರು. ಇದೀಗ ಮತ್ತೆ ಕೆಲಸದ ಕಡೆ ಗಮನ ಹರಿಸಿ, ಉಪ್ಪಿ ಜೊತೆ 'ರೈ' ಸಿನಿಮಾ ಮಾಡಲು ಹೊರಟಿದ್ದಾರೆ. ಹಾಗೇ ನೋಡಿದರೆ, ಇದು ಸುದೀಪ್ ಜೊತೆ ಒಪ್ಪಂದವಾಗಿದ್ದ ಸಿನಿಮಾ. ಅನಂತರ ಸುರೇಶ್ ಒಬೆರಾಯ್ ಇಟ್ಟು 'ರೈ' ಮಾಡುವ ಅನೌನ್ಸ್ ಆಗಿತ್ತು. ಈ ಎರಡೂ ಪ್ರಾಜೆಕ್ಟ್ ಗಳು ಸೈಡ್‌ಗೆ ಸರಿದು ಇದೀಗ ಉಪ್ಪಿ ಅಭಿನಯದಲ್ಲಿ ಚಿತ್ರಿಸಲು ಸಿದ್ಧತೆ ನಡೆದಿದೆ. ಹೆಸರು 'ರೈ' ಅಂತಿಲ್ಲ, 'ಐ ಆವ್ ಆರ್' ಎಂದು ಇಡಲಾಗಿದೆ.




ರಾಜ್ ಯಜಮಾನ್ ಎಂಬುವರು ಇದರ ನಿರ್ಮಾಪಕರು. ಕತೆ ಚಿತ್ರಕತೆ ನಿರ್ದೇಶನ ಮಾಮೂಲಿಯಾಗಿ ರಾಮ್ ಗೋಪಾಲ್ ವರ್ಮರದ್ದೇ. ಭೂಗತ ಪಾತಕಿಗಳ ಬಯೋಗ್ರಫಿಯನ್ನು ಸಿನಿಮಾ ಮಾಡುವಲ್ಲಿ ವರ್ಮ ಎತ್ತಿದ ಕೈ ಅನ್ನೋದು ಈಗಾಗಲೇ ಪ್ರೂವ್ ಆಗಿದೆ. ವರ್ಮ ಇಲ್ಲಿಯೂ ಯಶಸ್ಸು ದಾಖಲಿಸುತ್ತಾರ... ಎಂಬುದನ್ನು ಕಾದು ನೋಡಬೇಕಿದೆ... ☯

# ಓಂ ಪ್ರಕಾಶ್ ರಾವ್‌ಗೆ ಮತ್ತೆ ಖುಲಾಯಿಸಿದ ಅದೃಷ್ಟ!



ಸ್ಯಾಂಡಲ್‌ವುಡ್‌ನಲ್ಲಿ ದುರ್ನಾತದ ಡರ್ಟಿ ಫೆಲೋ ಎಂದೇ ಖ್ಯಾತಿವೆತ್ತವರು ಓಂ ಪ್ರಕಾಶ್ ರಾವ್! ಈ ವ್ಯಕ್ತಿ ಲಾಕಪ್ ಡೆತ್, ಎ ಕೆ - 47, ಹುಚ್ಚ, ಸಿಂಹದ ಮರಿ, ಕಿರಣ್ ಬೇಡಿ, ವಂದೇ ಮಾತರಂ, ಅಯ್ಯ, ಕಲಾಸಿಪಾಳ್ಯ, ಭೀಮಾ ತೀರದಲ್ಲಿ...ಮುಂತಾದ ಬ್ಲಾಕ್ ಬಸ್ಟರ್ ಸಿನಿಮಾಗಳನ್ನು ಕೊಟ್ಟಿದ್ದಾರೆ. ಆದರೆ ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ತಿಕ್ಕಲು ಸ್ವಭಾವದಿಂದಾಗಿ ಮರ್ಯಾದಸ್ತ ನಿರ್ಮಾಪಕರನ್ನು ಕಳೆದುಕೊಂಡು ನಿರುದ್ಯೋಗ ಅನುಭವಿಸಿದರು. ಇವರ ಕ್ಲಾಸ್ ಮೇಟ್ ರಾಮು ಇರುವ ತನಕ ಅಂಥ ತೊಂದರೆ ಇರಲಿಲ್ಲ, ಅವರು ಹೋದಮೇಲೆ ಓಮಿ ಅಕ್ಷರಶ ಅನಾಥರಾದರು ಎಂದರೆ ತಪ್ಪಿಲ್ಲ. ಈವಾಗೇನೋ ಯಾರೋ ದೊಡ್ಡ ಮನಸ್ಸು ಮಾಡಿ ಫೀನಿಕ್ಸ್ ಅನ್ನೋ ಸಿನಿಮಾ ಚಿತ್ರಿಸಲು ಚಾನ್ಸ್ ಕೊಟ್ಟಿದ್ದಾರೆ. ಈ ಶೂಟಿಂಗ್ ಸ್ಪಾಟ್‌ನಲ್ಲೂ ಓಮಿ ಏನೇನೋ ರಗಳೆ ಮಾಡಿಕೊಂಡು ಟ್ರೋಲ್ ಆಗುತ್ತಿದ್ದಾರೆ. ಇದರ ಮಧ್ಯೆಯೇ ರಿಯಲ್ ಸ್ಟಾರ್ ಉಪ್ಪಿ ಅವರು ಈ ತಿಕ್ಕಲನಿಗೆ 'ಗೆರಿಲ್ಲಾ ವಾರ್' ಅನ್ನೋ ಸಿನಿಮಾ ನಿರ್ದೇಶಿಸಸಲು ಅವಕಾಶ ಕೊಡಿಸಿದ್ದಾರೆ!




ಓಮಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಖಡಕ್ಕಾಗಿ ಡೈರೆಕ್ಷನ್ ಮಾಡಿದರೆ ಗೆರಿಲ್ಲಾ ವಾರ್ ಸೂಪರ್ ಹಿಟ್ ಆಗಿ ಮತ್ತೆ ಟಾಪ್ ಡೈರೆಕ್ಟರ್ ಆಗಬಹುದು. ಹಾಗಾದರೆ ನಿಜಕ್ಕೂ ಸಂತೋಷವಾಗುತ್ತದೆ. ನೀವು ಈವತ್ತಿಗೂ ಟಿವಿ ಯಲ್ಲಿ 'ಎ ಕೆ - 47', 'ಸಿಂಹದ ಮರಿ' ಬಂದ್ರೆ ನೋಡಿ... ಮತ್ತೆ ಮತ್ತೆ ನೋಡಬೇಕು ಅನ್ನಿಸದಿದ್ದರೆ ಕೇಳಿ! ಅಂಥ ಓಂ ಈಗೇನಾಗಿ ಹೋದರೋ ಅಂತ ಬೇಜಾರ್ ಆಗುತ್ತದೆ. ಗೆರಿಲ್ಲಾ ವಾರ್ ಗೆಲ್ಲಲಿ... ಓಂ ಮತ್ತೆ ಮಿಂಚಲಿ ಎಂದು ಹಾರೈಸೋಣ. ☯

# 'ಎಐ' ಬಂತು... ರಚ್ಚು ಮದುವೆ ಆಯ್ತು!



ಈ ಫೋಟೋ ನೋಡಿದಾಕ್ಷಣ ನಿಮಗೇನನ್ನಿಸುತ್ತದೆ ಹೇಳಿ... ರಚ್ಚು ಈಗ ಗೃಹಿಣಿ ಅಂತ ತಾನೇ. ಅರೆ, ರಚ್ಚು ಹೇಳದೆ ಕೇಳದೆ ಹೀಗೇಕೆ ಗುಟ್ಟು ಗುಟ್ಟಾಗಿ ಮದುವೆ ಆಗಿದ್ದಾಳೆ? ಅಂತಲೂ ಅಂದುಕೊಳ್ಳುತ್ತೀರಿ! ಇಂಥ ಮಾಂಸದ ಖನಿಯ ಮದುವೆಯಾಗಿರೋ ಅದೃಷ್ಟವಂತ ಯಾರಪ್ಪ... ಅಂತಲೂ ಅಂದುಕೊಳ್ಳುತ್ತಾರೆ, ಕೆಲವರು! ನಿಜ ಏನು ಅಂದ್ರೆ, ರಚ್ಚು ಮದುವೆ ಆಗಿರೋ ಫೋಟೋ ಅಲ್ಲಾ ಇದು. ಯಾವನೋ ಕಿಲಾಡಿ ಎ ಐ ತಂತ್ರಜ್ಞಾನ ಬಳಸಿಕೊಂಡು ರಚ್ಚುಗೆ ಡಬಲ್ 'ತಾಳಿ' ಪೋಣಿಸಿಬಿಟ್ಟಿದ್ದಾನೆ! ಇದರಿಂದ ಅವನಿಗೇನು ಖುಶಿಯೋ...

ಸದ್ಯ, ಈ ಫೋಟೋವನ್ನ ಜೈಲಿನಲ್ಲಿರೋ 'ಡೆವಿಲ್' ನೋಡಿದಂತಿಲ್ಲ! ಅದು ನೋಡಿದ್ರೆ ಅದರದ್ದೇ ಸ್ಟೈಲ್‌ನಲ್ಲಿ ಕಾರಿಕೊಂಡು, ಹೇಳದೆ ಕೇಳದೆ ಮದ್ವೆ ಆಗಿದ್ದೀಯಲ್ಲೇ, ನಮ್ಮುತ್ರ ಏನು ಮುಯ್ಯಿಗೆ ಗತಿ ಇರಲಿಲ್ವಾ ಅಂದ್ರೂ ಅನ್ಬೌದು....!! ☯

Vol. 41 No. 16 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com